ಕರ್ನಾಟಕ ವಿಧಾನ ಪರಿಷತ್ತು

2016-2017ನೇ ಸಾಲಿನ
ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ

ವಿಶೇಷ ವರದಿ – II

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
ಸಂಬಂಧಪಟ್ಟ ಭರವಸೆ ಸಂಖ್ಯೆ: 5424/2014 –
"ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪಿಸುವ ಬಗ್ಗೆ"



ಮಾನ್ಯ ಸಭಾಪತಿಯವರಿಗೆ ಸಲ್ಲಿಸಿದ ದಿನಾಂಕ : 02–05–2018
ವಿಧಾನ ಪರಿಷತ್ತಿಗೆ ಸಲ್ಲಿಸಿದ ದಿನಾಂಕ: 06-07-2018

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಪ್ರಶ್ನೆಗಳ ಶಾಖೆ
ವಿಧಾನಸೌಧ, ಬೆಂಗಳೂರು – 560 001.

ಕರ್ನಾಟಕ ವಿಧಾನ ಪರಿಷತ್ತು

2016–2017ನೇ ಸಾಲಿನ

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ

ವಿಶೇಷ ವರದಿ –II

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಂಬಂಧಪಟ್ಟ ಭರವಸೆ ಸಂಖ್ಯೆ: 5424/2014 – "ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪಿಸುವ ಬಗ್ಗೆ"

ಮಾನ್ಯ ಸಭಾಪತಿಯವರಿಗೆ ಸಲ್ಲಿಸಿದ ದಿನಾಂಕ:02–05–2018

ವಿಧಾನ ಪರಿಷತ್ತಿಗೆ ಸಲ್ಲಿಸಿದ ದಿನಾಂಕ: 06 - 07 - 2018

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಪ್ರಶ್ನೆಗಳ ಶಾಖೆ
ವಿಧಾನಸೌಧ, ಬೆಂಗಳೂರು–560001

ವಿಷಯ ಸೂಚಿ

ಕ್ರಮ ಸಂಖ್ಯೆ	ವಿಷಯಾನುಕ್ರಮಣಿಕೆ	ಪುಟ ಸಂಖ್ಯೆ
01	ಸಮಿತಿಯ ರಚನೆ	i
02	ಮುನ್ನುಡಿ	i-iii
03	ವರದಿ	1–16
04	ಅನುಬಂಧ (I ರಿಂದ V ರವರೆಗೆ)	17–124

ಸಮಿತಿಯ ರಚನೆ

2016–2017ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ
ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ.

ಅಧ್ಯಕ್ಷರು
ಶ್ರೀ ಬಸವರಾಜ ಎಸ್. ಹೊರಟ್ಟಿ

ಸದಸ್ಯರುಗಳು

ಶ್ರೀಯುತರುಗಳಾದ:–

01.	ಕೆ.ಸಿ.ಕೊಂಡಯ್ಯ	ಸದಸ್ಯರು, ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ
02.	ಬಸವರಾಜ ಪಾಟೀಲ್ ಇಟಗಿ	____"____
03.	ಕೆ.ಟಿ.ಶ್ರೀಕಂಠೇಗೌಡ	____"____
04.	ಭಾನುಪ್ರಕಾಶ	____"____
05.	ರಘುನಾಥರಾವ್ ಮಲ್ಕಾಪೂರೆ	____"____
06.	ಶರಣಪ್ಪ ಮಟ್ಟೂರು	____"____
07.	ಟಿ.ಎ.ಶರವಣ	____"____
08.	ಬಿ.ಎಸ್.ಸುರೇಶ್	____"____

ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿಗಳು

ಶ್ರೀಯುತರುಗಳಾದ:–

01.	ಕೆ.ಆರ್.ಮಹಾಲಕ್ಷ್ಮಿ	ಕಾರ್ಯದರ್ಶಿ(ಪ್ರ)
02.	ಎಸ್.ನಿರ್ಮಲ	ಜಂಟಿ ಕಾರ್ಯದರ್ಶಿ(ಪ್ರ)
03.	ಮೋಹನ್ ಕೆ. ಮುಗಳಿ	ಅಧೀನ ಕಾರ್ಯದರ್ಶಿ

ಮುನ್ನುಡಿ

122ನೇ ಅಧಿವೇಶನದ ದಿನಾಂಕ: 25.11.2013ರ ಉಪವೇಶನದಲ್ಲಿಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧ ಅವರು, ಗಮನ ಸೆಳೆಯುವ ಸೂಚನೆ ಮೂಲಕ, ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ಅಕ್ರಮವಾಗಿ ಆರಣ್ಯ ಒತ್ತುವರಿ ಹಾಗೂ ಕಲ್ಲುಗಣಿಗಾರಿಕೆಯಿಂದ ಪರಿಸರಕ್ಕೆ ಧಕ್ಕೆಯಾಗುತ್ತಿರುವುದಲ್ಲದೆ ಅಲ್ಲಿನ ವನ್ಯಜೀವಿಗಳು ವಿನಾಶದ ಅಂಚಿಗೆ ತಲುಪುತ್ತಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿರವರು ಈ ಎಲ್ಲಾ ಅಕ್ರಮಗಳನ್ನು ತಡೆಯಲು ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮವನ್ನಾಗಿ ಮಾಡಬೇಕೆಂದು ಒತ್ತಾಯಿಸಿರುತ್ತಾರೆ.

ಇದಲ್ಲದೆ 132ನೇ ಅಧಿವೇಶನದ ದಿನಾಂಕ: 23.11.2016ರ ಉಪವೇಶನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ ಅವರು ಚುಕ್ಕೆಗುರುತಿಲ್ಲದ ಪ್ರಶ್ನೆ 121ರ ಮೂಲಕ ಹಾಗೂ ದಿನಾಂಕ:29.11.2016ರಂದು ಶೂನ್ಯವೇಳೆಯಲ್ಲಿ ಸರ್ಕಾರವು ಕಪ್ಪತ್ತಗುಡ್ಡ ಮೀಸಲು ಆರಣ್ಯ ಪ್ರದೇಶವನ್ನು ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶವನ್ನಾಗಿ ಅಧಿಸೂಚನೆ ಸಂಖ್ಯೆ:ಎಫ್ಇಇ:291:ಎಫ್ಡಬ್ಲ್ಯೂಎಲ್:2015, ದಿನಾಂಕ:19.12.2015ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಸೆಕ್ಷನ್ 36(ಎ)ರ ಪ್ರಕಾರ " ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶವನ್ನಾಗಿ ಘೋಷಿಸಿ ನಂತರ ಅಧಿಸೂಚನೆ ಸಂಖ್ಯೆ: ಸಂಖ್ಯೆ:ಎಫ್ಇಇ:291:ಎಫ್ಡಬ್ಲ್ಯೂಎಲ್:2015 ದಿನಾಂಕ:04/11/2016ರಂದು ಹಿಂಪಡೆಯಲಾಗಿರುತ್ತದೆ. ಈ ಹಿಂಪಡಿಯುವಿಕೆಯ ಪ್ರಕ್ರಿಯೆಯಿಂದ ಅಂದರೆ ಅಕ್ರಮ ಗಣಿಗಾರಿಕೆ ನಡೆದರೆ ಕಪ್ಪತ್ತಗುಡ್ಡದ ಮರಣ ಶಾಸನವನ್ನು ಸರ್ಕಾರವೇ ಬರೆದಂತಾಗುತ್ತದೆ ಎಂದು ಪ್ರಸ್ತಾಪಿಸುತ್ತಾ, ಸದರಿ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಸರ್ಕಾರವನ್ನು ಒತ್ತಾಯಿಸಿರುತ್ತಾರೆ.

ವಿಧಾನ ಪರಿಷತ್ತಿನ 126ನೇ ಅಧಿವೇಶನದ ದಿನಾಂಕ:17.12.2014ರಂದು ನಡೆದ ಉಪವೇಶನದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1022/2014 "ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪಿಸುವ ಬಗ್ಗೆ" ಕೇಳಿದ ಪ್ರಶ್ನೆಗೆ ಕಪ್ಪತ್ತಗುಡ್ಡ ಅರಣ್ಯ ಪ್ರದೇಶಗಳನ್ನು ವನ್ಯಜೀವಿ (ಸಂರಕ್ಷಣಾ) ಕಾಯ್ದೆ–1972ರಡಿ ರಕ್ಷಿಸುವ ಮತ್ತು ಸಂರಕ್ಷಿಸುವ ಹಿತದೃಷ್ಟಿಯಿಂದ ಸದರಿ ಅರಣ್ಯ ಪ್ರದೇಶಗಳನ್ನು ಕಪ್ಪತ್ತಗುಡ್ಡ ವನ್ಯಧಾಮವೆಂದು ಘೋಷಣೆ ಮಾಡುವುದು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು ಅರಣ್ಯ ಸಚಿವರು ನೀಡಿದ ಭರವಸೆಯನ್ನಾದರಿಸಿ ಭರವಸೆಗಳ ಸಮಿತಿಯ ಸಭೆಯಲ್ಲಿ ಪರಿಶೀಲನೆಗಾಗಿ ತೆಗೆದುಕೊಳ್ಳಲಾಗಿರುತ್ತದೆ. ಈ ಭರವಸೆಯನ್ನು ಸಮಿತಿಯು ದಿನಾಂಕ: 02.03.2018 ಮತ್ತು 24.03.2018 (ಸ್ಥಳ ವೀಕ್ಷಣೆ) ರಂದು ನಡೆದ ಒಟ್ಟು 02 ಸಮಿತಿ ಸಭೆಗಳಲ್ಲಿ ಸುದೀರ್ಘವಾಗಿ ಚರ್ಚಿಸಿ ಪರಿಶೀಲಿಸಲಾಗಿರುತ್ತದೆ.

ಇಲಾಖಾಧಿಕಾರಿಗಳು ನೀಡಿದ ಉತ್ತರದ ಮೇರೆಗೆ, ದಿನಾಂಕ: 24.03.2018ರಂದು ಸಮಿತಿಯು, ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡು, ಅಲ್ಲಿನ ಪರಿಸರವಾದಿಗಳು, ರೈತರು, ಗ್ರಾಮಸ್ಥರು, ತಾಂಡವಾಸಿಗಳು ಮತ್ತು ಸಂಘ ಸಂಸ್ಥೆಗಳವರ ಹೇಳಿಕೆಯನ್ನು ಪಡೆಯಲಾಗಿರುತ್ತದೆ.

ಗದಗ ಜಿಲ್ಲೆಯ ಕಪ್ಪತ್ತಗುಡ್ಡ ಅರಣ್ಯ ಪ್ರದೇಶಗಳನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಸೆಕ್ಷನ್–36ಎ ಪ್ರಕಾರ "ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ" ಎಂದು ಘೋಷಿಸಿರುವುದನ್ನು ಅನುಷ್ಠಾನಗೊಳಿಸುವ

ದಿಶೆಯಲ್ಲಿ ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶದ ವ್ಯವಸ್ಥಾಪನಾ ಸಮಿತಿ ರಚನೆಗೆ ಕೂಡಲೇ ಪ್ರಕ್ರಿಯೆಗಳನ್ನು ಪ್ರಾರಂಭಿಸಿ ವ್ಯವಸ್ಥಾಪನಾ ಸಮಿತಿಯ ರಚನೆಯನ್ನು ಮಾಡಬೇಕೆಂದು ಶಿಫಾರಸ್ಸು ಮಾಡುತ್ತದೆ.

ದಿನಾಂಕ:10.04.2018ಮತ್ತು 24.04.2018 ರಂದು ನಡೆದ ಸಮಿತಿ ಸಭೆಗಳಲ್ಲಿ ಕರಡು ವರದಿಯನ್ನು ಪರಿಶೀಲಿಸಿ ಅಂಗೀಕರಿಸಿರುತ್ತದೆ.

ಸಮಿತಿಯ ಸಭೆಗಳಿಗೆ ಹಾಜರಾಗಿ ಸಮಿತಿಯು ಬಯಸಿದಂತಹ ಅವಶ್ಯಕ ಮಾಹಿತಿಗಳನ್ನು ಒದಗಿಸಿದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖಾಧಿಕಾರಿಗಳಿಗೆ ಹಾಗೂ ದಿನಾಂಕ: 24.03.2018ರಂದು ಸಮಿತಿಯು, ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಸಮಿತಿಗೆ ಮಾಹಿತಿ ನೀಡಿದ ಅಲ್ಲಿನ ಪರಿಸರವಾದಿಗಳು, ರೈತರು, ಗ್ರಾಮಸ್ಥರು, ತಾಂಡವಾಸಿಗಳು ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ಮತ್ತು ವಿಧಾನ ಪರಿಷತ್ತಿನ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಸಮಿತಿಯು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ಬೆಂಗಳೂರು
ದಿನಾಂಕ:24.042018

ಬಸವರಾಜ ಎಸ್. ಹೊರಟ್ಟಿ
ಅಧ್ಯಕ್ಷರು
ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ

ವರದಿ

122ನೇ ಅಧಿವೇಶನದ ದಿನಾಂಕ:25.11.2013ರ ಉಪವೇಶನದಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ತಾರಾಅನೂರಾಧ ಅವರು ಗಮನ ಸೆಳೆಯುವ ಸೂಚನೆ ಮೂಲಕ, ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ಅಕ್ರಮವಾಗಿ ಆರಣ್ಯ ಒತ್ತುವರಿ ಹಾಗೂ ಕಲ್ಲುಗಣಿಗಾರಿಕೆಯಿಂದ ಪರಿಸರಕ್ಕೆ ಧಕ್ಕೆಯಾಗುತ್ತಿರುವುದಲ್ಲದೆ ಅಲ್ಲಿನ ವನ್ಯಜೀವಿಗಳು ವಿನಾಶದ ಅಂಚಿಗೆ ತಲುಪುತ್ತಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿರವರು ಈ ಎಲ್ಲಾ ಅಕ್ರಮಗಳನ್ನು ತಡೆಯಲು ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮವನ್ನಾಗಿ ಮಾಡಬೇಕೆಂದು ಒತ್ತಾಯಿಸಿರುತ್ತಾರೆ. (ಅನುಬಂಧ–1)

ಕಪ್ಪತ್ತಗುಡ್ಡದಲ್ಲಿ ಅಕ್ರಮ ಗಣಿಗಾರಿಕೆ ಆಗುವುದಕ್ಕೆ ಸರ್ಕಾರವು ಯಾವ ಸಂದರ್ಭದಲ್ಲಿಯೂ ಬಿಡುವುದಿಲ್ಲವೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ನೀಡಿದ ಭರವಸೆ ಮೇರೆಗೆ, ದಿನಾಂಕ:13.01.2017ರಂದು ನಡೆದ ಭರವಸೆಗಳ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ ಗದಗ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಕಪ್ಪತ್ತಗುಡ್ಡದಲ್ಲಿ ಕಳೆದ ಮೂರು ವರ್ಷಗಳಿಂದ ಯಾವುದೇ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದಿಲ್ಲ. ಈ ಬಗ್ಗೆ ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕಾಗಿ ಖನಿಜ ಲಭ್ಯವಿರುವ ಪ್ರದೇಶಗಳ ರಸ್ತೆಗಳನ್ನೆಲ್ಲಾ ಕಂದಕ ಅಗೆದು ಮಾರ್ಗದ ಸಂರ್ಪಕವನ್ನು ಕಡಿತಗೊಳಿಸಲಾಗಿದೆ. ಗಣಿಗಾರಿಕೆ ಆಗದಂತೆ ತಡೆಗಟ್ಟಲು ಗದಗ ವಿಭಾಗದ ವ್ಯಾಪ್ತಿಯಲ್ಲಿ ಮೂರು ರಕ್ಷಣಾ ಶಿಬಿರಗಳನ್ನು 1)ಪಾಪನಾಸಿ 2) ಸಿಂಗಟರಾಯನ ಕೆರೆ 3) ಹಿರೇವಡ್ಡಟ್ಟಿಗಳಲ್ಲಿ ಸ್ಥಾಪಿಸಿ ಹಗಲು ರಾತ್ರಿ ಕಾಯಲು ವಾಚರ್‌ಗಳನ್ನು ನೇಮಿಸಲಾಗಿದೆ. ಅವರೊಂದಿಗೆ ಇಲಾಖಾ ಸಿಬ್ಬಂದಿಗಳು ಕಾರ್ಯ ಶಿಬಿರಗಳ ಮೇಲ್ವಿಚಾರಣೆ ಹಾಗೂ ರಾತ್ರಿ ಗಸ್ತು ಕಾರ್ಯ ಕೈಗೊಂಡು ಅಕ್ರಮ ಗಣಿಗಾರಿಕೆ ನಡೆಯದಂತೆ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.

ಇದಲ್ಲದೆ 132ನೇ ಅಧಿವೇಶನದ ದಿನಾಂಕ: 23.11.2016ರ ಉಪವೇಶನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ ಅವರು ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 121ರ ಮೂಲಕ ಹಾಗೂ ದಿನಾಂಕ:29.11.2016ರಂದು ಶೂನ್ಯವೇಳೆಯಲ್ಲಿ ಸರ್ಕಾರವು ಕಪ್ಪತ್ತಗುಡ್ಡ ಮೀಸಲು ಆರಣ್ಯ ಪ್ರದೇಶವನ್ನು ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶವನ್ನಾಗಿ ಅಧಿಸೂಚನೆ ಸಂಖ್ಯೆ:ಎಫ್‌ಇಇ:291:ಎಫ್‌ಡಬ್ಲ್ಯೂಎಲ್:2015, ದಿನಾಂಕ:19.12.2015ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಸೆಕ್ಷನ್ 36(ಎ)ರ ಪ್ರಕಾರ " ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶವನ್ನಾಗಿ ಘೋಷಿಸಿ ನಂತರ ಅಧಿಸೂಚನೆ ಸಂಖ್ಯೆ: ಸಂಖ್ಯೆ: ಎಫ್‌ಇಇ:291:ಎಫ್‌ಡಬ್ಲ್ಯೂಎಲ್:2015, ದಿನಾಂಕ: 04/11/2016ರಂದು ಹಿಂಪಡೆಯಲಾಗಿರುತ್ತದೆ. ಈ ಹಿಂಪಡಿಯುವಿಕೆಯ ಪ್ರಕ್ರಿಯೆಯಿಂದ ಅಂದರೆ ಅಕ್ರಮ ಗಣಿಗಾರಿಕೆ ನಡೆದರೆ ಕಪ್ಪತ್ತಗುಡ್ಡದ ಮರಣ ಶಾಸನವನ್ನು ಸರ್ಕಾರವೇ ಬರೆದಂತಾಗುತ್ತದೆ ಎಂದು ಪ್ರಸ್ತಾಪಿಸುತ್ತಾ, ಸದರಿ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಸರ್ಕಾರವನ್ನು ಒತ್ತಾಯಿಸಿರುತ್ತಾರೆ.(ಅನುಬಂಧ–2)

ಮೀಸಲು ಅರಣ್ಯ ಪ್ರದೇಶವೆಂದು ಘೋಷಣೆ ಮಾಡಬೇಕಾದರೆ ಜನಗಳ ಅಭಿಪ್ರಾಯ ಬೇಕು. ಅಲ್ಲಿನ ಜನಗಳ ಅಭಿಪ್ರಾಯವನ್ನು ತೆಗೆದುಕೊಂಡು ಮೀಸಲು ಅರಣ್ಯ ಎಂಬುದಾಗಿ ಮತ್ತೆ ನಾವು ಆದೇಶವನ್ನು ಮಾಡುತ್ತೇವೆ ಎಂದು ಅರಣ್ಯ ಸಚಿವರು ಭರವಸೆಯನ್ನು ನೀಡಿರುತ್ತಾರೆ.

ವಿಧಾನ ಪರಿಷತ್ತಿನ 126ನೇ ಅಧಿವೇಶನದ ದಿನಾಂಕ:17.12.2014ರಂದು ನಡೆದ ಉಪವೇಶನದಲ್ಲಿ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1022/2014 "ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪಿಸುವ ಬಗ್ಗೆ" ಕೇಳಿದ ಪ್ರಶ್ನೆಗೆ

ಕಪ್ಪತ್ತಗುಡ್ಡ ಅರಣ್ಯ ಪ್ರದೇಶಗಳನ್ನು ವನ್ಯಜೀವಿ (ಸಂರಕ್ಷಣಾ) ಕಾಯ್ದೆ–1972ರಡಿ ರಕ್ಷಿಸುವ ಮತ್ತು ಸಂರಕ್ಷಿಸುವ ಹಿತದೃಷ್ಟಿಯಿಂದ ಸದರಿ ಅರಣ್ಯ ಪ್ರದೇಶಗಳನ್ನು ಕಪ್ಪತ್ತಗುಡ್ಡ ವನ್ಯಧಾಮವೆಂದು ಘೋಷಣೆ ಮಾಡುವುದು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು ಅರಣ್ಯ ಸಚಿವರು ನೀಡಿದ ಭರವಸೆಯನ್ನಾಧರಿಸಿ ಭರವಸೆಗಳ ಸಮಿತಿಯ ಸಭೆಯಲ್ಲಿ ಪರಿಶೀಲನೆಗಾಗಿ ತೆಗೆದುಕೊಳ್ಳಲಾಗಿರುತ್ತದೆ. (ಅನುಬಂಧ–3) ಈ ಭರವಸೆಯನ್ನು ಸಮಿತಿಯು ದಿನಾಂಕ: 02.03.2018 ಮತ್ತು 24.03.2018 (ಸ್ಥಳ ವೀಕ್ಷಣೆ) ರಂದು ನಡೆದ ಒಟ್ಟು 02 ಸಮಿತಿ ಸಭೆಗಳಲ್ಲಿ ಸುದೀರ್ಘವಾಗಿ ಚರ್ಚಿಸಿ ಪರಿಶೀಲಿಸಲಾಗಿರುತ್ತದೆ.

ಕಪ್ಪತ್ತಗುಡ್ಡದ ರಕ್ಷಣೆಗಾಗಿ ಶ್ರೀ ಅನಿಲ್ ಕುಂಬ್ಳೆ ಅವರ ವರದಿಯನ್ನಾಧರಿಸಿ, ಸರ್ಕಾರವು ರಾಜ್ಯ ವನ್ಯಜೀವಿ ಮಂಡಳಿಯ ಅನುಮೋದನೆಯೊಂದಿಗೆ ಅಧಿಸೂಚನೆ ಸಂಖ್ಯೆ:ಎಫ್ಇಇ:291:ಎಫ್‌ಡಬ್ಲ್ಯೂಎಲ್:2015, ದಿನಾಂಕ:19.12.2015ರಲ್ಲಿ ಕಪ್ಪತ್ತಗುಡ್ಡ ಮೀಸಲು ಅರಣ್ಯದ 17872.248 ಹೆಕ್ಟರ್ ಪ್ರದೇಶವನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಸೆಕ್ಷನ್ 36(ಎ)ರ ಪ್ರಕಾರ **"ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ"**ವನ್ನಾಗಿ ಘೋಷಿಸಿ ನಂತರ 31.08.2016ರಂದು ನಡೆದ 9ನೇ ರಾಜ್ಯ ವನ್ಯಜೀವಿ ಮಂಡಳಿಯ ಚರ್ಚೆಯ ನಂತರ ದಿನಾಂಕ: 19.12.2015ರಂದು "ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ"ವನ್ನಾಗಿ ಘೋಷಿಸಿರುವ ಅಧಿಸೂಚನೆಯನ್ನು ಸರ್ಕಾರವು ದಿನಾಂಕ: 04/11/2016ರಂದು ಹಿಂಪಡೆಯಲಾಗಿರುತ್ತದೆ.

ತದನಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ಇವರ ಪತ್ರ ಸಂಖ್ಯೆ: PCCF(WL)/DCR-26/2010-11, Dt:19.11.2016ರ ಆದೇಶದಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಧಾರವಾಡ ವೃತ್ತ, ಧಾರವಾಡ, ಇವರ ಪತ್ರ ಸಂಖ್ಯೆ: ಬಿ2/ವಜಿ/ಕಪ್ಪತ್ತಗುಡ್ಡ/ಸಿಆರ್–43/2015–16/1720, ದಿನಾಂಕ:21.11.2016ರಂತೆ ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ ಎಂದು ಅಧಿಸೂಚನೆಯನ್ನು ರದ್ದುಪಡಿಸಿರುವುದರ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಆದೇಶಿಸಿದ ರೀತ್ಯಾ, 16 ಗ್ರಾಮ ಪಂಚಾಯತಿಗಳಲ್ಲಿ ಸಭೆ ನಡೆಸಿ ನಿರ್ಣಯ ಕೈಗೊಂಡಿರುತ್ತದೆ. ದಿನಾಂಕ: 16.01.2017ರಂದು ಮುಂಡರಗಿ ತಾಲ್ಲೂಕು ವ್ಯಾಪ್ತಿಯ ಡಂಬಳದ, ಶ್ರೀ ತೋಂಟದಾರ್ಯ ಕಲಾಭವನದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರ ಹಾಗೂ ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಏರ್ಪಡಿಸಿ ಸದರಿ ಸಭೆಯ ನಡವಳಿಯನ್ನು ಜಿಲ್ಲಾಧಿಕಾರಿಗಳು ಅನುಮೋದಿಸಿ ದಿನಾಂಕ:28.01.2017ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಅದರಂತೆ ದಿನಾಂಕ: 20.02.2017ರಂದು ರಾಜ್ಯ ವನ್ಯಜೀವಿ ಮಂಡಳಿಯ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಸೆಕ್ಷನ್–36ಎ ಪ್ರಕಾರ "ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ" ಎಂದು ಘೋಷಿಸುವಂತೆ ಮಾಡಿದ ಶಿಫಾರಸ್ಸಿನನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: FEE-291/FWL/2016, Dated:11.04.2017ರಂದು **"ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ" ಎಂದು ಆದೇಶವನ್ನು ಹೊರಡಿಸಲಾಗಿರುವುದನ್ನು** ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದೆ.

ದಿನಾಂಕ: 24.03.2018ರಂದು ಸಮಿತಿಯು, ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡು, ಅಲ್ಲಿನ ಪರಿಸರವಾದಿಗಳು, ರೈತರು, ಗ್ರಾಮಸ್ಥರು, ತಾಂಡವಾಸಿಗಳು ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಮಿತಿಗೆ ಸಲ್ಲಿಸಿದ್ದು, ಸದರಿ ಮನವಿ ಪತ್ರಗಳನ್ನು **ಅನುಬಂಧ–4ರಲ್ಲಿ** ತೋರಿಸಲಾಗಿದೆ.

ಕಪ್ಪತ್ತಗುಡ್ಡದ ಬಗ್ಗೆ ಸಂಕ್ಷಿಪ್ತ ಮಾಹಿತಿ

ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಪ್ರಸಿದ್ದಿಯನ್ನು ಪಡೆದ ಕಪ್ಪತ್ತಗುಡ್ಡವು ಉತ್ತರ ಕರ್ನಾಟಕದ ಜೀವನಾಡಿಯಾಗಿರುತ್ತದೆ. ಗದಗ ತಾಲ್ಲೂಕಿನ ಬಿಂಕದಕಟ್ಟೆಯಿಂದ ಮುಂಡರಗಿ ತಾಲ್ಲೂಕಿನ ಶಿಂಗಟಾಲೂರ ಕ್ಷೇತ್ರದವರೆಗೆ ಹರಡಿಕೊಂಡಿರುವ ಈ ಕಪ್ಪತ್ತಗುಡ್ಡವು ಒಟ್ಟು 63 ಕಿ.ಮೀ ಉದ್ದವಿರುತ್ತದೆ, ಸಮುದ್ರದ ಮಟ್ಟದಿಂದ 2700 ಅಡಿ ಎತ್ತರದಲ್ಲಿದೆ. ಕೆಂಪು ಮಿಶ್ರಿತ ಮಣ್ಣು ಮತ್ತು ವಿವಿಧ ನಮೂನೆಯ ಬೆಟ್ಟಗಳ ಸಂಗಮವಾಗಿರುವ ಇದು ಪುಣ್ಯ ಪುರುಷರ ತಪೋಭೂಮಿಯಾಗಿ ಹೆಸರು ಮಾಡಿದೆ.ಅಲ್ಲದೆ, ಅನೇಕ ಪ್ರಭೇದಗಳ ಔಷಧೀಯ ಸಸ್ಯ ಪ್ರಭೇದಗಳ ತಾಣವೂ ಸಹ ಆಗಿರುವುದು.

"ಎಪ್ಪತ್ತು ಗಿರಿಗಿಂತ ಕಪ್ಪತ್ತಗಿರಿ ನೋಡು" ಕಣ್ಣಿದ್ದವರು ಕನಕಗಿರಿ ನೋಡಬೇಕು ಕಾಲು ಇದ್ದವರು ಕಪ್ಪತ್ತಗಿರಿ ನೋಡಬೇಕು ಎಂದು ಹೇಳುವ ಯುಕ್ತಿಗಳು ಕಪ್ಪತ್ತಗುಡ್ಡದ ಹಿರಿಮೆಯನ್ನು ಸಾರಿ ಸಾರಿ ಹೇಳುತ್ತವೆ. ಕಪ್ಪತ್ತಗುಡ್ಡದ ಮಣ್ಣಿನಲ್ಲಿ ಚಿನ್ನವಿದೆ, ಸಸ್ಯಗಳಲ್ಲಿ ಔಷಧೀಯ ಗುಣವಿದೆ.ಗಾಳಿಯಲ್ಲಿ ವಿದ್ಯುತ್ ಇದೆ.ಈ ಪರಿಸರದಲ್ಲಿ ಮಹಾ ತಪಸ್ವಿಗಳ ಶಕ್ತಿ ಇದೆ. ಇದು "ದಕ್ಷಿಣದ ಕಾಶಿ ಔಷಧಿ ಸಸ್ಯಗಳ ರಾಶಿ" ಎಂದು ಕರೆಯಿಸಿಕೊಳ್ಳುವ ಕಪ್ಪತ್ತಗುಡ್ಡ ಔಷಧಿ ಸಸ್ಯಗಳ ಖಜಾನೆಯಾಗಿದೆ.

ಕಪ್ಪತ್ತಗುಡ್ಡದಲ್ಲಿ 423ಕ್ಕೂ ಹೆಚ್ಚು ವಿವಿಧ ಜಾತಿಯ ಔಷಧೀಯ ಸಸ್ಯಗಳನ್ನು ಗುರುತಿಲಾಗಿದೆ. ಈ ಭೂಮಿಯಲ್ಲಿ ಬೆಳೆದಿರುವಂತಹ ಔಷಧೀಯ ಸಸ್ಯಗಳಲ್ಲಿ ವಿಶೇಷವಾಗಿ ಅಂಟುವಾಳ, ತುಳಸಿ, ನೆಲಬೇವು, ಲೋಳೆಸರ, ಕಣಗಲಿ, ಅಡುಸೋಗೆ, ಎಕ್ಕೆ, ಉತ್ತರಾಣಿ, ದತ್ತೂರಾ, ಮುತ್ತಗ, ಶತಾವರಿ, ಗುಲಗಂಜಿ, ಬ್ರಾಹ್ಮಿ, ಅಶ್ವಗಂಧ, ಅಮೃತಬಳ್ಳಿ ಇತ್ಯಾದಿಯಾಗಿ ಹೆಚ್ಚು ಪ್ರಭೇದಗಳ ಸಸ್ಯಗಳು ಇಲ್ಲಿ ದೊರೆಯುತ್ತವೆ. ಈ ಸಸ್ಯಗಳು ಅತ್ಯಂತ ಪರಿಣಾಮಕಾರಿ ಔಷಧೀಯ ಗುಣಗಳನ್ನು ಹೊಂದಿವೆ. ಈ ಆರಣ್ಯ ಪ್ರದೇಶದಲ್ಲಿರುವ ಮಣ್ಣಿನಲ್ಲಿ ಕಬ್ಬಿಣದ ಅದಿರಿನಂಶವು ಶೇ 60 ರಿಂದ 63ರಷ್ಟು ಇದ್ದು ಅದರ ಅದಿರಾದ ಹೆಮಟೈಟ್, ಲೈಮೋಟೈಟ್, ಸೈಡರೈಟು ರೂಪದಲ್ಲಿದೆ.ಇದರ ಜೊತೆಗೆ ಇಲ್ಲಿ ಬಂಗಾರ, ಮ್ಯಾಂಗನೀಸ್, ತಾಮ್ರ, ಕ್ಯಾಲ್ಸಿಯಂ ಮುಂತಾದ 18 ಖನಿಜಗಳು ಹೇರಳವಾಗಿರುತ್ತದೆ.ಇಂತಹ ಖನಿಜಭರಿತ ಭೂಮಿಯಲ್ಲಿ ಬೆಳೆದ ಔಷಧಿಯ ಸಸ್ಯಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂದು ವೈಜ್ಞಾನಿಕ ಸಂಶೋಧನೆಗಳು ಹೇಳುತ್ತವೆ. ಈ ಹಿನ್ನಲೆಯಲ್ಲಿ ಇಲ್ಲಿಯ ಔಷಧೀಯ ಸಸ್ಯಗಳಿಗೆ ಹೊರ ರಾಜ್ಯಗಳಿಂದಲೂ ಸಹ ಹೆಚ್ಚಿನ ಬೇಡಿಕೆ ಇರುತ್ತದೆ.ಪುಣೆ, ಬೆಂಗಳೂರು, ಹೈದರಾಬಾದ್ ಹೀಗೆ ದೇಶಾದ್ಯಂತ ಇರುವ ಆಯುರ್ವೇದ ತಜ್ಞರು ಇಲ್ಲಿಗೆ ಬಂದು ಸಸ್ಯಗಳನ್ನು ತೆಗೆದುಕೊಂಡು ಹೋಗುತ್ತಾರೆ.

ಕಪ್ಪತ್ತಗುಡ್ಡದಲ್ಲಿ 30ಕ್ಕೂ ಹೆಚ್ಚು ಕೆರೆಗಳು, ಹಳ್ಳಗಳು, ಝರಿಗಳು, ಕೊಳಗಳು ಮತ್ತು ಪಡಿಗಳಿವೆ, ಇವುಗಳು ಕಪ್ಪತ್ತಗುಡ್ಡದಲ್ಲಿರುವ ಪ್ರಾಣಿ–ಪಕ್ಷಿಗಳಿಗೆ ನೀರಿನ ದಾಹವನ್ನು ಹಿಂಗಿಸುತ್ತಿವೆ. ಇಲ್ಲಿ ಆಲದ ಕೆರೆ, ಬಂಗಾರಕೊಳ್ಳ, ಮಂಜಿನ ಡೋಣಿ, ಕಾರಿಸಿದ್ದಪ್ಪನ ಪಡಿ, ಹಗಲಬತ್ತಿಯ ಕೆರೆ ಇನ್ನೂ ಮುಂತಾದ ಕೆರೆಗಳು ಇವೆ. ಈ ಅರಣ್ಯದಲ್ಲಿ ಚಿರತೆ, ಕೃಷ್ಣಮೃಗ, ನರಿ, ತೋಳ, ಕಾಡುಹಂದಿ, ಮುಳ್ಳುಹಂದಿ, ಕಾಡುಬೆಕ್ಕು, ಚುಕ್ಕೆ ಜಿಂಕೆ, ಕಾಡು ಕುರಿ, ಕತ್ತೆ ಕಿರುಬ, ಕರಡಿ, ಮೊಲ ಮುಂತಾದ ಕಾಡುಪ್ರಾಣಿಗಳು, ನವಿಲು, ಹೈನಾ,ಪಾರಿವಾಳ, ಗಿಳಿ, ಗುಬ್ಬಿ, ಕಾಡುಕೋಳಿ, ನೀಲಕಂಠ ಪಕ್ಷಿ ಮುಂತಾದ ಪಕ್ಷಿ ಸಂಕುಲಗಳಿಗೆ ಆಶ್ರಯ ತಾಣವಾಗಿರುತ್ತದೆ.

ಸುಮಾರು 40 ವರ್ಷಗಳ ಹಿಂದೆ ಕಪ್ಪತ್ತಗುಡ್ಡದ ಮೇಲೆ ಮೋಡವಾದರೆ ಮಳೆ ಖಂಡಿತ ಎನ್ನಲಾಗುತ್ತಿತ್ತು, ಅಂದರೆ, ಅಷ್ಟು ದಟ್ಟವಾದ ಅರಣ್ಯ ಇಲ್ಲಿತ್ತು.ಕಪ್ಪತ್ತಗುಡ್ಡದ ಮೇಲೆ ಮೋಡ ಬಂದರೆ ಸಾಕು ಇಲ್ಲಿಯ ರೈತರು ಹೊಲದಲ್ಲಿನ ಕೆಲಸವನ್ನು ಬಿಟ್ಟು ಮನೆಯನ್ನು ಸೇರಿಕೊಳ್ಳುತ್ತಿದ್ದರು, ಅಂದರೆ ಮಳೆ ಖಂಡಿತ ಅನ್ನುವಷ್ಟು ಖ್ಯಾತಿಯನ್ನು ಹೊಂದಿತ್ತು.ದಾಖಲೆಗಳ ಅನ್ವಯ ಜುಲೈನಿಂದ ಅಕ್ಟೋಬರ್ ಮಧ್ಯ ಭಾಗದವರೆಗೆ ಸರಾಸರಿ 450–600 ಮಿಲಿ ಮೀಟರ್‌ನಷ್ಟು ಮಳೆಯಾಗುತ್ತದೆ ಎಂದು ಅಂದಾಜಿಸಲಾಗಿದೆ.

ದಿನಾಂಕ: 24.03.2018ರಂದು ಸಮಿತಿಯು, ಗದಗ ಜಿಲ್ಲೆಯ ಕಪ್ಪತ್ತಗುಡ್ಡಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಕೈಗೊಂಡ ಸಂದರ್ಭದಲ್ಲಿ ಸಮಿತಿಯ ಮುಂದೆ ಹಾಜರಾಗಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖಾಧಿಕಾರಿಗಳು ಹಾಗೂ ಸ್ಥಳೀಯ ಪರಿಸರವಾದಿಗಳು, ರೈತರು, ಗ್ರಾಮಸ್ಥರು, ತಾಂಡವಾಸಿಗಳು ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳು ನೀಡಿರುವ ಹೇಳಿಕೆಗಳು ಈ ಕೆಳಕಂಡಂತಿದೆ.

ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಇಲಾಖೆ:– ಕಪ್ಪತ್ತಗುಡ್ಡ ಪ್ರದೇಶವನ್ನು ವನ್ಯಜೀವಿಧಾಮ ಎಂದು ಘೋಷಿಸುವಂತಹ ವಿಚಾರ 2006–07ನೇ ಸಾಲಿನಿಂದಲೇ ಪ್ರಾದೇಶಿಕ ಅಧಿಕಾರಿಗಳಿಂದ ಪ್ರಸ್ತಾವನೆ ಬರುತ್ತಲೇ ಇತ್ತು. ಆದರೆ, ಈ ವಿಚಾರ ವನ್ಯ ಜೀವಿ ಮಂಡಳಿ ಮುಂದೆ ಬಂದಂತಹ ಸಮಯದಲ್ಲಿ ವನ್ಯ ಜೀವಿ ಮಂಡಳಿಯ ಅಂದಿನ ಉಪಾಧ್ಯಕ್ಷರಾದ ಶ್ರೀಯುತ ಅನಿಲ್ ಕುಂಬ್ಳೆಯವರ ನೇತೃತ್ವದಲ್ಲಿ ಇಲ್ಲಿಗೆ ಈ ಸಂಬಂಧ ಅಧ್ಯಯನ ಮಾಡಲಿಕ್ಕೆ ಒಂದು ಸಮಿತಿಯನ್ನು ಕಳುಹಿಸಿಕೊಡಲಾಯಿತು. ಈ ಪ್ರದೇಶವನ್ನು ಅಭಯಾರಣ್ಯ ಪ್ರದೇಶವನ್ನಾಗಿ ಮಾಡಲಿಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ಪರಿಶೀಲಿಸಿ ವರದಿಯನ್ನು ಕೊಡಬೇಕೆಂದು ಹೇಳಿದಾಗ ಅವರು ಇಲ್ಲಿಗೆ ಬಂದು ಪರಿಶೀಲಿಸಿದಾಗ ಇದನ್ನು ಅಭಯಾರಣ್ಯ ಪ್ರದೇಶವನ್ನಾಗಿ ಮಾಡುವುದಕ್ಕೆ ಕೆಲವೊಂದು ಅಕ್ಷೇಪಣೆಗಳಿವೆ ಮತ್ತು ಕಾರಣಗಳಿವೆ ಎಂದು ವರದಿಯನ್ನು ಕೊಟ್ಟಿದ್ದಾರೆ.

ಈ ವರದಿಯನ್ನು ಕೊಟ್ಟ ಮೇಲೆ ರಾಜ್ಯ ವನ್ಯ ಜೀವಿ ಮಂಡಳಿಯಲ್ಲಿ ಇದನ್ನು ಅಭಯಾರಣ್ಯ ಪ್ರದೇಶವೆಂದು ಮಾಡಬೇಕೆಂದು ತೀರ್ಮಾನ ಮಾಡಲಾಯಿತು.ನಂತರ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಯಿತು.ಪ್ರಸ್ತಾವನೆ ಬಂದ ಮೇಲೆ ಇಲ್ಲಿ ಅಭಯಾರಣ್ಯ ಮಾಡುವುದರಲ್ಲಿ ಕೆಲವು ಅಡಚಣೆಗಳಿವೆ ಎಂದು ಸರ್ಕಾರದಲ್ಲಿ ಚರ್ಚೆಯಾಗಿ ನಂತರದಲ್ಲಿ ಈ ಒಂದು ಪ್ರಸ್ತಾವನೆಯನ್ನು ಮಾರ್ಪಾಡು ಮಾಡಿ ದಿನಾಂಕ: 19–12–2015 ರಂದು ಅದನ್ನು ಅಭಯಾರಣ್ಯ ಎಂದು ಘೋಷಣೆ ಮಾಡುವ ಬದಲಾಗಿ **ಕಪ್ಪತ್ತ ಗುಡ್ಡ ಮೀಸಲು ಸಂರಕ್ಷಿತ ಪ್ರದೇಶವೆಂದು** ವನ್ಯ ಜೀವಿ ಕಾಯಿದೆಯಡಿಯಲ್ಲಿ ಘೋಷಣೆ ಮಾಡಲಾಯಿತು. ಈ ಮೀಸಲು ಸಂರಕ್ಷಿತ ಪ್ರದೇಶ ಎನ್ನುವುದು ಎರಡು ಮುಖ್ಯ ವನ್ಯ ಜೀವಿ ಅಭಯಾರಣ್ಯ ಧಾಮಗಳಿದ್ದರೆ ಅವುಗಳನ್ನು ಕೊಂಡಿಯಂತೆ ಜೋಡಿಸುವಂತಹ ಪ್ರದೇಶವಾಗಿರಬೇಕು, ಅಥವಾ ಅದು ಸರ್ಕಾರಿ ಭೂಮಿಯಾಗಿರಬೇಕೆನ್ನುವುದು ಆ ಕಾಯಿದೆಯಲ್ಲಿರುವಂತಹ ವಿಷಯವಾಗಿದೆ. ಮತ್ತೆ ಈ ವಿಚಾರವಾಗಿ ಅನೇಕ ಜನ ಪ್ರಸ್ತಾವನೆಗಳನ್ನು ಕೊಟ್ಟು, ಇಲ್ಲಿ ಎರಡು ಅಭಯಾರಣ್ಯ ಧಾಮಗಳು ಕೊಂಡಿಯಂತೆ ಇರುವುದಿಲ್ಲ. ಆದ್ದರಿಂದ ಈ ಪ್ರಸ್ತಾವನೆಯನ್ನು ರದ್ದುಪಡಿಸಬೇಕೆಂದು ಕೋರಿಕೆ ಬಂದಾಗ ಮತ್ತೆ ಈ ಮುಂಚೆ ಅಂದರೆ ದಿನಾಂಕ: 19–12–2015 ರಲ್ಲಿ ಏನು ಅಧಿಸೂಚನೆಯನ್ನು ಹೊರಡಿಸಲಾಗಿತ್ತು, ಆ ಅಧಿಸೂಚನೆಯನ್ನು ದಿನಾಂಕ: 4–11–2016 ರಂದು ಸರ್ಕಾರ ಹಿಂಪಡೆಯಿತು. ಇದು ಒಂದು ಅನಪೇಕ್ಷಿತ ವಿಷಯವೆಂದು ಹೇಳಿ ಸಾರ್ವಜನಿಕರಿಂದ ಅಹವಾಲುಗಳು ಬಂದವು.ಇದನ್ನು **ಸಂರಕ್ಷಿತ ಮೀಸಲು ಅರಣ್ಯ ಪ್ರದೇಶವೆಂದು** ಮಾಡಿರುವುದು ಸರಿಯಿದೆ. ಅದನ್ನು ಮತ್ತೆ ಹಿಂಪಡೆಯುವುದು ಸೂಕ್ತವಲ್ಲವೆಂದು ಜನಾಭಿಪ್ರಾಯಗಳು ಬಂದ ಹಿನ್ನೆಲೆಯಲ್ಲಿ ರದ್ದುಪಡಿಸಿದ್ದನ್ನು ಮತ್ತೆ ಊರ್ಜಿತಗೊಳಿಸಿ **ಕಪ್ಪತ್ತಗುಡ್ಡ ಮೀಸಲು ಸಂರಕ್ಷಿತ ಅರಣ್ಯ ಪ್ರದೇಶವೆಂದು** ಹೇಳಿ ಸರ್ಕಾರ ಘೋಷಣೆ ಮಾಡಲಾಗಿದೆ.

ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ರಾಮಘಡ್ ಮಿನರಲ್ಸ್ ಮತ್ತು ಮೈನಿಂಗ್ ಲಿಮಿಟೆಡ್ ಸಂಸ್ಥೆಯವರಿಂದ 1967 ರಿಂದ 1997ರವರೆಗೆ ಕಪ್ಪತ್ತಗುಡ್ಡದ ಹೃದಯ ಭಾಗದಲ್ಲಿಯೇ ಗಣಿಗಾರಿಕೆ ನಡೆಯುತ್ತಿತ್ತು. ಕೆಲವು ಕಾರಣಗಳಿಂದ ಅಲ್ಲಿ ಗಣಿಗಾರಿಕೆ ನಿಂತು ಹೋಗಿದೆ. ಹೃದಯ ಭಾಗದಲ್ಲಿಯೇ ಗಣಿಗಾರಿಕೆಯನ್ನು ನಡೆಸುವುದನ್ನು ತಡೆಗಟ್ಟಿದರೆ ಪರಿಸರವನ್ನು ಕಾಪಾಡಬಹುದಾಗಿದೆ. ಸಮಿತಿಯು ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ಸಾಕಷ್ಟು ಶ್ರೀಗಂಧದ ಸಸಿಗಳು ಬೆಳೆಯುತ್ತಿರುವ ಬಗ್ಗೆ ಗಮನಿಸಲಾಗಿರುತ್ತದೆ. ಶ್ರೀಗಂಧದ ಸಸಿಯೂ ಸಹ ಔಷಧಿ ಗುಣಗಳನ್ನು ಹೊಂದಿರುವಂತಹ ಸಸ್ಯವಾಗಿದೆ. ಇದರ ಜೊತೆಗೆ ಇನ್ನು ಸಾಕಷ್ಟು ಔಷಧಿ ಗಿಡಗಳು ಇವೆ.

ನಮ್ಮಲ್ಲಿ **"ಸಿರಿ ಚಂದನ ವನ"** ಎನ್ನುವ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿಕೊಂಡಿದ್ದೇವೆ. ಎಲ್ಲಿ ನಾವು ಹೊಸದಾಗಿ ಶ್ರೀಗಂಧದ ಮರಗಳ ನೆಡುತೋಪುಗಳನ್ನು ನಿರ್ಮಾಣ ಮಾಡುತ್ತೇವೆ ಅಥವಾ ಎಲ್ಲಿ ನೈಸರ್ಗಿಕವಾಗಿ ಈ ರೀತಿಯ ಮರಗಳು ಪುನರ್ ಉತ್ಪತ್ತಿಯಾಗುತ್ತಿವೆ, ಅವುಗಳನ್ನು ರಕ್ಷಣೆ ಮಾಡುವಲ್ಲಿ, ಅವುಗಳ ಜಾಗಕ್ಕೆ ಸುಲಭವಾಗಿ ಪ್ರವೇಶ ಮಾಡದ ರೀತಿಯಲ್ಲಿ ಒಂದು ಗಡಿಯನ್ನು ಗುರುತು ಮಾಡಿ, ಅದಕ್ಕೆ ಒಂದು ಚೈನ್ ಲಿಂಕ್ ಮೆಶ್ ಮಾಡುವುದರ ಮೂಲಕ ಅವುಗಳ ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡಲಾಗುತ್ತದೆ.

ಪಕ್ಷಿಗಳಿಂದ ಈ ಸಸ್ಯಗಳ ಬೀಜಗಳು ಎಲ್ಲಾ ಕಡೆ ಹರಡಿಕೊಂಡು ಅದು ತನ್ನಷ್ಟಕ್ಕೆ ತಾನೇ ನೈಸರ್ಗಿಕವಾಗಿ ಬೆಳೆಯುತ್ತವೆ. ಈ ರೀತಿಯಲ್ಲಿ ಎರಡು ಕಡೆ ಯಶಸ್ವಿಯಾಗಿ "ಸಿರಿ ಚಂದನ ವನ" ಬೆಳೆಯುತ್ತಿದೆ.ಅದೇ ರೀತಿಯಾಗಿ ಇಲ್ಲಿಯೂ ಸಹ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ನಾವು ಏನು ಕ್ರಮ ಕೈಗೊಳ್ಳಬೇಕೋ ಆ ರೀತಿಯಲ್ಲಿ ನಾವು ಕ್ರಮ ಕೈಗೊಳ್ಳುತ್ತೇವೆ. ಇದರ ಜೊತೆಗೆ ಉಳಿದೆಲ್ಲಾ ಔಷಧಿ ಸಸ್ಯಗಳನ್ನು ಗುರುತಿಸಿ, ಈ ಭಾಗದಲ್ಲಿರುವ ನಾಟಿ ವೈದ್ಯರುಗಳ ಸಮ್ಮೇಳನಗಳನ್ನು ಮಾಡಿಕೊಂಡು ಅವರುಗಳಿಗೆ ಏನೇನು ಔಷಧಿ ಸಸ್ಯಗಳು ಬೇಕಾಗಿದೆ ಅವುಗಳನ್ನು ರಕ್ಷಣೆ ಮಾಡಬೇಕಾಗುತ್ತದೆ. ಕೆಲವು ಬಾರಿ ಏನಾಗುತ್ತದೆ ಎಂದರೆ ಅರಣ್ಯ ಮೂಲದಿಂದ ಎಲ್ಲಾ ಸಸ್ಯಗಳನ್ನು ತೆಗೆದುಕೊಂಡು ಬಂದು, ಔಷಧಿಗಳನ್ನು ಮಾಡಿದರೆ ಸಸ್ಯ ರಾಶಿಯೇ ಖಾಲಿಯಾಗಿಬಿಡುತ್ತದೆ.ಅಂದರೆ ಇವತ್ತು ಪರಿಸ್ಥಿತಿ ಹಳೆಯ ರೀತಿಯಲ್ಲಿ ಇರುವುದಿಲ್ಲ. ಇಂದು ಗ್ಲೋಬಲ್ ವಿಲೇಜ್ ಎಂದು ಏನು ಕರೆಯುತ್ತೇವೆ, ಇವತ್ತು ಇಲ್ಲಿ ಸಿಗುವಂತಹ ಔಷಧಿ ಸಸ್ಯಗಳು ನಾಳೆ ಸಿಗದೇ ಅಮೇರಿಕಾದವರೆಗೆ ಹೋಗಬೇಕಾಗಬಹುದು. ಆದ್ದರಿಂದ, ಈ ನೈಸರ್ಗಿಕ ಮೂಲಗಳಿಂದ ಸಿಗುವಂತಹ ಔಷಧಿಗಳನ್ನು ನಂಬಿಕೊಂಡು ಕುಳಿತುಕೊಳ್ಳದೇ ಅವುಗಳಿಗೆ Medicinal Plants Demonstration Plot ಎಂದು ಮಾಡಿ, ಅವುಗಳನ್ನು ಆರ್ಟಿಫಿಷಿಯಲ್ ಕಂಡಿಷನ್‌ನಲ್ಲಿ ನಮ್ಮ ಹೊಲಗಳಲ್ಲಿ ಹೇಗೆ ಬೆಳೆಯಬಹುದು, ಆ ರೀತಿಯಲ್ಲಿ ಬೆಳೆದರೆ ಎಷ್ಟು ಪ್ರಮಾಣದಲ್ಲಿ ರೈತರಿಗೆ ಹಣ ಸಿಗಬಹುದು ಎನ್ನುವುದನ್ನು ತೋರಿಸಿಕೊಡಬೇಕಾಗಿದೆ. ಅಂದರೆ, ಆ ಸಸಿಗಳನ್ನು ರೈತರಿಗೆ ಒದಗಿಸಿಕೊಡಬೇಕಾಗುತ್ತದೆ. ರೈತರೇ medicinal plantsನ್ನು ಬೆಳೆದು ಅವರೇ ಸಂಬಂಧಪಟ್ಟ ಕಂಪನಿಗಳೊಂದಿಗೆ tie-up ಮಾಡಿಕೊಂಡು ಅವರುಗಳಿಗೆ ಸರಬರಾಜು ಮಾಡುವುದರಿಂದ ಅವರಿಗೆ ಅನುಕೂಲವಾಗುತ್ತದೆ. ಅಲ್ಲದೇ ನೈಸರ್ಗಿಕವಾಗಿ ಬೆಳೆಯುವಂತಹ ಔಷಧಿ ಸಸ್ಯಗಳು ಹಾಗೆಯೇ ಉಳಿಯುತ್ತವೆ. ಇದರಿಂದ ರೈತರಿಗೂ ಲಾಭದಾಯಕವಾಗುವ ರೀತಿಯಲ್ಲಿ ಮಾಡಬಹುದಾಗಿದೆ.ಆ ರೀತಿಯ ಕಾರ್ಯಕ್ರಮವನ್ನು ಸಹ ನಾವು ಹಮ್ಮಿಕೊಂಡಿದ್ದೇವೆ.

ಈ ರೀತಿಯ ಬೆಳೆಗಳನ್ನು ರೈತರು ಬೆಳೆಯಲಿಕ್ಕೆ ಶಿಫಾರಸ್ಸು ಮಾಡುತ್ತಿಲ್ಲ. ಇವುಗಳನ್ನು ನರ್ಸರಿಗಳಲ್ಲಿ ಬೆಳೆಸುತ್ತಿಲ್ಲ. ಸ್ಥಳೀಯವಾಗಿ ಅಶ್ವಗಂಧ, ಲೋಳೆಸರ ಇನ್ನೀತರ ಸಸ್ಯಗಳಿಗೆ ಇಲ್ಲಿ ಬೇಡಿಕೆ ಇದೆ. ಆಯುಷ್ ಇಲಾಖೆಯಲ್ಲಿ National Medicinal Plants Board ಎಂದು ಏನು ಇದೆ, ಅವರಿಂದ ಕೆಲವೊಂದು ಸಸಿಗಳನ್ನು ಉಚಿತವಾಗಿ ಹಂಚಲಿಕ್ಕೆ ಸ್ವಲ್ಪ ಅನುದಾನ ಲಭಿಸುತ್ತದೆ. ಮತ್ತೆ, ಪ್ರೋತ್ಸಾಹಧನ ಇದೆ. ಕೆಲವು ಸಸ್ಯಗಳನ್ನು ರೈತ ಬೆಳೆದು ಕೊಟ್ಟರೆ ಎಕರೆಗೆ ಇಂತಿಷ್ಟು ಎಂದು ಅವರಿಗೆ ಸಬ್ಸಿಡಿ ದೊರಕುತ್ತದೆ. ಜೊತೆಗೆ National Medicinal Plants Board ನಿಂದ 75 ಸಾವಿರ, ಒಂದು ಲಕ್ಷದವರೆಗೂ ಸಬ್ಸಿಡಿ ಸಿಗುತ್ತದೆ. ಆ ಸಬ್ಸಿಡಿಯನ್ನು tie-up ಮಾಡಿದಾಗ ರೈತನಿಗೂ ಸಹ ಅನುಕೂಲವಾಗುತ್ತದೆ. ಅವನು ತಾನು ಬೆಳೆದುದನ್ನು ಮಾರಾಟ ಮಾಡಿದಾಗ ಅವನಿಗೆ ಹೆಚ್ಚಿನ ಲಾಭವೂ ಸಹ ಸಿಗುತ್ತದೆ.

ನಾವು ಸಹ ಇಡೀ ಗುಡ್ಡಕ್ಕೆ ಚೈನ್ ಲಿಂಕ್ ಹಾಕುವಂತಹ ಕೆಲಸವನ್ನು ಮಾಡುವುದಿಲ್ಲ. ಸರಾಸರಿ 50–50 ಹೆಕ್ಟೇರ್‌ನಂತೆ ಒಂದು ಪ್ಲಾಟ್ ತೆಗೆದುಕೊಂಡು ಈ ಒಂದು ಕೆಲಸವನ್ನು ಮಾಡಬೇಕಾಗುತ್ತದೆ. ಎಷ್ಟು ಅಂತರದಲ್ಲಿ ಗಿಡಗಳು ಇರಬೇಕೆನ್ನುವ ಒಂದು ಪ್ಯಾಕೇಜ್ ನಮ್ಮಲ್ಲಿ ಇದೆ. ಗರಿಷ್ಠ 200 ಸಸ್ಯಗಳು ಒಂದು ಹೆಕ್ಟೇರ್‌ಗೆ ಎಂದು ಲೆಕ್ಕ ಮಾಡಿಕೊಂಡು ಮತ್ತು ಮಧ್ಯದಲ್ಲಿ ಎಲ್ಲೆಲ್ಲಿ ಗ್ಯಾಪ್ ಇದೆ ಅಂತಹ ಗ್ಯಾಪ್‌ನಲ್ಲಿ ಆರ್ಟಿಫಿಷಿಯಲ್ ಸಸ್ಯಗಳನ್ನು

ನೆಡುವುದರ ಮೂಲಕ 50 ಹೆಕ್ಟೇರ್ ಪ್ರದೇಶಕ್ಕೆ ಚೈನ್ ಲಿಂಕ್ ಹಾಕುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲಿ ನೀಲಗಿರಿ ಸಸ್ಯಗಳು ಜಾಸ್ತಿ ಇರುವುದಿಲ್ಲ.

ನಮ್ಮಲ್ಲಿ 1978ರ ಪೂರ್ವದಲ್ಲಿ ಆಗಿರುವಂತಹ ಒತ್ತುವರಿಗಳನ್ನು ಗಮನಿಸಿದಾಗ ಇಡೀ ರಾಜ್ಯದಲ್ಲಿ 19 ಸಾವಿರ ಫಲಾನುಭವಿಗಳನ್ನು ಗುರುತಿಸಲಾಗಿತ್ತು. ಅವರೆಲ್ಲರೂ ಒಂದೂವರೆ–ಎರಡು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರು. 19 ಸಾವಿರ ಫಲಾನುಭವಿಗಳಿಗೆ ಸುಮಾರು 14 ಸಾವಿರ ಹೆಕ್ಟೇರ್ ಜಮೀನನ್ನು ಅಂದರೆ ಒಂದು ಹೆಕ್ಟೇರ್‌ಗೆ ಎರಡೂವರೆ ಎಕರೆ ಜಮೀನು ಬರುತ್ತದೆ. ಅಂದರೆ ಸುಮಾರು 35 ಸಾವಿರ ಎಕರೆ ಜಮೀನನ್ನು ಅವರುಗಳು ಒತ್ತುವರಿ ಮಾಡಿಕೊಂಡಿದ್ದಾರೆಂದು ರೆಕಾರ್ಡ್ ಆಗಿ, ಅದನ್ನು ಅವರುಗಳಿಗೆ ನೀಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ನೀಡಿದಾಗ ಈ ಜಮೀನನ್ನು ಅವರುಗಳಿಗೆ ನೀಡುವ ಬಗ್ಗೆ ಕೇಂದ್ರ ಸರ್ಕಾರದಿಂದ ನಿರ್ದೇಶನ ನೀಡಿದ್ದರು. ಆದರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಷರತ್ತು ಹಾಕಿದರು. ಅಂದರೆ ಈಗಾಗಲೇ 10 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದು, ಮತ್ತೆ ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೆ ಬರುವುದಿಲ್ಲವೆಂದು, ಅವನ ಸ್ವಂತ ಜಮೀನು ಮತ್ತು ಒತ್ತುವರಿ ಮಾಡಿಕೊಂಡಿರುವ ಜಮೀನು ಸೇರಿ 3 ಎಕರೆ ಮೀರಬಾರದು ಎನ್ನುವ ಷರತ್ತು ಹಾಕಲಾಗಿತ್ತು. ಇದನ್ನು ಜಿಲ್ಲಾಧಿಕಾರಿಗಳು ಈ ಸಂಬಂಧ ದಾಖಲೆಗಳನ್ನು ಪರಿಶೀಲಿಸಿ, ಯಾವ್ಯಾವ ಕುಟುಂಬಗಳು ಈ ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡಿವೆಯೆಂದು ನೋಡಿಕೊಂಡು ಅವರ ಸ್ವಂತ ಜಮೀನು ಮತ್ತು ಒತ್ತುವರಿ ಜಮೀನು 3 ಎಕರೆಗೂ ಜಾಸ್ತಿಯಾಗದಂತೆ ನೋಡಿಕೊಂಡು ಜಮೀನನ್ನು ಕೊಟ್ಟಿದ್ದಾರೆ.ಅದೇ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲೂ ಜಮೀನನ್ನು ಕೊಡಲಾಗಿದೆ. ಗದಗ ಜಿಲ್ಲೆಯಲ್ಲಿಯೂ ಸಹ ಅದೇ ರೀತಿ ಜಮೀನನ್ನು ಕೊಡಲಾಗಿದೆ.

1980 ರಲ್ಲಿ ಕೇಂದ್ರ ಸರ್ಕಾರದ ಅರಣ್ಯ ಕಾಯಿದೆ ಬಂದ ಮೇಲೆ ಯಾವುದೇ ಮಂಜೂರಾತಿಗಳನ್ನು ಮಾಡಬೇಕಾದರೆ ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೇ ಮಾಡುವಂತಿಲ್ಲವೆಂದು ಹೇಳಲಾಗಿದೆ. ಆ ಕಾಯಿದೆ ಬಂದು ಸುಮಾರು ವರ್ಷಗಳಾದ ಮೇಲೆ ತಲಾತಲಾಂತರಗಳಿಂದ ಕಾಡಿನಲ್ಲಿ ವಾಸ ಮಾಡಿಕೊಂಡು, ಭೂ ಉಳುಮೆ ಮಾಡಿಕೊಂಡು ಬಂದಿರುವ ಗಿರಿಜನರು ಕೆಲವು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದರು. ಅರಣ್ಯ ಭಾಗದಲ್ಲಿಯೇ ಬೆಳೆದುಕೊಂಡು ಬಂದಿರುವ ಗಿರಿಜನರಿಗೆ ಈ ರೆಕಾರ್ಡ್ ಅಂದರೆ ಏನು, ವಿಲೇಜ್ ಅಕೌಂಟೆಂಟ್ ಅಂದರೆ ಯಾರು, ಯಾರಿಗೆ ಭೇಟಿಯಾಗಬೇಕೆನ್ನುವ ಕಲ್ಪನೆಗಳು ಅವರಿಗೆ ಇರಲಿಲ್ಲ. ಅಂತಹವರಿಗೆ ಅವರುಗಳ ಹಕ್ಕು ಲಭಿಸಲಿಲ್ಲ. 2006 ರಲ್ಲಿ ಅರಣ್ಯ ಹಕ್ಕು ಕಾಯಿದೆ ಎಂದು ಹೇಳಿ, ಕೇಂದ್ರ ಸರ್ಕಾರದ ಒಂದು ಕಾಯಿದೆ ಬಂದಿರುತ್ತದೆ. ಅದರಲ್ಲಿ ಒಂದು ಕಟ್–ಆಫ್ ಡೇಟ್ ಇದೆ.ದಿನಾಂಕ: 13–12–2005 ರವರೆಗೆ ಯಾರಾದರೂ ಜಮೀನನ್ನು ಅಕ್ರಮಿಸಿಕೊಂಡಿದ್ದರೆ, ಅದರಲ್ಲೂ ಅವರು ಪರಿಶಿಷ್ಟ ಪಂಗಡದ ಜನಾಂಗವಾಗಿದ್ದರೆ, ಅಂದರೆ ದಿನಾಂಕ: 13–12–2015 ರಂದು ಅಲ್ಲಿ ಇದ್ದರೆ ಸಾಕು, ಅವರಿಗೆ ಆ ಜಮೀನನ್ನು ಮಂಜೂರು ಮಾಡಿಕೊಡಬಹುದು ಎಂದು ಆ ಕಾಯಿದೆಯಲ್ಲಿ ಹೇಳಲಾಯಿತು. ಅವನು 10 ಎಕರೆ ಜಮೀನನ್ನು ಉಳುಮೆ ಮಾಡಿಕೊಂಡಿದ್ದರೆ ಆ 10 ಎಕರೆಯವರೆಗೆ ಜಮೀನನ್ನು ಮಂಜೂರು ಮಾಡಿಕೊಡುವಂತಹ ಆದೇಶ ಮಾಡಲಾಯಿತು. ಅವನು 3 ಎಕರೆ ಜಮೀನನ್ನು ಮಾಡಿಕೊಂಡಿದ್ದರೆ 3 ಎಕರೆ ಮಾತ್ರ ಮಂಜೂರು ಮಾಡಿಕೊಡುವಂತೆ ಹೇಳಲಾಗಿತ್ತು. ಅಂತಹ ಒಂದು ಅವಕಾಶವನ್ನು ಪರಿಶಿಷ್ಟ ಪಂಗಡದ ಜನಾಂಗಕ್ಕೆ ಮಾಡಿಕೊಡಲಾಯಿತು. ಮತ್ತೆ ಇತರೆ ಅರಣ್ಯವಾಸಿಗಳು ಎಂದು ಹೇಳಿ ಮತ್ತೊಂದು ಕ್ಲಾಸಿಫಿಕೇಷನ್ ಮಾಡಿ ಅವರಿಗೆ ಒಂದು ಷರತ್ತು ವಿಧಿಸಲಾಯಿತು. ಅಂದರೆ 3 ತಲೆಮಾರಿನಿಂದ ಅಲ್ಲಿ ಅವರು ಇದ್ದಾರೆಂದು ದಾಖಲೆ ಬೇಕು. ದಾಖಲೆ ಇದ್ದರೆ ಅವರಿಗೂ ಕೂಡ ಅಲ್ಲಿ ಮಾನ್ಯತೆ ಮಾಡಬೇಕೆಂದು ಹೇಳಲಾಯಿತು. ಸದರಿ ದಾಖಲೆಗಳನ್ನು ಅಕ್ರಮಿಸಿಕೊಂಡವರು ಒದಗಿಸಬೇಕು ಅಥವಾ ಆ ಸಂಬಂಧ ಸರ್ಕಾರದಲ್ಲಿದ್ದರೂ ಸಹ ಒದಗಿಸಬಹುದು.

ಈ ವಿಚಾರದಲ್ಲಿ ಗ್ರಾಮ ಮಟ್ಟದ, ವಿಭಾಗೀಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಗಳನ್ನು ಈ ಕಾಯಿದೆ ಅಡಿಯಲ್ಲಿ ಮಾಡಲಾಗಿರುತ್ತದೆ. ಅವನು ಆ ಗ್ರಾಮದ ಮಟ್ಟದಲ್ಲಿ ಗ್ರಾಮದ ಮಟ್ಟದ ಸಮಿತಿಗಳು ಒಂದು ನೋಟೀಸ್ ಹೊರಡಿಸಿ, ಈ ರೀತಿಯಲ್ಲಿ ಯಾರಾದರೂ ಜಮೀನನ್ನು ಉಳುಮೆ ಮಾಡುತ್ತಿದ್ದು, ನೀವು 90 ದಿವಸಗಳ ಒಳಗೆ ಅರ್ಜಿಗಳನ್ನು ಕೊಡಬೇಕೆಂದು ಹೇಳಿ ಅವರುಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. ಅಲ್ಲಿ ಇರುವಂತಹ ಅರಣ್ಯಾಧಿಕಾರಿಗಳು ಮತ್ತು ಕಂದಾಯ ಅಧಿಕಾರಿಗಳು ಜಂಟಿಯಾಗಿ ಹೋಗಿ ಯಾರ್ಯಾರು ಅರ್ಜಿಗಳನ್ನು ಕೊಟ್ಟಿದ್ದಾರೆ, ಎಷ್ಟೆಷ್ಟು ಜಮೀನನ್ನು ಅತಿಕ್ರಮ ಮಾಡಿಕೊಂಡಿದ್ದಾರೆ ಅಥವಾ ಅದರಲ್ಲಿ ವಾಸವಾಗಿದ್ದಾರೆ ಎನ್ನುವುದನ್ನು ಸರ್ವೆ ಮಾಡಿಕೊಂಡು ಬಂದು ಈ ಗ್ರಾಮ ಸಮಿತಿಯ ಮುಂದೆ ಇಡುತ್ತಾರೆ.ಇದನ್ನು ಗ್ರಾಮ ಸಮಿತಿಯವರು ಪರಿಶೀಲನೆ ಮಾಡಿ sub-divisional level ಸಮಿತಿಯವರಿಗೆ ಶಿಫಾರಸ್ಸು ಮಾಡುತ್ತಾರೆ. ನಂತರ ಅದು ಜಿಲ್ಲಾ ಮಟ್ಟದ ಸಮಿತಿಗೆ ಬಂದು ಅದು ಅಂತಿಮವಾಗುತ್ತದೆ. ಇದು ಪರಿಶಿಷ್ಟ ಪಂಗಡದ ಜನಾಂಗಕ್ಕೆ ಸೀಮಿತವಾಗಿರುತ್ತದೆ. ಸರ್ವೆ ಮಾಡುವುದರಿಂದ ಇಲ್ಲಿ ಪರಿಶಿಷ್ಟ ಪಂಗಡದ ಜನಾಂಗದವರು ವಾಸ ಮಾಡುತ್ತಿದ್ದಾರೆಂದು ಖಚಿತವಾಗುತ್ತದೆ.

ಮತ್ತೆ, ಪರಿಶಿಷ್ಟ ಪಂಗಡದ ಜನಾಂಗದವರನ್ನು ಹೊರತುಪಡಿಸಿ, ಬೇರೆ ಜನಾಂಗದವರು ಈ ಸಂಬಂಧ ಎರಡು ದಾಖಲೆಗಳನ್ನು ಕೊಡಬೇಕಾಗುತ್ತದೆ. ಅಂದರೆ ಮೂರು ತಲೆಮಾರಿನಿಂದ ಈ ಜಮೀನಿನ ಅವಲಂಬನೆಯಾಗಿದ್ದಾರೆಂದು ಹೇಳಬೇಕಾಗುತ್ತದೆ.

1978 ರ ಪೂರ್ವದಲ್ಲಿ ಅದನ್ನು ಯಾವುದೇ ಜನಾಂಗದವರು ಮಾಡಿದ್ದರೂ ಕೂಡ ಒಟ್ಟು 19,000 ಫಲಾನುಭವಿಗಳಿಗೆ 35 ಸಾವಿರ ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ ಎಲ್ಲಾ ಜನಾಂಗದವರು ಇದ್ದಾರೆ. ಇವರುಗಳು 3 ಎಕರೆಗಿಂತ ಕಡಿಮೆ ಒತ್ತುವರಿ ಮಾಡಿಕೊಂಡಿದ್ದರೆ ಅವರಿಗೆ ಆ ಜಮೀನನ್ನು ಮಂಜೂರು ಮಾಡಲಿಕ್ಕೆ ಅವಕಾಶ ಇದೆ.

ಕಪ್ಪತ್ತಗುಡ್ಡ ಅರಣ್ಯ ಪ್ರದೇಶವನ್ನು ಸಂರಕ್ಷಿತ ಮೀಸಲು ಅರಣ್ಯ ಪ್ರದೇಶ ಎಂದು ಘೋಷಣೆಯಾಗಿದೆ. 'ಅಭಯಾರಣ್ಯ' ಎಂದು ಘೋಷಣೆಯಾಗಿಲ್ಲ ಎಂದು ಸಮಿತಿಯ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

ಕಪ್ಪತ್ತಗುಡ್ಡ ಅರಣ್ಯ ಪ್ರದೇಶದ ಬಗ್ಗೆ ಸಾರ್ವಜನಿಕರಿಂದ ಒಟ್ಟು 58 ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಒಟ್ಟು 14 ಅಹವಾಲುಗಳನ್ನು ಸಮಿತಿಯು ಸ್ವೀಕರಿಸಿದ್ದು, ಆ ಪೈಕಿ ಪ್ರಮುಖವಾಗಿ ಅಭಿಪ್ರಾಯವನ್ನು ಮೌಖಿಕವಾಗಿ ವ್ಯಕ್ತಪಡಿಸಿರುವ ಮಾಹಿತಿ ಈ ಕೆಳಕಂಡಂತಿರುತ್ತದೆ.ಈ ಸಂಬಂಧವಾಗಿ ಸ್ವೀಕರಿಸಲಾಗಿರುವ ಅಹವಾಲುಗಳನ್ನು ಅನುಬಂಧ–5ರಲ್ಲಿ ತೋರಿಸಲಾಗಿದೆ.

1. ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಪರಿಸರವಾದಿಗಳು, ರೈತರು, ಗ್ರಾಮಸ್ಥರು ಮತ್ತು ತಾಂಡವಾಸಿಗಳು, ಗದಗ ಜಿಲ್ಲೆ:– ಕಪ್ಪತ್ತಗುಡ್ಡ ವನ್ಯಧಾಮ ಸಂರಕ್ಷಣೆಯ ವಿಚಾರವಾಗಿ ನಾವು ನಮ್ಮ ಸಂಸ್ಥೆಯ ವತಿಯಿಂದ ಹಲವಾರು ಬಾರಿ ಮನವಿಗಳನ್ನು ಸಲ್ಲಿಸುತ್ತಾ ಬಂದಿದ್ದೇವೆ. ಆದ್ದರಿಂದ, ತಮ್ಮಲ್ಲಿ ಒತ್ತಾಯ ಮಾಡುವುದೇನೆಂದರೆ ಕಪ್ಪತ್ತಗುಡ್ಡದಲ್ಲಿ 30ಕ್ಕೂ ಹೆಚ್ಚು ಕೆರೆಗಳು, ಹಳ್ಳಗಳು, ಝರಿಗಳು, ಕೊಳ್ಳಗಳು ಜನ್ಮತಾಳಿದ್ದು, ಅವು ಅಂತ್ಯದಲ್ಲಿ ತುಂಗಭದ್ರಾ ನದಿ ಸೇರುತ್ತವೆ. ಇವುಗಳು ಮೊದಲು ಪ್ರಾಣಿ–ಪಕ್ಷಿಗಳ ನೀರಿನ ದಾಹವನ್ನು ಇಂಗಿಸುತ್ತಿದ್ದವು. ಈಗ ಅವುಗಳೆಲ್ಲಾ ಹೂಳು ತುಂಬಿ ಹೆಚ್ಚು ನೀರು ನಿಲ್ಲದಂತಾಗಿವೆ.ಇಂತಹ ಕೆರೆಗಳಲ್ಲಿ ಆಲದ ಕೆರೆ, ಬಂಗಾರಕೊಳ್ಳ, ಮಂಜಿನ ಡೋಣಿ, ಕಾರಿಸಿದ್ದಪ್ಪನ ಪಡಿ, ಬೇಡರ ಕಣ್ಣಪ್ಪನ ಪಡಿ, ಹಗಲಬತ್ತಿಯ ಕೆರೆ ಇನ್ನೂ ಮುಂತಾದ ಕೆರೆಗಳನ್ನು ಪುನಶ್ಚೇತನ ಮಾಡಬೇಕಾಗಿದೆ. ಜೊತೆಗೆ ಈ ಬಾರಿ ಮಳೆ ಕಡಿಮೆ ಬಂದಿರುವುದರಿಂದ, ಈ ಕಡೆಗಳಲ್ಲಿ ಪ್ರಾಣಿ ಪಕ್ಷಿಗಳಿಗೆ ಕುಡಿಯಲಿಕ್ಕೆ ನೀರಿನ ತೊಂದರೆಯಿರುವುದರಿಂದ ಟ್ಯಾಂಕರ್‌ಗಳಿಂದ ನೀರನ್ನು ಸರಬರಾಜು ಮಾಡುವುದರ ಮೂಲಕ ಪ್ರಾಣಿ ಪಕ್ಷಿಗಳಿಗೆ ಕುಡಿಯಲಿಕ್ಕೆ ನೀರಿನ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಜೊತೆಗೆ ಈ ಕಪ್ಪತ್ತಗುಡ್ಡದಲ್ಲಿ ಔಷಧಿ ಸಸ್ಯಗಳು ಸಾಕಷ್ಟು ಸಂಖ್ಯೆಯಲ್ಲಿದ್ದು,

ಇವುಗಳನ್ನು ಸಂರಕ್ಷಣೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಮತ್ತೆ ನಿನ್ನೆ ದಿವಸ ಕಪ್ಪತ್ತಗುಡ್ಡಕ್ಕೆ ಬೆಂಕಿ ಬಿದ್ದಿದೆ ಎಂದು ವರದಿಯಾಗಿದೆ. ಈ ರೀತಿಯಲ್ಲಿ ಆಗಲಿಕ್ಕೆ ಕಾರಣ ಏನೆಂದು ಯೋಚನೆ ಮಾಡಬೇಕಾಗಿದೆ ಎಂದು ಸಮಿತಿಯ ಮುಂದೆ ಅಹವಾಲನ್ನು ಸಲ್ಲಿಸಿರುತ್ತಾರೆ.

2. ಶ್ರೀ ಲಿಂಗರಾಜ ನಿಡುವಳಿ, ಕಾರ್ಯದರ್ಶಿ, ವಿನೂತನ ಸೇವಾ ಸಂಸ್ಥೆ, ಶೀರೇವಾಡ, ಹುಬ್ಬಳ್ಳಿ ತಾಲ್ಲೂಕು:– ಈ ಕಪ್ಪತ್ತಗುಡ್ಡದ ಪ್ರದೇಶದಲ್ಲಿ ಈಗ ಪವನ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಪವನ ವಿದ್ಯುತ್ ಕಂಬಗಳ ಪ್ಯಾನ್‌ನ ಶಬ್ದದಿಂದ ಮೃದು ಸ್ವಭಾವದ ಅನೇಕ ಪಕ್ಷಿಗಳು ಹೆದರಿ ಅಲ್ಲಿಂದ ಕಣ್ಮರೆಯಾಗುತ್ತಿರುವ ವಿಚಾರ ಪಕ್ಷಿ ತಜ್ಞರು ಮತ್ತು ನಾವು ಕಣ್ಣಾರೆ ಕಂಡ ಸಂಗತಿಯಾಗಿದೆ. ಅಷ್ಟೇ ಅಲ್ಲದೆ, ಈ ಪವನ ವಿದ್ಯುತ್‌ನಿಂದಾಗಿ ಬೆಂಕಿಯ ಕಿಡಿಗಳು ತಗಲುವುದರ ಮೂಲಕ ಕಾಡ್ಗಿಚ್ಚುಗೆ ಕಾರಣವಾಗಿದೆ.

ಈ ಎಲ್ಲಾ ಕಾರಣಗಳಿಂದ **ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮವನ್ನಾಗಿ** ಮಾಡಬೇಕಾಗಿದೆ.ಇದನ್ನು ಮಾಡುವಾಗ ಕೆಲವು ಅಂಶಗಳನ್ನು ಗಮನಿಸಬೇಕಾಗುತ್ತದೆ.

ಕಪ್ಪತ್ತಗುಡ್ಡವನ್ನು ಅಧ್ಯಯನ ಮಾಡುವಾಗ ಸ್ಥಳೀಯ ರೈತರು, ಪಾರಂಪರಿಕ ಆಯುರ್ವೇದ ವೈದ್ಯರು, ದನಗಾಹಿಗಳು, ಕುರಿಗಾಹಿಗಳು, ಬೇಟೆಗಾರರು, ಪಕ್ಷಿ ತಜ್ಞರ ಹಿತವನ್ನು ಸಹ ನೋಡಬೇಕಾಗುತ್ತದೆ.

ಕಪ್ಪತ್ತಗುಡ್ಡದ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸುಮಾರು 20 ಗ್ರಾಮಗಳಲ್ಲಿ 360ಕ್ಕೂ ಹೆಚ್ಚು ಆಯುರ್ವೇದ ವೈದ್ಯರುಗಳು ಇದ್ದಾರೆ. ಇವರುಗಳು ಈ ಕಪ್ಪತ್ತಗುಡ್ಡ ಪ್ರದೇಶದಲ್ಲಿ ಸಿಗುವಂತಹ ಔಷಧಿ ಸಸ್ಯಗಳನ್ನೇ ನಂಬಿಕೊಂಡಿದ್ದಾರೆ. ಅಲ್ಲಿ ಯಾವ ಪಕ್ಷಿಗಳಿವೆ, ಯಾವ ಔಷಧಿ ಸಸ್ಯಗಳಿವೆ ಎನ್ನುವುದನ್ನು ಇವರುಗಳಿಂದಲೇ ತಿಳಿದುಕೊಳ್ಳಬೇಕಾಗುತ್ತದೆ.

ಅರಣ್ಯ ಉತ್ಪನ್ನಗಳ ಸಂಗ್ರಹಕಾರರು ಎಂದರೆ ಲಂಬಾಣಿ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರ ಬದುಕಿಗೆ ಧಕ್ಕೆಯಾಗದಂತೆ ಅವರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, **ವನ್ಯಜೀವಿಧಾಮ** ಎಂದು ಪ್ರಾರಂಭ ಮಾಡಿದ ಮೇಲೆ ಅಲ್ಲಿ ಇರತಕ್ಕಂತಹ ಜನರನ್ನು ಒಕ್ಕಲೆಬ್ಬಿಸುವಂತಹ ಕೆಲಸ ಪ್ರಾರಂಭವಾಗುತ್ತದೆ ಎನ್ನುವ ವಿಚಾರ ಅಲ್ಲಿ ವಾಸಿಸುವಂತಹ ಜನರಿಗೆ ಬಂದಿದೆ. ಇದನ್ನು ತಡೆಗಟ್ಟಬೇಕು. ಇಲ್ಲದಿದ್ದರೆ ಸಂಘರ್ಷವಾಗುತ್ತದೆ ಎಂದು ಸಮಿತಿಗೆ ಮನವಿಯನ್ನು ಸಲ್ಲಿಸಿರುತ್ತಾರೆ.

3. ಶ್ರೀ ಪಿ.ಎಸ್. ಹರ್ಷ, ಪರಿಸರವಾದಿ:– ಈ ಕಪ್ಪತ್ತಗುಡ್ಡದಲ್ಲಿ ಹಿಂದಿನಿಂದಲೂ ಅನೇಕ ವಿವಿಧ ಪ್ರಾಣಿ – ಪಕ್ಷಿಗಳು ವಾಸವಾಗಿದ್ದು, ಸಸ್ಯಸಂಕುಲ, ದಟ್ಟ ಅರಣ್ಯ, ಹೇರಳ ಔಷಧೀಯ ಸಸ್ಯ ನಶಿಸಿ ಹೋಗುತ್ತಿದ್ದು ಇರುವ ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರು ಇಲ್ಲದ ಕಾರಣ ಸಮಗ್ರ ಸೌಲಭ್ಯ ಕಲ್ಪಿಸುವುದರ ಜೊತೆಗೆ ಇಲ್ಲಿಯ ಎಲ್ಲ ಸಂಪತ್ತನ್ನು ರಕ್ಷಿಸಿ, ಸಂರಕ್ಷಿಸಿ ಉಳಿಸಿಕೊಳ್ಳಲು **ಕಪ್ಪತ್ತಗುಡ್ಡ ಪ್ರದೇಶವನ್ನು ವನ್ಯಜೀವಿಧಾಮ ಎಂದು ಘೋಷಣೆ** ಮಾಡುವಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಭರವಸೆಗಳ ಸಮಿತಿಗೆ ವಿನಂತಿ ಮಾಡಿಕೊಂಡಿರುತ್ತಾರೆ.

4. ಶ್ರೀ ಶಿವಾನಂದ ಪಟ್ಟಣ ಶೆಟ್ಟಿ:– ಸುಮಾರು 50 ಜನ ಕಪ್ಪತ್ತಗುಡ್ಡದ ನಿವಾಸಿಗಳಾದ ನಾವೆಲ್ಲರೂ ಸೇರಿಕೊಂಡು ಕಪ್ಪತ್ತಗುಡ್ಡವನ್ನು ಸಂರಕ್ಷಿಸುವ ಸಲುವಾಗಿ ತಮ್ಮ ಭರವಸೆಗಳ ಸಮಿತಿಗೆ ಮನವಿ ಪತ್ರವನ್ನು ಕೊಡಲಿಕ್ಕೆ ಬಂದಿದ್ದೇವೆ. ಕಪ್ಪತ್ತಗುಡ್ಡದಿಂದ ಔಷಧಿ ಗಿಡಮೂಲಿಕೆಗಳನ್ನು ಶ್ರೀಲಂಕಾ, ಚೀನಾ ದೇಶಗಳಿಗೆ ಸಾಗಾಣಿಕೆ ಮಾಡುತ್ತಿದ್ದರು. ಇಂತಹ ಕಪ್ಪತ್ತಗುಡ್ಡ ಅರಣ್ಯ ಪ್ರದೇಶವನ್ನು ಸಂರಕ್ಷಣೆ ಮಾಡುವ ವಿಚಾರದಲ್ಲಿ ಪೂಜ್ಯ ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಹೋರಾಟ ಮಾಡುವಂತಹ ಸಂದರ್ಭದಲ್ಲಿ ಈ ಭರವಸೆ ಸಮಿತಿಗಳು ಅಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ಆಗಿರುವಂತಹ ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು ಅವರೊಂದಿಗೆ ಭೇಟಿ ಕೊಟ್ಟು, ಕಪ್ಪತ್ತಗುಡ್ಡವನ್ನು ವೀಕ್ಷಣೆ ಮಾಡಿಕೊಂಡು ಹೋಗಿದ್ದಾರೆ. ಈಗ ಅವರು ಭರವಸೆ ಸಮಿತಿ ವತಿಯಿಂದ ಮುಖ್ಯಸ್ಥರಾಗಿ ಖುದ್ದಾಗಿ ಇಲ್ಲಿಗೆ ಆಗಮಿಸಿ, ಈ

ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅವರಿಗೆ ನಮ್ಮ ಈ ಕಪ್ಪತ್ತಗುಡ್ಡದ ನಿವಾಸಿಗಳ ಪರವಾಗಿ ಧನ್ಯವಾದಗಳು.

ಹಿಂದೆ ಪೋಸ್ಕೋ ಎನ್ನುವ ಒಂದು ಕಂಪನಿಯವರು ಕಪ್ಪತ್ತಗುಡ್ಡದ ಸಮೀಪ ಜಮೀನನ್ನು ಖರೀದಿ ಮಾಡಿಕೊಂಡು ಅಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಮಾಡಿಕೊಂಡು ಈ ಕಪ್ಪತ್ತಗುಡ್ಡದಲ್ಲಿನ ಮ್ಯಾಂಗನೀಸ್ ಮತ್ತು ಐರನ್‌ಓರ್ ಅನ್ನು ಕಚ್ಚಾ ವಸ್ತುವನ್ನಾಗಿ ಮಾಡಿಕೊಂಡು, ತುಂಗಭದ್ರಾ ನದಿಯ ನೀರನ್ನು ಉಪಯೋಗ ಮಾಡಿಕೊಂಡು ಈ ಭಾಗದ ರೈತರನ್ನು ಮತ್ತು ಪರಿಸರವನ್ನು ಶೋಷಣೆ ಮಾಡುವಂತಹ ಕೆಲಸವನ್ನು ಅವರು ಮಾಡಿದರು. ಆ ಸಂದರ್ಭದಲ್ಲಿ ನಮ್ಮ ಪೂಜ್ಯ ಸ್ವಾಮೀಜಿಯವರು ಮತ್ತು ಪರಿಸರವಾದಿಗಳು ಸೇರಿ ಪ್ರತಿಭಟನೆ ಮಾಡುವುದರ ಮೂಲಕ ಈ ಶೋಷಣೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾದರು. ಕಪ್ಪತ್ತಗುಡ್ಡ ಪ್ರದೇಶವನ್ನು ಉಳಿಸಿಕೊಡಿ ಎನ್ನುವ ನಮ್ಮ ಕೂಗಿಗೆ ಸ್ಪಂದಿಸಿ, 80 ಸಾವಿರ ಎಕರೆ ಪ್ರದೇಶದ ಪೈಕಿ 44 ಸಾವಿರ ಎಕರೆ ಅರಣ್ಯ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶವನ್ನಾಗಿ ಘೋಷಣೆ ಮಾಡಲಾಯಿತು.ಇನ್ನುಳಿದ ಅರಣ್ಯ ಪ್ರದೇಶವನ್ನು ಗಣಿಗಾರಿಕೆಗೆ ಕೊಡುವುದರ ಮೂಲಕ ಅರಣ್ಯವನ್ನು ನಾಶ ಮಾಡಲಾಯಿತು. 44 ಸಾವಿರ ಎಕರೆ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶವನ್ನಾಗಿ ಮಾಡಿದರೂ ಸಹಿತ ನಮ್ಮ ದುರ್ದೈವದ ಸಂಗತಿ ಎಂದರೆ ಅಲ್ಲಿಯೂ ಸಹ ಗಣಿಗಾರಿಕೆಯನ್ನು ಮಾಡಲು ಪ್ರಾರಂಭಿಸಿದರು. ಮತ್ತೆ ಅಲ್ಲಿ 2–3 ಬೃಹತ್ ಕಂಪನಿಗಳು ಹುಟ್ಟಿಕೊಂಡಿವೆ. ಅದರಲ್ಲಿ ಒಂದು ವಿಂಡ್ ಪವರ್ ಮಿಲ್ ಕಂಪನಿಯವರು ಬೇಕಾಬಿಟ್ಟಿಯಾಗಿ ಸರ್ಕಾರಕ್ಕೆ ಅಲ್ಪ ಪ್ರಮಾಣದಲ್ಲಿ ರಾಯಲ್ಟಿಯನ್ನು ಕೊಟ್ಟುಕೊಂಡು ಬಂದಿದ್ದಾರೆ. ಸರ್ಕಾರದ 5% ವಿಂಡ್ ಪವರ್ ಮಿಲ್‌ಗಳು ಇದ್ದರೆ ಖಾಸಗಿಯವರದು 95% ವಿಂಡ್ ಪವರ್ ಮಿಲ್‌ಗಳಿವೆ.

ಮತ್ತೆ ರಾಮ್‌ಘಡ್ ಮಿನರಲ್ಸ್ ಅಂಡ್ ಮೈನಿಂಗ್ಸ್‌ನವರು ಅಲ್ಲಿ ಗೋಲ್ಡ್ ಇದೆ, ಅದನ್ನು ತೆಗೆಯುತ್ತೇವೆಂದು ಹೇಳಿ 100 ಎಕರೆ ಪ್ರದೇಶವನ್ನು ಗುತ್ತಿಗೆ ಪಡೆದುಕೊಂಡು ಗಣಿಗಾರಿಕೆಯನ್ನು ಮಾಡುತ್ತಿದ್ದರು. ಅವರ ವಿರುದ್ಧ ದಿನನಿತ್ಯ ಅಲ್ಲಿನ ನಿವಾಸಿಗಳು ಲಂಬಾಣಿ ಜನಾಂಗದವರೊಂದಿಗೆ ಹೋರಾಟ ಮಾಡಿದ್ದರ ಫಲವಾಗಿ ಸರ್ಕಾರ ಗಣಿಗಾರಿಕೆಯನ್ನು ನಿಲ್ಲಿಸಿ, ಆ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶವನ್ನಾಗಿ ಘೋಷಿಸಿರುತ್ತದೆ.

ಈ ದಿಸೆಯಲ್ಲಿ ತಮ್ಮಲ್ಲಿ ಮತ್ತೆ ಮತ್ತೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಕಪ್ಪತ್ತಗುಡ್ಡದಲ್ಲಿ ಜೈವಿಕ ಅಸಮತೋಲನ (Ecological imbalance) ಇದ್ದು, ಅದನ್ನು ಸರಿ ಮಾಡಬೇಕಾದರೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿದೆ. 33% ಅರಣ್ಯ ಇರಬೇಕೆಂದು ನಿಯಮ ಇದೆ.ಆದರೆ, ದುರ್ದೈವ ನಮ್ಮ ಗದಗ ಜಿಲ್ಲೆಯಲ್ಲಿ ಕೇವಲ 6% ಅರಣ್ಯ ಪ್ರದೇಶವಿದೆ. Ecological imbalance ಇದ್ದು, ಜೈವಿಕ ಅಸಮತೋಲನ ಇದೆ ಎನ್ನುವುದನ್ನು ತಾವು ದಯವಿಟ್ಟು ಗಮನಿಸಬೇಕು. ಜೈವಿಕ ಅಸಮತೋಲನವನ್ನು (Ecological imbalance) ನಿರ್ವಹಣೆ ಮಾಡಬೇಕಾದರೆ 33% ಅರಣ್ಯ ಪ್ರದೇಶ ಮಾಡಲಿಕ್ಕೆ ಆಗದಿದ್ದರೂ ಸಹ ಇರುವಂತಹ ಕಪ್ಪತ್ತಗುಡ್ಡವನ್ನೇ ಉಳಿಸಿಕೊಂಡು ಹೋಗಲಿಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು **ಸಂರಕ್ಷಿತ ಅರಣ್ಯ ಪ್ರದೇಶವೆಂದು ಹೇಳಿ ಏನು ಆದೇಶವನ್ನು ಮಾಡಿದ್ದೀರಿ, ಅದೇ ಆದೇಶವನ್ನು restoration ಮಾಡಿಕೊಂಡು** ಅಲ್ಲಿ ಇನ್ನಷ್ಟು ಮೂಲಭೂತ ಸೌಲಭ್ಯಗಳನ್ನು ಮಾಡಿಕೊಡಬೇಕಾಗಿದೆ ಎಂದು ಮನವಿ ಮಾಡಿರುತ್ತಾರೆ.

5. ಶ್ರೀ ರವಿಕಾಂತ್ ಅಂಗಡಿ, ವಕೀಲರು ಹಾಗೂ ಕರ್ನಾಟಕ ಪ್ರದೇಶ ಲಂಬಾಣಿ ಬಂಜಾರ ಕಲ್ಯಾಣ ಸಂಘ (ರಿ):– ಈ ಕಪ್ಪತ್ತಗುಡ್ಡದ ವಿಚಾರವಾಗಿ ಭರವಸೆಗಳ ಸಮಿತಿಯು ಇಲ್ಲಿಗೆ ಬಂದಿರುವುದು ಅಭಿನಂದನಾರ್ಹವಾದ ವಿಚಾರ. ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶವನ್ನಾಗಿ ಮಾಡುವಲ್ಲಿ ಸಾಕಷ್ಟು ಹೋರಾಟವನ್ನು ಮಾಡಲಾಗಿದೆ. ಈ ಗುಡ್ಡದ ವಿಚಾರವಾಗಿ ಸುಮಾರು 10–12 ಕೇಸ್‌ಗಳನ್ನು ಹಾಕಿಸಿಕೊಂಡು ಹೋರಾಟವನ್ನು

ಮಾಡಲಾಗುತ್ತಿದೆ.ಈ ವಿಚಾರವಾಗಿ ಜಗದ್ಗುರು ತೋಂಟದಾರ್ಯ ಸಿದ್ದಲಿಂಗ ಸ್ವಾಮೀಜಿಯವರ ನೇತೃತ್ವದಲ್ಲಿ ಹೋರಾಟ ಮಾಡಿ ಗೆಲುವನ್ನು ಪಡೆದಿದ್ದೇವೆ. ನನಗೆ ಒಂದು ವಿಚಾರದಲ್ಲಿ ಆತಂಕವಾಗುತ್ತಿದೆ. ನಾನು ಇತ್ತೀಚೆಗೆ ಪತ್ರಿಕೆಯಲ್ಲಿ ಬಂದ ವಿಚಾರವನ್ನು ಓದಿದ್ದೇನೆ. ಕಪ್ಪತ್ತಗುಡ್ಡದ ಅಭಿವೃದ್ಧಿ ವಿಚಾರವಾಗಿ ಒಂದು ತಂಡ ಬರುತ್ತದೆ ಎಂದು ಆ ಪತ್ರಿಕೆಯಲ್ಲಿ ಓದಿದ್ದೆ. ಇವತ್ತು ಧಿಡೀರ್ ಎಂದು ಇಲ್ಲಿಗೆ ಭರವಸೆಗಳ ಸಮಿತಿ ಬಂದಿದ್ದು, ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮ ಮಾಡಬೇಕೆಂದು, ಅದಕ್ಕೆ ಅಹವಾಲುಗಳು ಬೇಕೆಂದು ಹೇಳಿ ಅಹವಾಲುಗಳನ್ನು ತೆಗೆದುಕೊಳ್ಳುತ್ತಿದ್ದಾರೆನ್ನುವ ವಿಚಾರ ಗೊತ್ತಾಯಿತು. ಇದು ಒಳ್ಳೆಯ ವಿಚಾರ. ಆದರೆ, ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡುವಲ್ಲಿ ಮಂತ್ರಿಗಳು ಇರಬಹುದು, ಪೂಜ್ಯ ಸ್ವಾಮೀಜಿಗಳಿರಬಹುದು, ಪರಿಸರವಾದಿಗಳು ಇರಬಹುದು, ಸಾಕಷ್ಟು ಹೋರಾಟ ಮಾಡಿದ್ದು, ಈ ಕಪ್ಪತ್ತಗುಡ್ಡದ ಸುತ್ತ ಮುತ್ತಲಿನ ತಾಂಡಾಗಳು ಸೇರಿದಂತೆ ಸುಮಾರು 32 ಗ್ರಾಮಗಳಿವೆ, ಅಂದರೆ ಸುಮಾರು 80 ಸಾವಿರ ಎಕರೆ ಪ್ರದೇಶದಲ್ಲಿ ಇರುವಂತಹ ಜನವಸತಿಗಳನ್ನು ಒಕ್ಕಲೆಬ್ಬಿಸುವುದಿಲ್ಲವೆನ್ನುವಂತಹ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಿ, ಅವರಿಗೆ ಭರವಸೆಯನ್ನು ಕೊಟ್ಟ ನಂತರ ಬಹಳಷ್ಟು ಜನರು ನಮಗೆ ಸಾಥ್ ಕೊಟ್ಟಿರುತ್ತಾರೆ. ಈಗ ಮತ್ತೆ ಇದನ್ನು **ವನ್ಯಜೀವಿಧಾಮ ಮಾಡುತ್ತೇವೆಂದರೆ** ಆ ಜನ ನಮಗೆ ಕಲ್ಲು ತೆಗೆದುಕೊಂಡು ಹೊಡೆಯುತ್ತಾರೆ. ಆದ್ದರಿಂದ, ಇದನ್ನು ಬಹಿರಂಗವಾಗಿ ವಿರೋಧ ಮಾಡುತ್ತೇನೆ. **ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶವನ್ನಾಗಿ ಮುಂದುವರೆಸಿಕೊಂಡು** ಹೋಗಬೇಕು. ಇದಕ್ಕೆ ಎರಡು ಮಾತಿಲ್ಲ. ಇದರ ಜೊತೆಗೆ ಈ ಪ್ರದೇಶ ಅಭಿವೃದ್ಧಿಯಾಗುವುದಕ್ಕೆ ಯಾವುದೇ ಅಭ್ಯಂತರವಿಲ್ಲ. ಅದನ್ನು ಬಿಟ್ಟು ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮ ಮಾಡಲಿಕ್ಕೆ ಹೊರಟರೆ ನಾವು ಬಹಿರಂಗವಾಗಿ ಹೋರಾಟ ಮಾಡಬೇಕಾಗುತ್ತದೆ.ಏಕೆಂದರೆ, ನಾವು ಆ ಜನರಿಗೆ ಒಕ್ಕಲೆಬ್ಬಿಸುವುದಿಲ್ಲವೆಂದು ಭರವಸೆಯನ್ನು ಕೊಟ್ಟಿದ್ದೇವೆ. ಅಲ್ಲಿ ಸಾಕಷ್ಟು ಜನರು ಜೀವನೋಪಾಯಕ್ಕೆ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದಾರೆ.

ಈ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಬಸವರಾಜ ಹೊರಟ್ಟಿಯವರಿಗೆ ನಮ್ಮ ಜನಾಂಗದ ಬಗ್ಗೆ ಗೊತ್ತಿದೆ.ಶ್ರೀಮಾನ್ ಹೊರಟ್ಟಿಯವರು ಜನಾನುರಾಗಿಯಾಗಿ ಕೆಲಸ ಮಾಡುತ್ತಿದ್ದಾರೆ.ಅವರಿಗೆ ಜನರ ನಾಡಿಮಿಡಿತ ಚೆನ್ನಾಗಿ ಗೊತ್ತಿದೆ. ಇದನ್ನು ವನ್ಯಜೀವಿಧಾಮ ಮಾಡಿದರೆ ಅಲ್ಲಿನ ಜನರನ್ನು ನಾಳೆ ದಿವಸ ಒಕ್ಕಲೆಬ್ಬಿಸುವಂತಹ ಪರಿಸ್ಥಿತಿ ಬರುತ್ತದೆ. ಏಕೆಂದರೆ, ಕಾಡಿನೊಳಗಡೆ ಹೋಗಬೇಕೆಂದರೆ, ಪ್ರತಿಯೊಂದಕ್ಕೆ ಕೇಳಿಕೊಂಡು ಹೋಗಿ ಬರಬೇಕಾಗುತ್ತದೆ. ನಮ್ಮ ಜನಾಂಗದವರು ಆ ಅರಣ್ಯ ಪ್ರದೇಶದಲ್ಲಿಯೇ ಉಪ ಜೀವನ ಮಾಡುತ್ತಿದ್ದಾರೆ. ನಾವು ಮೊದಲು ಕಳ್ಳಬಟ್ಟಿ ಸಾರಾಯಿ ತಯಾರು ಮಾಡುವಂತಹ ಅವಕಾಶಗಳಿತ್ತು.ಅರಣ್ಯ ಜಮೀನನ್ನು ಉಪಯೋಗಿಸಿಕೊಳ್ಳುವಂತಹ ಅವಕಾಶಗಳಿದ್ದವು. ಆ ಸಂದರ್ಭದಲ್ಲಿ ನಾವು ಆರಾಮವಾಗಿದ್ದೆವು, ನಮಗೆ ಯಾವುದೇ ತೊಂದರೆ ಇರಲಿಲ್ಲ. ನಮ್ಮಲ್ಲಿ ಸುಧಾರಣೆ ಮಾಡಬೇಕೆಂದು ಹೇಳಿ ನಮ್ಮ ಈ ಎಲ್ಲಾ ಕಸುಬುಗಳನ್ನು ಕಸಿದುಕೊಂಡಿದ್ದು, ನಾವೀಗ ಬದಲಾವಣೆಯಾಗುತ್ತಿದ್ದೇವೆ. ಈಗ ನೀವು ನಮ್ಮನ್ನು ಒಕ್ಕಲೆಬ್ಬಿಸಿದರೆ ಮತ್ತೆ ಅದೇ ಅವಕಾಶವನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ ಎನ್ನುವುದನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಆ ಭಾಗದ ನಿವಾಸಿಗಳಿಗೆ ಭರವಸೆ ಕೊಟ್ಟಂತೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ, ನಾಳೆ ನಾವುಗಳು ಆ ತಾಂಡಗಳಿಗೆ ಹೋಗಲಿಕ್ಕೆ ಆಗುವುದಿಲ್ಲ. ನಾವು ವನ್ಯಜೀವಿಧಾಮ ಮಾಡುವುದನ್ನು ವಿರೋಧ ಮಾಡುತ್ತೇವೆ. ಅಲ್ಲಿನ ಸಾಕಷ್ಟು ಜನರು ಈಗ ಪ್ರಜ್ಞಾವಂತರಾಗಿದ್ದಾರೆ, ಯಾವುದೇ ಪ್ರಾಣಿಗಳನ್ನು ಹಿಡಿಯುವುದಾಗಲಿ, ಭೇಟೆಯಾಡುವುದಾಗಲಿ, ಗಿಡ–ಮರಗಳನ್ನು ಕಡಿಯುವುದಾಗಲಿ, ಸುಮಾರು 95% ಕಡಿಮೆಯಾಗಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಇಲ್ಲಿ ಕೆಲಸ ನಿರ್ವಹಿಸುತ್ತಿರುವಂತಹ ಅರಣ್ಯ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ.

ಈ ಕಪ್ಪತ್ತಗುಡ್ಡವನ್ನು ಉಳಿಸಿ, ಬೆಳೆಸಿ ಎನ್ನುವ ವಿಚಾರದಲ್ಲಿ ಸರ್ಕಾರ ಹೊಸ ಯೋಜನೆಗಳನ್ನು ಜಾರಿಗೊಳಿಸಬೇಕು. ಅಲ್ಲಿ ವಾಸಿಸುತ್ತಿರುವ ಜನರಿಗೆ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಹೊಸ ಪ್ರಾಜೆಕ್ಟ್‌ಗಳನ್ನು ಸರ್ಕಾರ ಹಾಕಿಕೊಳ್ಳಬೇಕು. ಮತ್ತೆ ಅಲ್ಲಿ ಗಣಿಗಾರಿಕೆ ಮಾಡುವಂತಹ ಎಲ್ಲಾ ಗಣಿಗಾರಿಕೆಯ ಲೈಸೆನ್ಸ್‌ಗಳನ್ನು ರದ್ದು ಮಾಡಬೇಕು ಹಾಗೂ ಹಿಂದೆ ಕೊಟ್ಟಿರುವ ಲೈಸೆನ್ಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ವಿಚಾರವಾಗಿ ಹೇಳುತ್ತಿದ್ದಾರೆಯೇ ಹೊರತು, ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಕಪ್ಪತ್ತಗುಡ್ಡ ಪ್ರದೇಶದಲ್ಲಿ ಸಾಕಷ್ಟು ಔಷಧಿ ಗಿಡಗಳು ಇವೆ. ಈ ವ್ಯಾಪ್ತಿಯಲ್ಲಿ ಯಾವುದಾದರೂ ಒಂದು ನ್ಯಾಚರೋಪತಿ ಆಸ್ಪತ್ರೆಯನ್ನು, ಆಯುರ್ವೇದಿಕ್ ವಿಶ್ವವಿದ್ಯಾನಿಲಯಗಳ ರೀತಿಯಲ್ಲಿ ಮಾಡಿ, ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಕಪ್ಪತ್ತಗುಡ್ಡದ ಮೇಲೆ ಮಳೆಯಾದರೆ ಸುಮಾರು ಜಿಲ್ಲೆಗಳಲ್ಲಿ ಮಳೆಯಾಗುತ್ತದೆನ್ನುವ ಭಾವನೆ ಏನಿದೆ ಅದನ್ನು ಹೆಚ್ಚು ಮಾಡಬೇಕು. ಈಗ ಕಪ್ಪತ್ತಗುಡ್ಡದ ಪ್ರದೇಶದಲ್ಲಿ ವನ್ಯಜೀವಿಗಳು ಇಲ್ಲ ಮತ್ತು ಅರಣ್ಯ ಬೆಳೆಯುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ನೀರಿನ ಸೌಲಭ್ಯ ಇದ್ದರೆ ತಾನೇ ವನ್ಯಜೀವಿಗಳು ಅಲ್ಲಿ ಇರಲಿಕ್ಕೆ ಮತ್ತು ಅರಣ್ಯ ಬೆಳೆಯಲಿಕ್ಕೆ ಸಾಧ್ಯ. ಹೀಗಾಗಿ ಅಲ್ಲಿ ಇರುವಂತಹ ಕೆರೆಗಳನ್ನು ಭರ್ತಿ ಮಾಡಬೇಕು ಅಲ್ಲಿಗೆ ತುಂಗಾಭದ್ರಾ ನದಿಯಿಂದ ನೀರು ಕೊಡುವಂತಹ ಕೆಲಸ ಆಗಬೇಕು.ಆ ಮೂಲಕ ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಮುಂದುವರೆಸಿಕೊಂಡು ಹೋಗಬೇಕು ಮತ್ತು ಇದನ್ನು **ವನ್ಯಜೀವಿ ಧಾಮ ಎಂದು ಘೋಷಿಸಬಾರದು** ಎಂದು ಸಮಿತಿಯು ಮುಂದೆ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

6. ಶ್ರೀ ಚಂದ್ರಕಾಂತ ಚವ್ಹಾಣ, ಅಧ್ಯಕ್ಷರು, ಬೆಳಗಾವಿ ವಲಯ, ಜಯಕರ್ನಾಟಕ ಸಂಘಟನೆ:– ಇಲ್ಲಿ ನೂರಾರು ಜನರು ವಾಸಿಸುತ್ತಿದ್ದಾರೆ, ನೂರಾರು ಗ್ರಾಮಗಳಿವೆ, ಇಲ್ಲಿ ಪಕ್ಕದಲ್ಲಿಯೇ ಬಿಂಕದಕಟ್ಟೆಯಿಂದ ಪ್ರಾರಂಭವಾಗಿ ಶಿಂಗಾಟಾಲೂರ ರವರೆಗೆ ಈ ಕಪ್ಪತ್ತಗುಡ್ಡ ಪ್ರದೇಶ 32 ಸಾವಿರ ಹೆಕ್ಟೇರ್‌ಗಿಂತಲೂ ಹೆಚ್ಚು ಇದೆ. ಇಲ್ಲಿ ಲಕ್ಷಾಂತರ ಜನರು ಬದುಕುತ್ತಿದ್ದಾರೆ, ಸಾವಿರಾರು ಜಾನುವಾರುಗಳಿವೆ, ಮತ್ತೆ ಅಲ್ಲಿ ವಾಸಿಸುತ್ತಿರುವ ಜನರಿಗೆ ಇದು ತಮ್ಮ ಸ್ವಂತ ಮನೆ ಎನ್ನುವುದಕ್ಕೆ ಅವರುಗಳಿಗೆ ಆಧಾರ ಇಲ್ಲ.ಅವರು ಉಳುಮೆ ಮಾಡುವಂತಹ ಜಮೀನುಗಳಿಗೆ ಆಧಾರ ಇಲ್ಲ. **ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶ ಆಗಬೇಕು,** ಅದು ಉಳಿಯಬೇಕು, ಇಲ್ಲಿ ಇರುವಂತಹ ಗಣಿ ಕಂಪನಿಗಳನ್ನು ಇಲ್ಲಿಂದ ಓಡಿಸಬೇಕೆಂದು ನಾವೆಲ್ಲರೂ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಇದು ನಿರಂತರವಾಗಿರುತ್ತದೆ.ಇವತ್ತು ಭರವಸೆಗಳ ಸಮಿತಿ ವತಿಯಿಂದ ನಮಗೆ ಭರವಸೆ ಬೇಕೇ ಬೇಕು.ಆ ಭರವಸೆ ಏನೆಂದರೆ **ಈ ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶವಾಗಿ** ಇಲ್ಲಿಗೆ ಒಂದು ವರ್ಷ ಮೂರು ತಿಂಗಳಾಗಿದೆ. ಪೂಜ್ಯ ತೋಂಟದಾರ್ಯ ಶ್ರೀಗಳ ನೇತೃತ್ವದಲ್ಲಿ ಹೋರಾಟವಾಗಿ ಸುಮಾರು 1 ವರ್ಷ 3 ತಿಂಗಳು ಆಗಿದೆ. ಇದುವರೆವಿಗೂ ಹೆಚ್ಚಿಗೆ ಒಬ್ಬ ಅರಣ್ಯ ಸಂರಕ್ಷಕರನ್ನು ಕೊಡಲಿಲ್ಲ. ಈ ಗಾಳಿ ಯಂತ್ರದ ಕಂಪನಿಯ ಕಂಬಗಳ ಘರ್ಷಣೆಯಿಂದ ಕಪ್ಪತ್ತಗುಡ್ಡ ಸುಟ್ಟು ಹೋಗುತ್ತಿದೆ. ಈ ವಿಚಾರದಲ್ಲಿ ಎಫ್‌ಐಆರ್ ಕೂಡ ದಾಖಲಾಗಿದೆ.ಆ ಕಂಪನಿಗಳ ಮೇಲೆ ಕೇಸ್‌ಗಳನ್ನು ಮಾಡಿದ್ದು, ಅವರುಗಳ ಮೇಲೆ ಏನೂ ಕ್ರಮ ಕೈಗೊಂಡಿರುವುದಿಲ್ಲ. ಕಪ್ಪತ್ತಗುಡ್ಡವನ್ನು ನಾಶ ಮಾಡಿದರೆ ಪ್ರಾಣಿ–ಪಕ್ಷಿಗಳ ಸಂಕುಲವನ್ನು ನಾಶ ಮಾಡಿದಂತಾಗುತ್ತದೆ. ಈ ವಿಚಾರದಲ್ಲಿ ಅವರ ಮೇಲೆ ಕೇಸ್‌ಗಳನ್ನು ಹಾಕಬೇಕು. ಆದರೆ, ಆ ಕೆಲಸವನ್ನು ಅರಣ್ಯ ಅಧಿಕಾರಿಗಳು ಮಾಡುತ್ತಿಲ್ಲ. ಆದರೆ, ಯಾರೋ ಒಬ್ಬ ರೈತ ಒಂದು ಸಣ್ಣ ಗಿಡವನ್ನು ಕಡಿದರೆ ಅವನನ್ನು ಎಳೆದುಕೊಂಡು ಹೋಗಿ, ಅವನನ್ನು ಹೊಡೆದು, ಬಡಿದು ಅವನ ಮೇಲೆ ಕೇಸ್ ಹಾಕುತ್ತಾರೆ. ಈ ಕೆಲಸ ಆಗಬಾರದು.ದೊಡ್ಡ ದೊಡ್ಡ ಕಂಪನಿಯವರು ಶ್ರೀಮಂತರಿದ್ದು ಅವರನ್ನು ಬಿಟ್ಟು ಬಿಡುತ್ತಾರೆ. **ಈ ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯ ಎಂದು ಘೋಷಣೆಯಾದ** ಮೇಲೆ ಇದು ಬಹಳಷ್ಟು ಅಭಿವೃದ್ಧಿಯಾಗುತ್ತದೆ ಎಂದು ನಾವೆಲ್ಲರೂ ಕನಸನ್ನು ಕಟ್ಟಿಕೊಂಡಿದ್ದೆವು. ಏತಕ್ಕೆ ಅಭಿವೃದ್ಧಿಯಾಗಲಿಲ್ಲವೆಂದು ಕ್ಲಿಯರ್ ಮಾಡಬೇಕು. **ಇದನ್ನು ವನ್ಯಜೀವಿ ಧಾಮ ಮಾಡಿದರೆ, ಅದರಳೊಗಡೆ ಹೋಗಿ ಬರುವುದಕ್ಕೆ ಆಗುವುದಿಲ್ಲ. ಇಂತಹ ವನ್ಯಜೀವಿಧಾಮ ನಮಗೆ ಬೇಕೇ?**

ಈ ಕಪ್ಪತ್ತಗುಡ್ಡ ಮೊದಲಿನಿಂದಲೂ, ಬ್ರಿಟಿಷರ ಕಾಲದಿಂದಲೂ, ನಂತರವೂ ಸಹ ಸಂರಕ್ಷಿತ ಅರಣ್ಯವಾಗಿಯೇ ಮುಂದುವರಿಯುತ್ತಿದೆ ಎಂದು ಸಮಿತಿಯು ಮುಂದೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

7. **ಶ್ರೀ ಬಿ.ವಿ.ಹಿರೇಮಠ:–** ನಾವುಗಳು ಕಪ್ಪತ್ತಗುಡ್ಡದ ಪ್ರದೇಶದಲ್ಲಿ ಸುಮಾರು ವರ್ಷಗಳಿಂದ ಸಂಶೋಧನಾ ಚಟುವಟಿಕೆಗಳನ್ನು ಮಾಡಿಕೊಂಡು ಬಂದಿರುತ್ತೇವೆ. ಇಲ್ಲಿ ಪ್ರಶ್ನೆ ಬಂದಿರುವುದು ಜನರನ್ನು ಒಕ್ಕಲೆಬ್ಬಿಸುವುದಲ್ಲ. ಇದ್ದ ಅರಣ್ಯವನ್ನು ರಕ್ಷಣೆ ಮಾಡಬೇಕಾಗಿದೆ. ಈ ವಿಚಾರ ಸಂಪೂರ್ಣವಾಗಿ ಅರಣ್ಯ ಇಲಾಖೆಯ ಕೆಳಗಡೆ ಬರಬೇಕು. ಕೇವಲ ಸಂರಕ್ಷಿತ ಅರಣ್ಯ ಪ್ರದೇಶದ ಸಮಿತಿಯನ್ನು ಮಾಡಿದರೆ ಸರಿ ಹೋಗುವುದಿಲ್ಲ. ಅದರಲ್ಲಿ ಅರಣ್ಯ ಇಲಾಖೆಯ ಒಬ್ಬ ಅಧಿಕಾರಿ ಮಾತ್ರ ಇದ್ದಾರೆ. ಆದ್ದರಿಂದ, **ಈ ಪ್ರದೇಶ ವನ್ಯಜೀವಿಧಾಮ ಎಂದು ಘೋಷಣೆಯಾಗಲೇಬೇಕು.** ಕೇವಲ ಸಂರಕ್ಷಿತ ಅರಣ್ಯ ಪ್ರದೇಶವಾಗಬಾರದು. ಈ ಭಾಗದ ಜನರಿಗೆ, ಪಕ್ಷಿ ಸಂಕುಲಕ್ಕೆ, ಅಲ್ಲಿ ಇರುವಂತಹ ಜೀವರಾಶಿಗಳಿಗೆ ಅನುಕೂಲವಾಗುತ್ತದೆ ಮತ್ತು ಅಲ್ಲಿ ಇರುವಂತಹ ಖನಿಜ ಸಂಪತ್ತು ಉಳಿಯುತ್ತದೆ. ವನ್ಯಜೀವಿಧಾಮ ಮಾಡುವುದರಿಂದ ನಮ್ಮ ಅರಣ್ಯ ಉಳಿಯುತ್ತದೆ ಮತ್ತು ನಮ್ಮ ಮುಂದಿನ ಪೀಳಿಗೆಗೆ ಇದರಿಂದ ಹೆಚ್ಚು ಲಾಭವಾಗುತ್ತದೆ.ಆದ್ದರಿಂದ, ಇದನ್ನು ಕೇವಲ ಸಂರಕ್ಷಿತ ಅರಣ್ಯ ಎಂದು ಘೋಷಿಸುವುದು ಮಾತ್ರವಲ್ಲದೇ **ಇದನ್ನು ವನ್ಯಜೀವಿಧಾಮ ಎಂದು ಘೋಷಿಸುವುದರ ಮೂಲಕ** ಅದನ್ನು ರಕ್ಷಣೆ ಮಾಡಬೇಕೆಂದು ಮತ್ತು ಅದರ ಫಲವತ್ತತೆಯನ್ನು ಉಳಿಸಬೇಕೆಂದು ಮನವಿಯನ್ನು ಸಲ್ಲಿಸಿರುತ್ತಾರೆ.

8. **ಶ್ರೀ ಶ್ರೀ ಶ್ರೀ ಜಗದ್ಗುರು ತೋಂಟದಾರ್ಯ ಸಿದ್ದಲಿಂಗಸ್ವಾಮಿಗಳ ಮಠಕ್ಕೆ ಸಮಿತಿಯು ಭೇಟಿ ನೀಡಿದ ಸಂದರ್ಭದಲ್ಲಿ:–** ಸ್ವಾಮೀಜಿಗಳು ಕಪ್ಪತ್ತಗುಡ್ಡವು ಸಹ್ಯಾದ್ರಿ ಹಿಮಾಲಯ ಇದ್ದಂತೆ, ಇದನ್ನು ಉಳಿಸಿ, ಬೆಳೆಸಬೇಕೆಂದು ತಿಳಿಸಿ, ಗಣಿಗಾರಿಕೆಗೆ ಸಂಬಂದಪಟ್ಟಂತೆ ಈ ವಿಷಯ ನ್ಯಾಯಾಲಯದಲ್ಲಿದ್ದು, ಇದಕ್ಕೆ ಸರ್ಕಾರದಿಂದ ಒಳ್ಳೆಯ ವಕೀಲರನ್ನು ಇಟ್ಟು ಕೇಸನ್ನು ನಡೆಸಬೇಕು. ಯಾವುದೇ ಕಾರಣಕ್ಕೂ ಗಣಿಗಾರಿಕೆ ಪ್ರಾರಂಭಿಸಲು ಆಸ್ಪದ ನೀಡಬಾರದೆಂದು ಆಗ್ರಹಿಸುತ್ತಾ, ಈ ವಿಚಾರದಲ್ಲಿ ಈಗಾಗಲೇ ಅನೇಕ ಮನವಿ ಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಅದರಂತೆ ಕ್ರಮಕೈಗೊಳ್ಳಬೇಕೆಂದು ಸಮಿತಿಗೆ ತಿಳಿಸಿದರು.

9. **ಶ್ರೀ ಶ್ರೀ ಶ್ರೀ ಶಾಂತವೀರ ಮಹಾಸ್ವಾಮಿಗಳು (ಶ್ರೀ ನಂದಿವೇರಿ ಸಂಸ್ಥಾನ ಮಠ):–** ನವಿಲುಗಳು ಸೇರಿದಂತೆ ಇಲ್ಲಿ ಇರುವಂತಹ ಹಲವಾರು ಪ್ರಾಣಿ ಪಕ್ಷಿಗಳಿಗೆ ಕುಡಿಯಲಿಕ್ಕೆ ನೀರಿನ ಕೊರತೆ ಇದ್ದು, ಇವುಗಳು ಕಪ್ಪತ್ತಗುಡ್ಡದ ಕೆಳಬಾಗಕ್ಕೆ ತೆರಳಿ ನೀರು ಕುಡಿದು ಬರುತ್ತವೆ. ಆದುದರಿಂದ ಇಲ್ಲಿ ಅವುಗಳಿಗೆ ಕುಡಿಯಲಿಕ್ಕೆ ನೀರಿನ ವ್ಯವಸ್ಥೆ ಮಾಡುವುದಕ್ಕೆ ಅರಣ್ಯ ಇಲಾಖೆಯವರು ಕ್ರಮ ಕೈಗೊಳ್ಳಬೇಕು. ಪ್ರಾಣಿ ಪಕ್ಷಿಗಳಿಗೆ ಕುಡಿಯಲಿಕ್ಕೆ ನೀರನ್ನು ಒದಗಿಸುವ ವಿಚಾರದಲ್ಲಿ ಶಿರಹಟ್ಟಿ ತಾಲ್ಲೂಕಿನಲ್ಲಿ ಬಹಳ ಚೆನ್ನಾಗಿ ವ್ಯವಸ್ಥೆ ಮಾಡಲಾಗಿದ್ದು ಅದರಂತೆ ಮುಂಡರಗಿ ತಾಲ್ಲೂಕಿನಲ್ಲಿಯು ಸಹ ಆರಣ್ಯ ಇಲಾಖೆಯವರು ಜರೂರಾಗಿ ಕಾರ್ಯೋನ್ಮುಖರಾಗಬೇಕೆಂದು ತಿಳಿಸಿದರು.

10. **ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿಗಣಿಗಾರಿಕೆಗೆ** ಪರವಾನಗಿ ಪಡೆದಿರುವ ರಾಮಘಡ್ ಮಿನರಲ್ಸ್ ಮತ್ತು ಮೈನಿಂಗ್ ಲಿಮಿಟೆಡ್‌ನ ಪ್ರತಿನಿಧಿ ಸಮಿತಿಗೆ ಸಲ್ಲಿಸಿರುವ ಲಿಖಿತ ಮನವಿಯನ್ನು **ಅನುಬಂಧ–5**ರಲ್ಲಿ ತೋರಿಸಲಾಗಿದೆ.

******

ಸಮಿತಿಯು ಗಮನಿಸಿದ ಅಂಶಗಳು

ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ರಾಮಘಡ್ ಮಿನರಲ್ಸ್ ಮತ್ತು ಮೈನಿಂಗ್ ಲಿಮಿಟೆಡ್ ಸಂಸ್ಥೆಯವರಿಗೆ 1967 ರಿಂದ 1997ರವರೆಗೆ ಗಣಿಗಾರಿಕೆಗೆ ಅವಕಾಶ ಮಾಡಿಕೊಡಲಾಗಿದ್ದು ನಂತರ ಗಣಿಗಾರಿಕೆ ಪರವಾನಗಿಯನ್ನು ನವೀಕರಿಸದೆ ಗಣಿಗಾರಿಕೆ ಸ್ಥಗಿತಗೊಂಡಿರುತ್ತದೆ. ಈ ಹಿಂದೆ ನಡೆದ ಗಣಿಗಾರಿಕೆಯಿಂದಾಗಿ ಅಲ್ಲಿ ಜೈವಿಕ ಅಸಮತೋಲನ ಉಂಟಾಗಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿದೆ.

ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ಒಟ್ಟು 240 ಗಾಳಿಯಂತ್ರ (ವಿಂಡ್ ಮಿಲ್)ಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ 20 ಗಾಳಿಯಂತ್ರ (ವಿಂಡ್ ಮಿಲ್)ಗಳು ಸರ್ಕಾರಿ ಸ್ವಾಮ್ಯದ ಕೆ.ಪಿ.ಟಿ.ಸಿ.ಲಿಮಿಟೆಡ್‌ಗೆ ಸೇರಿರುತ್ತದೆ. ಖಾಸಗಿ ಸಂಸ್ಥೆಗಳಾದ ಸುಜಲಾನ ಎನರ್ಜಿ ಲಿಮಿಟೆಡ್‌ಗೆ ಸೇರಿದ 129, ವಿಂಡ್ ವರ್ಲ್ಡ್ ಇಂಡಿಯಾ ಲಿಮಿಟೆಡ್‌ಗೆ (ಎನರಾಕಾನ್ ಇಂಡಿಯಾ ಲಿಮಿಟೆಡ್) ಸೇರಿದ 91 ಗಾಳಿಯಂತ್ರಗಳನ್ನು ಕಪ್ಪತ್ತಗುಡ್ಡದಲ್ಲಿ ಸ್ಥಾಪಿಸಲು ಪರವಾನಗಿ ನೀಡಿರುವುದರಿಂದ ಇಲ್ಲಿನ ಪರಿಸರಕ್ಕೆ ಹಾಗೂ ಜೀವ ಸಂಕುಲಕ್ಕೆ ಮಾರಕವಾಗಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿದೆ.

ಕಪ್ಪತ್ತಗುಡ್ಡದ ಸಾವಿರಾರು ಎಕರೆ ಅರಣ್ಯ ಪ್ರದೇಶದಲ್ಲಿ ಪ್ರಾಣಿ –ಪಕ್ಷಿಗಳು ಬೇಸಿಗೆಯಲ್ಲಿ ಕುಡಿಯುವ ನೀರಿಲ್ಲದೆ ಸಂಕಷ್ಟಕ್ಕೆ ಒಳಗಾಗಿದ್ದು, ನೀರಿಗಾಗಿ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸದಿರುವುದಕ್ಕೆ ಸಮಿತಿಯು ತನ್ನ ಅತಂಕವನ್ನು ವ್ಯಕ್ತಪಡಿಸುತ್ತದೆ. ಪ್ರಾಣಿ ಪಕ್ಷಿಗಳಿಗೆ ಕುಡಿಯಲಿಕ್ಕೆ ನೀರನ್ನು ಒದಗಿಸುವ ವಿಚಾರದಲ್ಲಿ ಶಿರಹಟ್ಟಿ ತಾಲ್ಲೂಕಿನಲ್ಲಿ ಮಾಡಿರುವ ವ್ಯವಸ್ಥೆಯಂತೆ ಮುಂಡರಗಿ ತಾಲ್ಲೂಕಿನಲ್ಲಿಯು ಸಹ ಕ್ರಮಕೈಗೊಂಡು ಕೂಡಲೇ ಕ್ರಿಯಾಯೋಜನೆಯನ್ನು ರೂಪಿಸಲು ಸಮಿತಿಯು ಸೂಚಿಸುತ್ತದೆ.

ಪ್ರಸ್ತುತ, ಅತ್ತಿಕಟ್ಟಿಯಲ್ಲಿನ ಸಂಜೀವಿನಿ ಕೊಳ್ಳ ಮತ್ತು ಕಡಕೋಳದಲ್ಲಿ ಕಲ್ಪವೃಕ್ಷವನ ಎಂಬ ಎರಡು ಔಷಧೀಯ ವನಗಳಿದ್ದು, ಔಷಧೀಯ ಸಸ್ಯಗಳನ್ನು ಬೆಳೆಸಿ/ಸಂರಕ್ಷಿಸುತ್ತಿರುವ ಇಲಾಖೆಯು ಇನ್ನು ಹೆಚ್ಚಿನ ಕಾಳಜಿಯನ್ನು ವಹಿಸಿ ಬೆಳೆಸುವ ಮೂಲಕ ಈ ಸಂಪತ್ತನ್ನು ಸಂರಕ್ಷಿಸಬೇಕಾಗಿರುತ್ತದೆ.

ಕಪ್ಪತ್ತಗುಡ್ಡ ಅರಣ್ಯ ಪ್ರದೇಶವನ್ನು ರಕ್ಷಿಸಲು ಹಾಗೂ ಅದರ ಸಮಗ್ರ ಅಭಿವೃದ್ಧಿಗೆ ಅರಣ್ಯ ಇಲಾಖೆಯವರುಇನ್ನು ಹೆಚ್ಚು ಮುತುವರ್ಜಿ ವಹಿಸಿ, ಸೂಕ್ತ ಕ್ರಮ ಜರುಗಿಸಬೇಕೆಂದು ಸಮಿತಿಯು ಸೂಚಿಸುತ್ತಾ, ಈವರೆವಿಗೂ ಇಲಾಖೆಯವರು ಅಗತ್ಯ ಹಾಗೂ ಸೂಕ್ತ ಕ್ರಮ ಕೈಗೊಳ್ಳದಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ.

ಕಪ್ಪತ್ತಗುಡ್ಡ ಅರಣ್ಯ ಭೂಮಿಯಲ್ಲಿ ತಲತಲಾಂತರದಿಂದ ಕೃಷಿ ಮಾಡಿಕೊಂಡು ಬಂದಿರುವ ಇಲ್ಲಿನ ರೈತಾಪಿ ಕುಟುಂಬದವರಿಗೆ ಕಪ್ಪತ್ತಗುಡ್ಡ ತಮ್ಮದೇ ಎನ್ನುವ ಭಾವನೆ ಮೂಡಿಸುವಂತಹ ಕಾರ್ಯವನ್ನು ಅರಣ್ಯ ಇಲಾಖೆಯವರು ಕೈಗೊಂಡು ಅವರ ಮನಸ್ಸನ್ನು ಪರಿವರ್ತನೆ ಮಾಡಬೇಕಾಗಿದೆ. ಅರಣ್ಯದಲ್ಲಿ ಕಾಡ್ಗಿಚ್ಚು ಬಿದ್ದಾಗ ನಂದಿಸಲು ಅರಣ್ಯ ಸಿಬ್ಬಂದಿಯವರು, ಜನರ ಸಹಭಾಗಿತ್ವವನ್ನು ಪಡೆಯಲು ಅನುವಾಗುವಂತೆ ಅವರಲ್ಲಿ ಜಾಗೃತಿಯನ್ನು ಮೂಡಿಸಬೇಕು. ಈ ಸಂಬಂಧದಲ್ಲಿ ಅರಣ್ಯ ಇಲಾಖೆಯವರು ಅರಣ್ಯಕ್ಕೆ ಬೆಂಕಿ ಬಿದ್ದಾಗ ಅರಣ್ಯಾಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಲು ಅನುವಾಗುವಂತೆ ಇಲಾಖೆಯ ಅಧಿಕಾರಿಗಳ ದೂರವಾಣಿ ಸಂಖ್ಯೆಗಳನ್ನು ಒಳಗೊಂಡಂತೆ ಕರಪತ್ರದ ಮೂಲಕ ವ್ಯಾಪಕ ಪ್ರಚಾರ ಮಾಡಬೇಕೆಂದು ಮತ್ತು ಕಪ್ಪತ್ತಗುಡ್ಡದಲ್ಲಿ ಎಲ್ಲಿಯಾದರೂ ಬೆಂಕಿ ಕಂಡು ಬಂದಲ್ಲಿ ಕೂಡಲೇ ಆರಣ್ಯ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಲು ಮೊಬೈಲ್ ಮೂಲಕ ಎಸ್.ಎಂ.ಎಸ್. ಹಾಗೂ ತುರ್ತು ಕರೆ ಮಾಡಲು ಅನುವಾಗುವಂತೆ ವ್ಯವಸ್ಥೆ ಮಾಡಲು ಸಮಿತಿಯು ಸೂಚಿಸುತ್ತದೆ.(ಸಮಾಜಘಾತುಕ ಚಟುವಟಿಕೆಗಳು ಕಂಡು ಬಂದಲ್ಲಿ ಪೊಲೀಸ್ ಇಲಾಖೆಗೆ ತಿಳಿಸಲು ಮಾಡಿರುವ ವ್ಯವಸ್ಥೆಯ ಮಾದರಿಯಂತೆ).

ಕಪ್ಪತ್ತಗುಡ್ಡ ಅರಣ್ಯ ಪ್ರದೇಶದ 221.82 ಹೆಕ್ಟರ್ ಪ್ರದೇಶವನ್ನು "ವನ್ಯಜೀವಿ ಧಾಮ" ಎಂದು ಘೋಷಿಸುವ ಕುರಿತು ಸರ್ಕಾರಕ್ಕೆ ಪತ್ರ ಸಂಖ್ಯೆ:D/WL/CR-26/2010-11,ದಿನಾಂಕ: 08.05.2013ರಂದು ವನ್ಯಜೀವಿ ಸಂರಕ್ಷಣಾ ಕಾಯ್ದೆ 1974ರ 26o(1)(b)ರಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸ್ಥಳೀಯ ಬಡಜನರ ಜೀವನೋಪಾಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಯನ್ನು ಮನಗಂಡು ಈ ಪ್ರಸ್ತಾವನೆಯನ್ನು ಸ್ಥಳೀಯ ಜನರು ವಿರೋಧಿಸಿದ ಕಾರಣ ಸದರಿ ಪ್ರಸ್ತಾವನೆಯನ್ನು ಸರ್ಕಾರ ಪರಿಗಣಿಸಿರುವುದಿಲ್ಲ. ದಿನಾಂಕ: 20.02.2017ರಂದು ನಡೆದ 10ನೇ ರಾಜ್ಯ ವನ್ಯಜೀವಿ ಮಂಡಲಿಯ ಸಭೆಯಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಅಧಿನಿಯಮ 36(ಎ) ಪ್ರಕಾರ "ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ" ಎಂದು ಘೋಷಿಸಲು ನಿರ್ಧರಿಸಲಾಗಿರುವುದನ್ನು ಸಮಿತಿಯು ಗಮನಿಸಿರುತ್ತದೆ.

****

ಸಮಿತಿಯ ಶಿಫಾರಸ್ಸುಗಳು

01. ಗದಗ ಜಿಲ್ಲೆಯ ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ಪ್ರಸ್ತುತ ಸ್ಥಗಿತಗೊಳಿಸಲಾಗಿರುವ ಗಣಿಗಾರಿಕೆಯನ್ನು ಯಾವುದೇ ಕಾರಣಕ್ಕೂ ಮುಂದುವರೆಸಲು ಅವಕಾಶ ನೀಡಬಾರದೆಂದು ಹಾಗೂ ಇಲ್ಲಿ ಕಲ್ಲು, ಬಂಗಾರ, ಮರಳು, ಅದಿರು ಇತ್ಯಾದಿ ಯಾವುದೇ ರೀತಿಯ ಗಣಿಗಾರಿಕೆಯನ್ನು ನಡೆಸಲು/ಸಂಶೋಧನೆ ಅಥವಾ ಸರ್ವೆ ಮಾಡಲು ಸರ್ಕಾರವು ಅನುಮತಿಯನ್ನು ನೀಡದೆ, ಕಪ್ಪತ್ತಗುಡ್ಡದ ಜೈವಿಕ ಅಸಮತೋಲನವನ್ನು (Ecological imbalance) ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳುವ ಮೂಲಕ ಅರಣ್ಯದಲ್ಲಿನ ಖನಿಜ ಸಂಪತ್ತನ್ನು ಸಂರಕ್ಷಿಸಬೇಕೆಂದು ಸಮಿತಿಯು ಸ್ಪಷ್ಟವಾಗಿ ಶಿಫಾರಸ್ಸು ಮಾಡುತ್ತದೆ.

02. ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ 235 ಪಕ್ಷಿ ಪ್ರಭೇದಗಳು ಇದ್ದು, ಇಂಡಿಯನ್ ಹಾರ್ನ್‌ಬಿಲ್ ಹಕ್ಕಿಗಳ ವಾಸ ತಾಣವಾಗಿರುವ ಈ ಪ್ರದೇಶದಲ್ಲಿ ಅಳವಡಿಸಿರುವ ಪವನ ವಿದ್ಯುತ್ ಯಂತ್ರಗಳ ಫ್ಯಾನ್ ಶಬ್ದದಿಂದ ಮೃದು ಸ್ವಭಾವದ ಅನೇಕ ಪಕ್ಷಿಗಳು ಕಣ್ಮರೆಯಾಗುತ್ತಿವೆ. ಈ ಸಮಸ್ಯೆಯ ನಿವಾರಣೆಗೆ ವೈಜ್ಞಾನಿಕ ರೀತಿಯಲ್ಲಿ ಕ್ರಮಕೈಗೊಂಡು ಪಕ್ಷಿಗಳು ಕಣ್ಮರೆಯಾಗುತ್ತಿರುವುದನ್ನು ಹಾಗೂ ಉಂಟಾಗುತ್ತಿರುವ ಕಾಡ್ಗಿಚ್ಚನ್ನು ತಡೆಗಟ್ಟಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

03. ಸರ್ಕಾರದ ವತಿಯಿಂದ ಕೆಲವು ಗಾಳಿ ಯಂತ್ರಗಳನ್ನು ಸ್ಥಾಪಿಸುವುದರ ಮೂಲಕ ಹಾಗೂ ಖಾಸಗಿಯವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗಾಳಿ ಯಂತ್ರಗಳನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟಿರುವುದರಿಂದ ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ. ಇನ್ನು ಮುಂದೆ ಸರ್ಕಾರದ ವತಿಯಿಂದಾಗಲಿ ಅಥವಾ ಖಾಸಗಿ ವಲಯದಿಂದಾಗಲಿ ಪವನ ವಿದ್ಯುತ್ ಯಂತ್ರಗಳನ್ನು ಕಡ್ಡಾಯವಾಗಿ ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ಸ್ಥಾಪಿಸಬಾರದೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

04. ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ವನ್ಯಜೀವಿಗಳು–ಪಕ್ಷಿಗಳು ಅಪಾರ ಸಂಖ್ಯೆಯಲ್ಲಿದ್ದು ಇಲ್ಲಿ ಪ್ರಾಣಿ–ಪಕ್ಷಿಗಳಿಗೆ ಕುಡಿಯಲು ನೀರಿನ ಕೊರತೆ ಇರುವುದರಿಂದ ನೂರಾರು ಪ್ರಾಣಿ–ಪಕ್ಷಿಗಳು ಮೃತಪಡುತ್ತಿವೆ. ಇದನ್ನು ತಡೆಗಟ್ಟಲು ಈಗಾಗಲೇ ಶಿರಹಟ್ಟಿಯಲ್ಲಿ ಕೈಗೊಂಡಿರುವ ಯೋಜನೆಯಂತೆ ಕಪ್ಪತ್ತಗುಡ್ಡದ ಮೇಲುಗಡೆಗೆ ನೀರನ್ನು ತರುವ ಸಲುವಾಗಿ ಪೈಪ್ ಲೈನ್ ಅಳವಡಿಸಲು ಹಾಗೂ ಮೇಲ್ಭಾಗದಲ್ಲಿ ನೀರಿನ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಿ ಎಲ್ಲೆಲ್ಲಿ ನೀರಿನ ಅವಶ್ಯಕತೆ ಇದೆಯೋ ಅಲ್ಲಲ್ಲಿ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಿಹೊಂಡಗಳಿಗೆ ನೀರನ್ನು ತುಂಬಿಸುವ ನಿಟ್ಟಿನಲ್ಲಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಅರಣ್ಯ ಇಲಾಖೆಯವರು ಸಂಬಂಧಪಟ್ಟ ಇತರ ಬೇರೆ ಬೇರೆ ಇಲಾಖೆಯವರೊಡನೆ ಸಮನ್ವಯ ಸಾಧಿಸಿ ಸಮರೋಪಾದಿಯಲ್ಲಿ ಅಗತ್ಯ ಕ್ರಮಕೈಗೊಳ್ಳಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

05. ಕಪ್ಪತ್ತಗುಡ್ಡದ ಕೆಳಭಾಗದಲ್ಲಿರುವ ಡೋಣಿ ಗ್ರಾಮದ ನಿವಾಸಿಗಳು ತಲೆಮಾರುಗಳಿಂದ ಇಲ್ಲಿ ವಾಸಿಸುತ್ತಿದ್ದು, ಇಲ್ಲಿನ ಭೂಮಿಯನ್ನು ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಿರುವುದರಿಂದ, ಅವರುಗಳು ಉಳುಮೆ ಮಾಡುತ್ತಿರುವ ಭೂಮಿಗೆ ಸಂಬಂಧಿಸಿದಂತೆ ನಿಯಮಾನುಸಾರ ಪಟ್ಟಾ ನೀಡಿ, ಅದನ್ನು ಸಕ್ರಮಗೊಳಿಸಲು ಹಾಗೂ ಇಲ್ಲಿರುವ ತಾಂಡಾಗಳು, ಹಾಡಿ–ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಕೂಡಲೇ ಪರಿವರ್ತಿಸಲು ಕ್ರಮಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಅರಣ್ಯ ಒತ್ತುವರಿ ಮಾಡುವುದನ್ನು ತಪ್ಪಿಸಬಹುದೆಂದು ಸಮಿತಿ ಅಭಿಪ್ರಾಯಪಡುತ್ತದೆ.

06. ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ನೈಸರ್ಗಿಕವಾಗಿ ಶ್ರೀಗಂಧದ ಮರಗಳು ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಅವುಗಳನ್ನು ಕಳ್ಳಕಾಕರು ಲೂಟಿ ಮಾಡುವುದನ್ನು ತಡೆಗಟ್ಟಲು ಹೆಚ್ಚಿನ ಸಂಖ್ಯೆಯಲ್ಲಿ ಅರಣ್ಯ ಸಂರಕ್ಷಕ ಸಿಬ್ಬಂದಿಯವರನ್ನು ನಿಯೋಜಿಸಲು ಹಾಗೂ ಇಲ್ಲಿರುವ ನೀಲಗಿರಿ ಮರಗಳನ್ನು

ತೆರವುಗೊಳಿಸಲು ಕ್ರಮಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಪ್ರತಿ 50 ಎಕರೆಯ ಪ್ರದೇಶಗಳನ್ನು ವಿಂಗಡಿಸಿ ಅವುಗಳಲ್ಲಿ ಗಂಧದ ಮರಗಳನ್ನು ಬೆಳೆಸಲು ನೀಲನಕ್ಷೆಯನ್ನು ತಯಾರಿಸಿ ಮುಂದೆ ಆಗುವಂತಹ ಅನಾಹುತಗಳನ್ನು ತಪ್ಪಿಸುವುದಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

07. ಕಪ್ಪತ್ತಗುಡ್ಡವು ಔಷಧೀಯ ಸಸ್ಯಗಳ ಆಗರವಾಗಿದ್ದು, ಇಲ್ಲಿ ದೊರೆಯುವ ಪ್ರತಿಯೊಂದು ಸಸ್ಯವು ಔಷಧಿಯುಕ್ತ ಸಸ್ಯಗಳಾಗಿರುತ್ತವೆ. ಕಪ್ಪತ್ತಗುಡ್ಡದಲ್ಲಿ 423ಕ್ಕೂ ಹೆಚ್ಚು ವಿವಿಧ ಜಾತಿಯ ಔಷಧಿಯ ಸಸ್ಯ ಪ್ರಭೇದಗಳಿದ್ದು ಅವುಗಳನ್ನು ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ "ದೈವಿವನ" ನಿರ್ಮಿಸಲು ಯೋಜನೆಯನ್ನು ರೂಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತಾ ಕಪ್ಪತ್ತಗುಡ್ಡ ಅರಣ್ಯ ಪ್ರದೇಶದಲ್ಲಿ ಇನ್ನು ಹೆಚ್ಚಿನ ಔಷಧೀಯ ಸಸಿಗಳನ್ನು ನೆಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

08. ಗದಗ ಜಿಲ್ಲೆಯ ಕಪ್ಪತ್ತಗುಡ್ಡ ಅರಣ್ಯ ಪ್ರದೇಶಗಳನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಸೆಕ್ಷನ್–36ಎ ಪ್ರಕಾರ "**ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ**" ಎಂದು ಘೋಷಿಸಬೇಕೇ ಅಥವಾ "**ಕಪ್ಪತ್ತಗುಡ್ಡ ವನ್ಯಜೀವಿಧಾಮ**" ಎಂದು ಘೋಷಿಸಬೇಕೇ ಎಂಬ ಬಗ್ಗೆ ಸಮಿತಿಯು ಸುದೀರ್ಘವಾಗಿ ಚರ್ಚೆ ಮಾಡಿರುತ್ತದೆ. ಅಲ್ಲದೆ, ಸಮಿತಿಯು ಸ್ಥಳ ಪರಿವೀಕ್ಷಣೆ ಮಾಡಿ ಪರಿಶೀಲಿಸಲಾಗಿ, ಕಪ್ಪತ್ತಗುಡ್ಡದ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಸುಮಾರು 32 ಹಳ್ಳಿಗಳ ಜನರು ಕಪ್ಪತ್ತಗುಡ್ಡ ಅರಣ್ಯ ಪ್ರದೇಶವನ್ನು "ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ" ಎಂದು ಘೋಷಿಸಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಸಮಿತಿಯು ಕಪ್ಪತ್ತಗುಡ್ಡ ಅರಣ್ಯ ಪ್ರದೇಶ ಸಂರಕ್ಷಣೆ ಆಗಬೇಕು ಮತ್ತು ಅಲ್ಲಿನ ಜನರಿಗೆ ತೊಂದರೆ ಆಗಬಾರದೆಂದು, ದಿನಾಂಕ:20.02.2017ರಂದು ರಾಜ್ಯ ವನ್ಯಜೀವಿ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಅಧಿಸೂಚನೆ ಸಂಖ್ಯೆ: FEE-291/FWL/2016, ದಿನಾಂಕ: 11.04.2017ರಂತೆ ಕಪ್ಪತ್ತಗುಡ್ಡ ಅರಣ್ಯ ಪ್ರದೇಶವನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಸೆಕ್ಷನ್–36ಎ ಪ್ರಕಾರ "**ಕಪ್ಪತ್ತಗುಡ್ಡ ಸಂರಕ್ಷಿತ ಮೀಸಲು ಪ್ರದೇಶ**" ಎಂದು ಘೋಷಿಸಿರುವುದನ್ನು ತ್ವರಿತವಾಗಿ ಅನುಷ್ಠಾನಗೊಳಿಸುವ ದಿಶೆಯಲ್ಲಿ ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶದ ವ್ಯವಸ್ಥಾಪನಾ ಸಮಿತಿ ರಚನೆಗೆ ಕೂಡಲೇ ಪ್ರಕ್ರಿಯೆಗಳನ್ನು ಪ್ರಾರಂಭಿಸಿ ವ್ಯವಸ್ಥಾಪನಾ ಸಮಿತಿಯ ರಚನೆಯನ್ನು ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತಾ, ಈ ಭರವಸೆ ಸಂಖ್ಯೆ:5424/2014ನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿರುತ್ತದೆ.

ಬೆಂಗಳೂರು
ದಿನಾಂಕ:24.04.2018

ಬಸವರಾಜ ಎಸ್.ಹೊರಟ್ಟಿ
ಅಧ್ಯಕ್ಷರು
ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ

ಕೆ.ಆರ್.ಮಹಾಲಕ್ಷ್ಮಿ
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಅನುಬಂಧ - 1

ವಿಪ(೧೦೯೭) 05:50 25/11/2013 ಸಿಎಸ್‌ಎಂಕೆ

ಗಮನ ಸೆಳೆಯುವ ಸೂಚನೆಗಳು

ಶ್ರೀಮತಿ ತಾರಅನುರಾಧ(ಕ್ಷೇತ್ರ):- ಮಾನ್ಯ ಸಭಾಪತಿಯವರೆ,ಗದಗ ಜಿಲ್ಲೆಯ ಕಪ್ಪತಗುಡ್ಡದಲ್ಲಿರುವ ಹದಿನೇಳು ಸಾವಿರ ಎಕರೆ ಅರಣ್ಯ ಪ್ರದೇಶವು ಔಷಧಿ ಸಸ್ಯಗಳ ಹಾಗೂ ವನ್ಯ ಜೀವಿಗಳ ಪ್ರಮುಖ ತಾಣವಾಗಿರುತ್ತದೆ. ಈ ಪ್ರದೇಶದಲ್ಲಿ ಅಕ್ರಮವಾಗಿ ಅರಣ್ಯ ಒತ್ತುವರಿ ಹಾಗೂ ಕಲ್ಲು ಗಣಿಗಾರಿಕೆಯಿಂದಾಗಿ ಪರಿಸರಕ್ಕೆ ಧಕ್ಕೆಯಾಗಿರುವುದಲ್ಲದೇ ಹಾಗೂ ವನ್ಯ ಜೀವಿಗಳು ವಿನಾಶದ ಅಂಚಿಗೆ ತಲುಪಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ:ತಾರಾ ಅನುರಾಧ ಇವರು ನಿಯಮ 72 ರ ಅಡಿಯಲ್ಲಿ ನೀಡಿರುವ

ಗಮನ ಸೆಳೆಯುವ ಸೂಚನಾ ಪತ್ರ

ಅಮೂಲ್ಯ ಔಷಧಿಯ ಸಸ್ಯ ಮತ್ತು ವನ್ಯ ಜೀವಿಗಳಿಗೆ ಆಶ್ರಯ ನೀಡಿರುವ ಗದಗ ಜಿಲ್ಲೆ ಕಪ್ಪತ್ ಗುಡ್ಡದಲ್ಲಿ ಅಕ್ರಮ ಗಣಿಗಾರಿಕೆಯಿಂದ ಆಪತ್ತು ಬಂದೊದಗಿದೆ. ಸುಮಾರು 17,000 ಎಕರೆ ಪ್ರದೇಶದ ವ್ಯಾಪ್ತಿಯಿರುವ ಮತ್ತು 21,000ಕ್ಕೂ ಹೆಚ್ಚು ಔಷಧೀಯ ಸಸ್ಯಗಳನ್ನು ಹೊಂದಿರುವ ಕಪ್ಪತ್ ಗುಡ್ಡವು ಗಣಿಗಾರಿಕೆಯಿಂದ ನಲಗುತ್ತಿದೆ. ಅರಣ್ಯ ಒತ್ತುವರಿ ತೆರವುಗೊಳಿಸಿ ಸರ್ಕಾರಿ ಭೂಮಿ ಹಾಗೂ ಅರಣ್ಯ ಸಂರಕ್ಷಣೆ ಮಾಡಬೇಕು ಎಂದು ಅರಣ್ಯ ಇಲಾಖೆಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಇಲ್ಲಿ ವ್ಯತಿರಿಕ್ತವಾಗಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಪರಿಸರಕ್ಕೆ ಧಕ್ಕೆ ಉಂಟಾಗಿದೆ ಮತ್ತು ಪರಿಸರವಾದಿಗಳು ಈಗಾಗಲೇ ಸರ್ಕಾರಕ್ಕೆ ಹಲವಾರು ಮನವಿಗಳನ್ನು ಸಲ್ಲಿಸಿದ್ದಾರೆ. ಅಕ್ರಮ ಕಲ್ಲು ಗಣಿಗಾರಿಕೆಗೆ ಉಪಯೋಗಿಸುವ ದೈತ್ಯ ಯಂತ್ರಗಳ ಭಾರೀ ಸದ್ದಿನಿಂದ ವನ್ಯ ಜೀವಿಂಗಳು ನಾಡಿಗೆ ನುಗ್ಗುತ್ತಿವೆ ಮತ್ತು ಮನುಷ್ಯರೂ ಈ ಕಾಡು ಪ್ರಾಣಿಗಳಿಗೆ ಆಹಾರವಾದರೂ ಆಶ್ಚರ್ಯವಿಲ್ಲ. ಮೊದಲಿನಿದಲೂ ಅಪರೂಪದ ಔಷಧೀಯ ಸಸ್ಯಗಳ ತಾಣವಾತ ಕಪ್ಪತ್ ಗುಡ್ಡ ಅಕ್ರಮ ಕಲ್ಲು ಗಣಿಗಾರಿಕೆಯಿಂದ ದಿನೇ ದಿನೇ ಬರಡಾಗುತ್ತಿದೆ ಮತ್ತು ಅಮೂಲ್ಯ ಔಷಧೀಯ ವನಸ್ಪತಿಗಳು ವಿನಾಶದ ಅಂಚಿಗೆ ತಲುಮವ ಮುನ್ನ ಸರ್ಕಾರವು ಇವುಗಳನ್ನು ರಕ್ಷಿಸಲು ಕಠಿಣ ಕಾನೂನು ಕ್ರಮಗಳನ್ನು ಜರುಗಿಸಲು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

ಸರ್ಕಾರದ ಹೇಳಿಕೆ

1) ಗದಗ ಜಿಲ್ಲೆ ಮುಂಡರಗಿ ತಾಲೂಕು ಡೋಣಿ ಗ್ರಾಮದಲ್ಲಿ (ಕಪ್ಪತ್ ಗುಡ್ಡದ ಅರಣ್ಯ ಪ್ರದೇಶ) ಶ್ರೀ ಎಚ.ಆರ್.ದೊಡ್ಡಣ್ಣನವರ ಮತ್ತು ಮೆ|| ಆಶಾ ಟ್ರಾನ್ಸಪೋರ್ಟ ಇವರಿಗೆ ಕಬ್ಬಿಣ ಅದಿರಿನ ಗಣಿಗಾರಿಕೆಗಾಗಿ ML No: 675 ಮತ್ತು ML No: 733 ಕಬ್ಬಿಣ ಅದಿರು ಗಣಿ ಗುತ್ತಿಗೆಗಳನ್ನು ದಿನಾಂಕ: 16-3-1967 ಮತ್ತು ದಿನಾಂಕ: 23-11-1967 ರಿಂದ 30 ವರ್ಷಗಳಿಗೆ ಮಂಜೂರಾಗಿದ್ದು, ಗುತ್ತಿಗಗಳ ಅವಧಿ ಮುಕ್ತಾಯವಾಗಿರುತ್ತದೆ. ಮೆ||ಆಶಾ ಟ್ರಾನ್ಸಪೋರ್ಟ ಇವರಿಗೆ ಸಂಬಂಧಿಸಿದ ನವೀಕರಣ ಅರ್ಜಿಯನ್ನು ತಿರಸ್ಕರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಶ್ರೀ ಎಚ.ಆರ್.ದೊಡ್ಡಣ್ಣನವರ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯಿಂದ ಪರಿಸರ ವಿಮೋಚನಾ ಪತ್ರ ನೀಡಿಲ್ಲವಾದ್ದರಿಂದ ಗಣಿಗುತ್ತಿಗೆ ನವೀಕರಣವಾಗಿರುವುದಿಲ್ಲ. ಕಪ್ಪತ್ ಗುಡ್ಡ ಪ್ರದೇಶದ ವ್ಯಾಪ್ತಿಯಲ್ಲಿ ಹೊಸದಾಗಿ ಯಾವುದೇ ಗಣಿಗುತ್ತಿಗೆಗಳನ್ನು ಮಂಜೂರು ಮಾಡಿರುವುದಿಲ್ಲ.

2) 2009ನೇ ಸಾಲಿನಲ್ಲಿ ಅರಣ್ಯ ಇಲಾಖೆಯಿಂದ ಹಿರೇವಡ್ಡಟ್ಟಿ ಹಾಗೂ ಡೋಣಿ ಗ್ರಾಮದ ಸರಹದ್ದಿನಲ್ಲಿ ಸುಮಾರು 30,482 ಟನ ಕಬ್ಬಿಣದ ಅದಿರನ್ನು ಅನಧಿಕೃತವಾಗಿ ಗಣಿಗಾರಿಕೆ ನಡೆಸಿ ಸಂಗ್ರಹಿಸಿರುವುದನ್ನು ಜಪ್ತು ಮಾಡಿ ಬಹಿರಂಗ ಹರಾಜು ಮೂಲಕ ರೂ.1,88,56,826/- ಗಳಿಗೆ ವಿಲೇ ಮಾಡಲಾಗಿರುತ್ತದೆ.

3) 2010 ನೇ ಸಾಲಿನಲ್ಲಿ ಕಪ್ಪತ್ ಗುಡ್ಡದ ಪ್ರದೇಶದ ಹಿರೇವಡ್ಡಟ್ಟಿ ಗ್ರಾಮ ಹಾಗೂ ಇತರೆ ಗ್ರಾಮಗಳಲ್ಲಿ ಅನಧಿಕೃತ ಗಣಿಗಾರಿಕೆಯಿಂದ ಸಂಗ್ರಹಿಸಲಾದ ಸುಮಾರು 10,671 ಮ.ಟನ ಅದಿರು

ಸರ್ಕಾರದ ವಶಕ್ಕೆ ತೆಗೆದುಕೊಂಡು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರೂ.1,04,80,000/- ಗಳಿಗೆ ಹರಾಜು ಮಾಡಲಾಗಿರುತ್ತದೆ.

4) ಕಪ್ಪತಗುಡ್ಡ ಪ್ರದೇಶದ ವ್ಯಾಪ್ತಿಯಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1) ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಕಪ್ಪತ್ ಗುಡ್ಡ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಗಣಿ ಗುತ್ತಿಗೆಯನ್ನು ಮಂಜೂರು ಮಾಡಿರುವುದಿಲ್ಲ.

2) ಅನಧಿಕೃತ ಕಬ್ಬಿಣದ ಅದಿರು ಗಣಿಗಾರಿಕೆಗೆ ಸಂಬಂಧಿಸಿದಂತೆ ಮುಂಡರಗಿ ತಾಲೂಕು, ವಿರುಪಾಪುರ, ಕಲಕೇರಿ ಹಾಗೂ ಹರೇವಡ್ಡಟ್ಟಿ ಗ್ರಾಮ ವ್ಯಾಪ್ತಿಯಲ್ಲಿ ಒಟ್ಟು 14 ಜನರ ಮೇಲೆ ಮುಂಡರಗಿ ಪೋಲೀಸ ಠಾಣೆಯಲ್ಲಿ MM(D&R) Act 1957,ಸೆಕ್ಷನ್ 4(1) ಮತ್ತು 4(1A) ಅಡಿಯಲ್ಲಿ ಅಪರಾಧ ಸಂಖ್ಯೆ: 132/08, ದಿನಾಂಕ: 17-7-2008 ರಂದು ಕೇಸ ದಾಖಲಿಸಿರುತ್ತದೆ. ಈ ಪ್ರದೇಶದಲ್ಲಿ ಕಲ್ಲುಗಣಿಗಾರಿಕೆ ಸಂಬಂಧಿಸಿದಂತೆ ಯಾವುದೇ ಅನುಮತಿ ನೀಡಿರುವುದಿಲ್ಲ.

3) ಕಪ್ಪತ್‌ಗುಡ್ಡ ಪ್ರದೇಶವು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುತ್ತಿದ್ದು, ಅರಣ್ಯ ಇಲಾಖೆಯು ಸದರಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯದಂತೆ ಅರಣ್ಯ ಇಲಾಖೆಯವರು ಈ ಕೆಳಗಿನ ಕ್ರಮ ಕೈಗೊಂಡಿರುವುದಾಗಿ ಹಿರಿಯ ಭೂವಿಜ್ಞಾನಿ, ಗದಗರವರು ದಿನಾಂಕ: 19-11-2013ರ ಪತ್ರದಲ್ಲಿ ತಿಳಿಸಿರುತ್ತಾರೆ.

5) ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಚಟುವಟಿಕೆ ನಡೆದಂತೆ ರಸ್ತೆಗಳಿಗೆ ಅಡ್ಡಲಾಗಿ ದೊಡ್ಡ ದೊಡ್ಡ ಟ್ರಂಚಗಳನ್ನು ತೆಗೆಸಿರುತ್ತಾರೆ.

1) ಅರಣ್ಯ ಪ್ರದೇಶದಲ್ಲಿ ಯಾವುದೇ ಅನಧಿಕೃತ ಗಣಿಗಾರಿಕೆ ಮತ್ತು ಇತರೆ ಅಕ್ರಮ ಚಟುವಟಿಕೆಗಳು ನಡೆಯದಂತೆ ಮುಂಜಾಗ್ರತ ಕ್ರಮವಾಗಿ ರಸ್ತೆಗಳಿಗೆ ಅಡ್ಡಲಾಗಿ ದೊಡ್ಡ ದೊಡ್ಡ ಟ್ರಂಚಗಳನ್ನು ತೆಗೆಯಿಸಿ ರಸ್ತೆಗಳನ್ನು ಸಂಪೂರ್ಣವಾಗಿ ತಡೆಗಳನ್ನು ನಿರ್ಮಾಣ ಮಾಡಿ ಅಲ್ಲಿ ಯಾವುದೇ ವಾಹನ ಸಂಚಲಿಸದಂತೆ ಕ್ರಮ ಕೈಗೊಳ್ಳಲಾಗಿದೆ.

2) ಅರಣ್ಯ ಪ್ರದೇಶದ ಗಡಿಗಳನ್ನು ನಿಖರವಾಗಿ ಗುರುತಿಸಿ, ಅರಣ್ಯ ಪ್ರದೇಶದ ಸುತ್ತಲೂ Cattle Proof Boundary Trench ಗಳನ್ನು ತೆಗೆಸಿರುತ್ತಾರೆ.

3) ಅರಣ್ಯ ಪ್ರದೇಶಗಳಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಗದಗರವರು ಪ್ರತಿ ತಿಂಗಳು ಸಭೆಯನ್ನು ಕರೆದು ಎಲ್ಲಾ ವಲಯ ಅರಣ್ಯಾಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುತ್ತಿರುತ್ತಾರೆ.

ಸಂಖ್ಯೆ: ಸಿ.ಐ. 45 ಎಂ.ಪಿ.ಪಿ 2013

(ಸಿದ್ದರಾಮಯ್ಯ)
ಮುಖ್ಯ ಮಂತ್ರಿ

ವಿಪ(1097) 05:50 25/11/2013

ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-ಮಾನ್ಯ ಸಭಾಪತಿಗಳೇ, ಈ ವಿಚಾರದಲ್ಲಿ ಕಾನೂನು ಪ್ರಕಾರ ಏನೆಲ್ಲಾ ಮಾಡಬೇಕೋ ಅದನ್ನೆಲ್ಲ ಸರ್ಕಾರ ಮಾಡಿದೆ. ಅಲ್ಲಿ ಅಧಿಕಾರಿಗಳನ್ನು ಕೂಡ ನೇಮಿಸಲಾಗಿದೆ. ಆದರೆ ನಾನು ಕಳೆದ ೧೬ನೇ ತಾರಿಖಿನಂದು ನಾನು ಅಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇವೆಲ್ಲವೂ ಇನ್ನು ನಡೆಯುತ್ತಿದ್ದನ್ನು ನೋಡಿದೆನು. ಈಗ ಅಲ್ಲಿ windmill ಗಳನ್ನು ಹಾಕುವ ಸಂದರ್ಭದಲ್ಲಿ ರಸ್ತೆಗಾಗಿ ಜೆಸಿಬಿಯಿಂದ ಅಗೆಸಿರುವುದನ್ನೆಲ್ಲ ಗಣಿಯ ಜೊತೆಯಲ್ಲಿ ಹಾಕಿಕೊಂಡು ಬರುತ್ತಾರೆ. ಈ ವಿಚಾರ ಅಲ್ಲಿರುವ ಅಧಿಕಾರಿಗಳಿಗೆ ಮತ್ತು ಪೊಲೀಸಿನವರಿಗೂ ಸಹ ಗೊತ್ತಿದೆ. ಕಳೆದ ಅಧಿವೇಶನದಲ್ಲೂ ಸಹ ಮುಖ್ಯಮಂತ್ರಿಗಳು ಇದನ್ನೆಲ್ಲನಿಲ್ಲಿಸಿರುವುದಾಗಿ ಹೇಳಿದರು. ಆದರೆ ೧೬ನೇ ತಾರಿಖಿನಂದು ನಾನು ಅಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇವೆಲ್ಲವೂ ಇನ್ನು ನಡೆಯುತ್ತಿದ್ದನ್ನು ನೋಡಿದೆನು. ಈ ವಿಚಾರ ಪತ್ರಿಕೆಗಳಲ್ಲೂ ಸಹ ಬಂದಿದೆ. ಸ್ವಾಮಿಗಳನ್ನು ಕೂಡ ನಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿ ಅಲ್ಲೆಲ್ಲಾ ನೋಡಿ ಬಂದಿದ್ದೇವೆ. ಸರ್ಕಾರ ಅಲ್ಲಿ ಬಂಗಾರದ ನಿಕ್ಷೇಪವನ್ನು ಮಾಡಲು ಪರವಾನಗಿಯನ್ನು ನೀಡಿದೆ. ಅಲ್ಲಿ ಮತ್ತಿಕಟ್ಟಿ ಎನ್ನುವ ಒಂದು ಊರು ಇದೆ. ಆ ಊರನ್ನು ಬಿಟ್ಟು ಬೇರೆ ಕಡೆಗಳೆಲ್ಲ೨೦೦೦ ಅಡಿ ಆಳ ಅಗೆದಿದ್ದಾರೆ. ಅದರಿಂದ ವಿಷವಾಯು ಹೊರಕ್ಕೆ ಬರುತ್ತಿದೆ. ಇವತ್ತಿಗೂ ಸಹ ಅಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಕಾನೂನಿನ ಪ್ರಕಾರ ಸರ್ಕಾರ ಉತ್ತರ ನೀಡಿರುವುದು ಸರಿಯಾಗಿಯೇ ಇದೆ. ನಾನು ಅಲ್ಲಿಗೆ ಹೋಗಿದ್ದು ನೋಡಿ ಬಂದಿದ್ದೇನೆ, ಅಲ್ಲಿನ ಮತದತನಕ ಹೋಗಿದ್ದೆನು, ಅಲ್ಲೆಲ್ಲಾ trench ಕಟ್ಟಿದ್ದಾರೆ. ಹಳ್ಳಿಯ ಜನರಿಗೂ ಸಹ ದನಕರುಗಳಿಗೆ ಸಣ್ಣ ಸಣ್ಣ ದಾರಿಯನ್ನು ಸಹ ಬಿಟ್ಟಿರುವುದಿಲ್ಲ. ಇಲ್ಲಿ windmill ಗೆ ಹೋಗುವಂತಹ ದಾರಿಗಳನ್ನು ನೋಡಿದರೆ ಗೊತ್ತಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು ನಮ್ಮನ್ನು ಕರೆದುಕೊಂಡು ಹೋಗಲಿ. ಅಲ್ಲಿ ಇವತ್ತಿನವರೆಗೂ ಗಣಿಗಾರಿಕೆ ನಡೆಯುತ್ತಿದೆ. ಪೊಲೀಸಿನವರು ಕೇಳಿದರೆನಾವು ರಸ್ತೆ ಮಾಡಿದ್ದೇವೆ ಅದರ ಮಣ್ಣು ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳುತ್ತಾರೆ. ಪೊಲೀಸಿನವರದ್ದು ನಮಗೆ ಗೊತ್ತಿದೆ, ಅವರಿಗೆ ಅವರ ಮಾಮೂಲು ತಲುಪುತ್ತದೆ. ಆಗ ಅವರು ಎಲ್ಲಾ ಸರಿ ಕಾಯಿದೆ ಪ್ರಕಾರ ಇದೆ ಎಂದು ಹೇಳುತ್ತಾರೆ. ಸರ್ಕಾರ Baldota ಎನ್ನುವರಿಗೆ ಬಂಗಾರದ ನಿಕ್ಷೇಪಕ್ಕೆ ಅನುಮತಿಯನ್ನು ನೀಡಿದ್ದಾರೆ. ಅವರು ೨೦೦೦ ಅಡಿಗಳವರೆವಿಗೂ ಅಗೆದಿದ್ದಾರೆ. ನಾನೇ ಸ್ವತಃ ಹೋಗಿ ನೋಡಿದ್ದೇನೆ. ಇದು ನಿಜವಲ್ಲದಿದ್ದರೆ ಸರ್ಕಾರ ಹೇಳಲಿ. ಮತ್ತಿಕಟ್ಟಿ ಎನ್ನುವ ಊರಲ್ಲಿ ಅನುಮತಿ

ನೀಡಿದ್ದಾರೆ, ಅದನ್ನು ಬಿಟ್ಟು ಬಾಕಿ ಕಡೆಯೆಲ್ಲಾ ಅಕ್ರಮವಾಗಿ ನಡೆಯುತ್ತಿವೆ. ಕಪ್ಪತಗುಡ್ಡದಲ್ಲಿ ಬಹಳಷ್ಟು ಅಕ್ರಮ ನಡೆಯುತ್ತಿದ್ದಾರೆ. ನಾನು ಇತ್ತೀಚೆಗೆ ನೋಡಿ ಬಂದ ಕಾರಣ ಅಧಿಕೃತವಾಗಿ ಇದನ್ನೆಲ್ಲ ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ವೆರಿಫೈ ಮಾಡಿಸಬೇಕು. ಇದರ ಬಗ್ಗೆ ಉಸ್ತುವಾರಿ ಸಚಿವರು ಹೇಳಲಿ, ನಾನು ನೋಡಿದಂತೆ Baldota ರವರು ಅನುಮತಿ ಕೊಟ್ಟಿರುವ ಕಡೆ ಬಿಟ್ಟು ಬೇರೆ ಎಲ್ಲಾ ಕಡೆಗಳಲ್ಲಿಯೂ ಕಡೆ ಇವತ್ತಿಗೂ ನಡೆಸುತ್ತಿದ್ದಾರೆ.

(ಮುಂದು)

ಶ್ರೀ ಬಸವರಾಜ ಹೊರಟ್ಟಿ(ಮುಂದು):- ಎಲ್ಲಿ ಅನುಮತಿಯನ್ನು ಕೊಟ್ಟಿದ್ದಾರೆ ಅದನ್ನು ಬಿಟ್ಟು ಎಲ್ಲಾ ಕಡೆ ಮಾಡಿದ್ದಾರೆ. ಇದು ಎಲ್ಲಾ ನಡೆಯುತ್ತಿದೆ. ತಾವು ಹೇಳುವುದು ಎಲ್ಲವು ಸರಿ. ನಾನು ಅಲ್ಲಿಗೆ ಹೋದಾಗ RFO (Range Forest Officers) and DFO (Divisional Forest Officer) ಇಬ್ಬರು ಭೇಟಿಯಾಗಿದ್ದರು. ಅವರು ಎಲ್ಲ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೂ ಕೂಡಾ ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರೂ ಸಣ್ಣ ಪ್ರಮಾಣದಲ್ಲಿ ನಡೆದಿದೆ. Baldota ಮತ್ತು ಕಪ್ಪತಗುಡ್ಡ ಎರಡು ಕಡೆ ನಡೆದಿದೆ. ಮತ್ತೀಕಟ್ಟಿ ಎನ್ನುವ ಗ್ರಾಮವಿದೆ ಅಲ್ಲಿ ಬಂಗಾರವನ್ನು ಶೋಧ ಮಾಡಲು ಅನುಮತಿಯನ್ನು ಪಡೆದಿದ್ದಾರೆ. ಆದರೆ ಜಾಗವನ್ನು ಬಿಟ್ಟು ಬೇರೆ ಎಲ್ಲಾ ಕಡೆ ಬಂಗಾರವನ್ನು ಹುಡುಕಲು ತೆಗ್ಗು ತೆಗೆಯುತ್ತಿದ್ದಾರೆ. ಇದರಿಂದ ಅಲ್ಲಿ ವಿಷಾನಿಲ ಹರಡುತ್ತಿದೆ. ಮುಂಡರಗಿಯಲ್ಲಿ ಇವತ್ತು fluoride ಹರಡಿದ ಹಾಗೆ ಇಲ್ಲಿಯು ವಿಷಾನಿಲ ಹರಡುತ್ತಿದೆ. ಸಾವಿರ ಎರಡು ಸಾವಿರ ಪುಟ ತೆಗ್ಗು ತೆಗೆಯುತ್ತಿದ್ದಾರೆ. ಇದನ್ನು ನಾನೇ ನೋಡಿ ಬಂದಿದ್ದೇನೆ. ಕಪ್ಪತಗುಡ್ಡದಲ್ಲಿ ಎಲ್ಲಾ ರೀತಿಯ ವನಸ್ಪತಿಗಳು ಸಿಗುತ್ತವೆ. ಕಪ್ಪತಗುಡ್ಡದ ಮೇಲೆ ಎಲ್ಲಾ ಕಡೆ ಈ windmill ಹಾಕಿದ್ದಾರೆ. ಅದು ಹಾಕಿರುವುದು ಸರಿಯೊ-ತಪ್ಪವೊ ಎನ್ನುವುದನ್ನು ನಾನು ಹೇಳಲು ಹೋಗುವುದಿಲ್ಲ. ಆದರೆ ಅಲ್ಲಿ ಕಾನೂನುಬಾಹಿರವಾಗಿ ಕೆಲಸ ನಡೆಯುತ್ತಿವೆ. ಮೊದಲಿನ ಹಾಗೆ ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರು ಸಣ್ಣ ಪ್ರಮಾಣದಲ್ಲಿ ಅಲ್ಲಿ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿವೆ. ಹಿಂದೆ ಉಸ್ತುವಾರಿ ಸಚಿವರು ಇದ್ದಾಗ ನಡೆಯುತ್ತಿರುವಷ್ಟು ನಡೆಯುತ್ತಿಲ್ಲ. ಆದರೂ ಕಡಿಮೆ ರೀತಿಯಲ್ಲಿ ನಡೆಯುತ್ತಿದೆ. ಕಾನೂನು ಪಾಲನೆ ಮಾಡಬೇಕು ಎಂದು ಅಲ್ಲಿಯ ಅಧಿಕಾರಿಗಳು ಹೆದರುತ್ತಾರೆ. ಈ ವಿಷಯವನ್ನು ಅಧಿಕಾರಿಗಳೆ ಹೇಳಿದ್ದಾರೆ. ಇನ್ನೊಮ್ಮೆ ಮಂತ್ರಿಗಳು ಪರಿಶೀಲನೆ ಮಾಡಿ ತಿಳಿದುಕೊಂಡು ನಮಗೆ ಹೇಳಬೇಕು.

ಶ್ರೀಮತಿ ತಾರಾ ಅನುರಾಧಾ:- ಮಾನ್ಯ ಸಭಾಪತಿಗಳೆ, ಅಲ್ಲಿ ನಡೆಯುತ್ತಿರುವ ಗಣಿಗಾರಿಕೆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿ ದೊರೆಯುವ ಅಮೂಲ್ಯ ಔಷಧಿಗಳ ವನಸ್ಪತಿ ವಿನಾಶವಾಗುತ್ತಿರುವ ಬಗ್ಗೆ ಏನು ಹೇಳಿರುವುದಿಲ್ಲ. ಈ ಅಕ್ರಮ ಗಣಿಗಾರಿಕೆಯಿಂದಲೇ ಎಲ್ಲವು ವಿನಾಶವಾಗುತ್ತಿವೆ. ನಮ್ಮ ಕರ್ನಾಟಕದಲ್ಲಿ ಇರುವುದು ಕೆಲವೆ ಕೆಲವು ಇಂತಹ ಮುಖ್ಯ ವಸ್ತುಗಳು

ಸಿಗುವಂತಹ ಅರಣ್ಯಗಳು ಇವೆ. ಅದರಲ್ಲಿ ಕಪ್ಪತಗುಡ್ಡವು ಕೂಡಾ ಒಂದು. ಆ ವನಸ್ಪತಿಗಳ ರಕ್ಷಣೆಗೆ ಏನು ಮಾಡುತ್ತಾರೆ ಎನ್ನುವುದನ್ನು ಹೇಳಿರುವುದಿಲ್ಲ.

ಶ್ರೀ ಎಸ್.ಆರ್.ಪಾಟೀಲ್:- **ಮಾನ್ಯ ಸಭಾಪತಿಗಳೆ,** ವನ್ಯಜೀವಿಗಳ ರಕ್ಷಣೆಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಶ್ರೀಮತಿ ತಾರಾ ಅನುರಾಧಾರವರು ಕೇಳಿದ್ದಾರೆ. ವನ್ಯಜೀವಿ ರಕ್ಷಣೆಗಾಗಿ 244.1 ಚದರ ಕಿ.ಮೀ. ಪ್ರದೇಶವನ್ನು ವನ್ಯಜೀವಿ ರಕ್ಷಣೆಗಾಗಿ 1972 ಕಲಂ 76(ಎ1 ಬಿ) ಅಡಿಯಲ್ಲಿ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಕಪ್ಪತಗುಡ್ಡ ವನ್ಯಧಾಮ ಎಂದು ಘೋಷಣೆ ಮಾಡಬೇಕು ಎನ್ನುವುದು ಪರಿಶೀಲನೆಯಲ್ಲಿದೆ. ಆ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಬಸವರಾಜ ಹೊರಟ್ಟಿ:- **ಮಾನ್ಯ ಸಭಾಪತಿಗಳೆ,** ಕಪ್ಪತಗುಡ್ಡವನ್ನು ವನ್ಯಧಾಮ ಎಂದು ಅನಿಲಕುಂಬ್ಳೆ ಯವರು ಬಂದು ಚರ್ಚೆ ಮಾಡಿದರು. ಅರಣ್ಯ ಇಲಾಖೆಯವರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು. ಆದರೆ ಅಲ್ಲಿ ಅಕ್ರಮ ಗಣಿಗಾರಿಕೆ ಮಾಡುವವರು ಅದಕ್ಕೆ ವಿರೋಧ ಮಾಡಿದರು. ಇವತ್ತಿನವರೆಗೆ ಆಗಿರುವುದಿಲ್ಲ. ಗದುಗಿನ ಸ್ವಾಮಿಗಳು ಮತ್ತು ಮಾನ್ಯ ಅನಿಲ ಕುಂಬ್ಳೆಯವರು ಮೀಟಿಂಗ್ ಮಾಡಿ ಇದನ್ನು ವನ್ಯಧಾಮ ಮಾಡಬೇಕು ಎಂದು ತೀರ್ಮಾನಕ್ಕೆ ಬಂದರು. ವನ್ಯಧಾಮ ಮಾಡಲು ಯಾವುದೇ ಅಡ್ಡಿಯಿಲ್ಲ ಎಂದು ಸರ್ಕಾರವು ಸಂದೇಶವನ್ನು ಕೊಟ್ಟಿತ್ತು. ಆದರೆ ಅಲ್ಲಿ ಗಣಿ ಮಾಡುವವರು ಅಲ್ಲಿಯ ಜನರನ್ನು ಎತ್ತಿಕಟ್ಟಿ ಇವತ್ತಿನವರೆಗೆ ಅದನ್ನು ವನ್ಯಧಾಮವನ್ನಾಗಿ ಮಾಡಲು ಬಿಟ್ಟಿರುವುದಿಲ್ಲ. ನಾನು ಅಲ್ಲಿಗೆ ಹೋಗಿ ಎಲ್ಲವನ್ನು ನೋಡಿಕೊಂಡು ಬಂದಿದ್ದೇನೆ.

ಶ್ರೀ ಎಸ್.ಆರ್.ಪಾಟೀಲ್:- ವನ್ಯಧಾಮವಾಗಿದೆ ಎಂದು ನಾನು ಹೇಳುತ್ತಿಲ್ಲ. This proposal is under very serious consideration.

ಶ್ರೀ ಬಸವರಾಜ ಹೊರಟ್ಟಿ:- ದಯಮಾಡಿ ಮಾಡಿ. ಇದನ್ನು ಮಾಡಿದರೆ ತಮಗೆ ಸಮಸ್ಯೆಯೇ ಬರುವುದಿಲ್ಲ.

ಶ್ರೀ ಎಸ್.ಆರ್.ಪಾಟೀಲ್:- ಕಪ್ಪತಗುಡ್ಡವನ್ನು ವನ್ಯಧಾಮವಾಗಿ ಮಾಡುತ್ತೇವೆ. ಹಿಂದಿನ ಉಸ್ತುವಾರಿಯಲ್ಲಿ ನಡೆಯುತ್ತಿರುವಷ್ಟು ಅಕ್ರಮ ಗಣಿಗಾರಿಕೆ ಈಗ ನಡೆಯುತ್ತಿಲ್ಲ. ಪ್ರಮಾಣ ಕಡಿಮೆಯಾಗಿದೆ. ಈಗಿನ ಉಸ್ತುವಾರಿ ಸಚಿವರ ಬಗ್ಗೆ ಎರಡು ಮಾತಿಲ್ಲ. ನಮ್ಮ ಪಕ್ಕದಲ್ಲಿಯೇ ಕುಳಿತ್ತಿರುವ ಮಾನ್ಯ ಎಚ್.ಕೆ.ಪಾಟೀಲ್‌ರವರು ಈಗಿನ ಉಸ್ತುವಾರಿ ಸಚಿವರು. ಅವರ ಬಗ್ಗೆ ಎಲ್ಲರಿಗೂ ಗೊತ್ತಿದೆ.

ವಿರೋಧವಾಗಿರುವ ಸರ್ಕಾರ ನಮ್ಮದು. ಈ ರಾಜ್ಯದ ಸಂಪತ್ತನ್ನು ರಕ್ಷಣೆ ಮಾಡುವುದು ನಮ್ಮ ಆದ್ಯ ಕರ್ತವ್ಯ. ನೆಲ-ಜಲ-ನಿಕ್ಷೇಪಗಳನ್ನು ರಕ್ಷಣೆ ಮಾಡುವಂತಹ ಪ್ರಮಾಣ ಮಾಡಿಯೇ ನಾವು ಇವತ್ತು ಅಧಿಕಾರಕ್ಕೆ ಬಂದಿದ್ದೇವೆ. ಸ್ವಲ್ಪಮಟ್ಟಿಗೆ ಅಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಹೇಳಿದ್ದಾರೆ.ಅದರ ಬಗ್ಗೆಯು ಸರ್ಕಾರ ನಿಗಾವಹಿಸಿ ಅದನ್ನು ನಿಲ್ಲಿಸುವಂತಹ ಕ್ರಮವನ್ನು ನಮ್ಮ ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಬಸವರಾಜ ಹೊರಟ್ಟಿ:- ನಿಮ್ಮ ಕಳಕಳಿಗೆ ನಮ್ಮ ಧನ್ಯವಾದಗಳು. ಆದಷ್ಟು ಬೇಗ ಆ ಕೆಲಸವನ್ನು ಮಾಡಿ.

ಶ್ರೀ ಎಚ್.ಕೆ.ಪಾಟೀಲ್:- ಮಾನ್ಯ ಸಭಾಪತಿಗಳೆ, ಮಾನ್ಯ ಹೊರಟ್ಟಿಯವರು, ಶ್ರೀಮತಿ ತಾರಾರವರು ಗಮನ ಸೆಳೆಯುವ ಸೂಚನೆ ಮೂಲಕ ನಮ್ಮ ಗದಗ ಭಾಗದಲ್ಲಿರುವ ಕಪ್ಪತಗುಡ್ಡದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯದ ಜನರು ಕಪ್ಪತಗುಡ್ಡದ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಇದೊಂದು ಅವಕಾಶ. ಈ ಗುಡ್ಡ 243 ಕಿ.ಮೀ. ಉದ್ದವಿದೆ. Coastal area ಗಳಲ್ಲಿ Western Ghats ಗಳ ಬಗ್ಗೆ ಬಹಳ ಭಾವನಾತ್ಮಕವಾದ ಸಂಬಂಧ ಹೇಗೆ ಇದೆ, ಅದೇ ರೀತಿಯ ಭಾವನಾತ್ಮಕ ಸಂಬಂಧವನ್ನು ನಾವು ಕಪ್ಪತಗುಡ್ಡದ ಬಗ್ಗೆ ಇಟ್ಟುಕೊಂಡಿದ್ದೇನೆ. ಕಪ್ಪತಗುಡ್ಡವನ್ನು ರಕ್ಷಣೆ ಮಾಡಬೇಕು ಎಂದು... ಬಹಳ ದೊಡ್ಡ-ದೊಡ್ಡ ಕಾರ್ಖಾನೆಗಳನ್ನು ತರುವಂತಹ ಸಂದರ್ಭದಲ್ಲಿ ಜನಜಾಗೃತರಾಗಿ ರಾಜಕೀಯ ಪಕ್ಷಗಳು, ಶ್ರೀಮಠಗಳು, ವಿದ್ಯಾರ್ಥಿಗಳು ಎಲ್ಲರೂ ಸೇರಿ ವಿರೋಧ ಮಾಡಿ, ಯಾವ ಕಾರಣಕ್ಕೂ ಕಪ್ಪತಗುಡ್ಡದಲ್ಲಿ ಅಥವಾ ಕಪ್ಪತಗುಡ್ಡದ ಸಮೀಪ ಗಣಿಗಾರಿಕೆಯಾಗಬಾರದು ಎಂದು ಹೋರಾಟ ಮಾಡಿರುವಂತಹ ವಿಷಯ, ಅದರ ಹಿನ್ನೆಲೆ ಎಲ್ಲರಿಗೂ ಗೊತ್ತಿರಬಹುದು. ಕಪ್ಪತಗುಡ್ಡವನ್ನು ರಕ್ಷಣೆ ಮಾಡಬೇಕು ಎನ್ನುವ ಭಾವನೆ ಆ ಭಾಗದ ಜನರಲ್ಲಿ ಏನು ಇದೆ ಅದಕ್ಕೆ ಸಂಪೂರ್ಣವಾಗಿ ಸರ್ಕಾರ ಸ್ಪಂದಿಸುತ್ತದೆ. ಕಪ್ಪತಗುಡ್ಡವನ್ನು ರಕ್ಷಣೆ ಮಾಡುತ್ತೇವೆ. ಅದರ ಬಗ್ಗೆ ಈಗಾಗಲೇ wildlife ಗಳ ಬಗ್ಗೆ ಪ್ರಸ್ತಾವನೆಯಾಗಿದೆ. ಒಟ್ಟಾರೆಯಾಗಿ medicinal plants ಗಳೇನಿವೆ, ಇವುಗಳಿಗೆ ಬಹಳ ದೊಡ್ಡ ಇತಿಹಾಸವಿದೆ.

ಅವರು ಗದಗ ಜಿಲ್ಲೆ ಉಸ್ತುವಾರಿ ಸಚಿವರಾಗಿ ಅತ್ಯಂತ ಪ್ರಮಾಣಿಕತೆಯಿಂದ, ದಕ್ಷತೆಯಿಂದ ರಾಜ್ಯದ ಆಸ್ತಿಯನ್ನು ರಕ್ಷಣೆ ಮಾಡುವುದರಲ್ಲಿ ಅವರು ನಿಸ್ಸಿಮರು. ಅವರ ಬಗ್ಗೆ ತಮಗೂ ಗೊತ್ತಿದೆ ಅದರ ಬಗ್ಗೆ ವಿವರಣೆ ಕೊಡುವ ಅವಶ್ಯಕತೆ ಇಲ್ಲ. ಸದನದ ಎಲ್ಲ ಸದಸ್ಯರಿಗೂ ಅವರ ಬಗ್ಗೆ ಗೊತ್ತು. ಸಹೋದರಿ ಶ್ರೀಮತಿ ತಾರಾ ಅನುರಾಧಾರವರು ಹೇಳಿದ ಹಾಗೆ, ಅಲ್ಲಿ ಅಪರೂಪದ ಔಷಧಿಗಳ ಸಸ್ಯಗಳು ಇವೆ. ಅವುಗಳು ನಾಶವಾಗಬಾರದು ಎನ್ನುವ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಅವರ ಆತಂಕ, ಕಳಕಳಿ, ಚಿಂತನೆಯನ್ನು ಸರ್ಕಾರ ಗೌರವಿಸುತ್ತದೆ ಎಂದು ಹೇಳಬಯಸುತ್ತದೆ. ಸಂಪೂರ್ಣವಾಗಿ ಅಕ್ರಮ ಗಣಿಗಾರಿಕೆಯನ್ನು ತಡೆದು ಅಪರೂಪದ ಸಸ್ಯಗಳ ರಕ್ಷಣೆಯನ್ನು ಮಾಡುತ್ತೇವೆ. ಮಾನ್ಯ ಹೊರಟ್ಟಿಯವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ.

ಶ್ರೀ ಬಸವರಾಜ ಹೊರಟ್ಟಿ:- ಮಾನ್ಯ ಸಭಾಪತಿಗಳೆ, ಸರ್ಕಾರ ಕಪ್ಪತಗುಡ್ಡವನ್ನು ವನ್ಯಧಾಮವನ್ನಾಗಿ ಮಾಡಿದರೆ ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ. ದಯಮಾಡಿ ಸರ್ಕಾರ ಇದನ್ನು ಒಪ್ಪಿಕೊಳ್ಳುತ್ತದೆಯೇ ಇಲ್ಲವೆ ಎನ್ನುವುದನ್ನು ಹೇಳಿಬಿಡಬೇಕು.

ಶ್ರೀ ಎಸ್.ಆರ್.ಪಾಟೀಲ್:- ಆ ಪ್ರಸ್ತಾವನೆ ಈಗಾಗಲೇ ಅರಣ್ಯ ಇಲಾಖೆಯ ಪರಿಶೀಲನೆಯಲ್ಲಿದೆ. ಮಾನ್ಯ ಹಿರಿಯ ಸದಸ್ಯರಾದ ಹೊರಟ್ಟಿಯವರ ಕಳಕಳಿ, ಚಿಂತನೆಯನ್ನು ನಾನು appreciate ಮಾಡುತ್ತೇನೆ. ಕಪ್ಪತಗುಡ್ಡವನ್ನು ವನ್ಯಧಾಮವನ್ನಾಗಿ ಘೋಷಣೆ ಮಾಡಿದರೆ ನಿಶ್ಚಿತವಾಗಿ ಔಷಧಿಗಳ ಸಸ್ಯಗಳು ಉಳಿಯುತ್ತವೆ. ಅಕ್ರಮ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧ ಮಾಡಲು ಸಾಧ್ಯ. ಈಗ ನಾವು ತೆಗೆದುಕೊಂಡಿರುವ ಕಾನೂನನ್ನು ಅವರು ಒಪ್ಪಿಕೊಂಡು ನಮಗೆ ಶಹಬ್ಬಾಸಗಿರಿಯನ್ನು ಕೊಟ್ಟಿದ್ದಾರೆ. ಅಲ್ಲಿ-ಇಲ್ಲಿ ಸ್ವಲ್ಪ windmillಗೆ ಹೋಗುವಂತಹ ಸಂದರ್ಭದಲ್ಲಿ Baldota ರವರಿಗೆ ಬಂಗಾರ ನಿಕ್ಷೇಪವನ್ನು ಪತ್ತೆ ಹಚ್ಚುವ ಸಲುವಾಗಿ ಅವರಿಗೆ ಅವಕಾಶ ಸಿಕ್ಕಿದೆ. ಅದನ್ನೆ ನೆಪ ಮಾಡಿಕೊಂಡು ಸ್ವಲ್ಪಮಟ್ಟಿಗೆ ಅಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಸರ್ಕಾರ ನಿರ್ಧಾಕ್ಷಿಣ್ಯ ಕ್ರಮವನ್ನು ಕೈಗೊಳ್ಳುತ್ತದೆ. ಬೇಲಿಕೆರಿ port ಹೊರತುಪಡಿಸಿ, ಸುಪ್ರಿಮ್ ಕೋರ್ಟ್ ಬೇಲಿಕೆರಿ ಬಗ್ಗೆ ತನಿಖೆ ಮಾಡಲು ಸಿಬಿಐ ಗೆ ಕೊಡಲು ಅವಕಾಶ ಕೊಟ್ಟರೆ, ನಾವು ಉಳಿದ 7 port ಗಳಿಗೂ ಸಿಬಿಐ ತನಿಖೆ ಮಾಡಲು ಅವಕಾಶ ಕೊಟ್ಟಿದ್ದೇವೆ. ಉಳಿದ ಎಲ್ಲಾ ಕೇಸ್‌ಗಳನ್ನು ಲೋಕಾಯುಕ್ತಕ್ಕೆ refer ಮಾಡಿದ್ದೇವೆ. ಅಕ್ರಮ ಗಣಿಗಾರಿಕೆಗೆ ಈ ಸರ್ಕಾರ ಬದ್ಧ

ಶ್ರೀ ಹೆಚ್.ಕೆ. ಪಾಟೀಲ್ (ಮುಂದು)

ಜಗತ್ತಿನಲ್ಲಿರುವ ಎಲ್ಲಾ ಔಷಧಿ ಸಸ್ಯಗಳು ಕಪ್ಪತ್ತಗುಡ್ಡದಲ್ಲಿವೆ ಎಂದು ಎಲ್ಲರೂ ಮಾತನಾಡುತ್ತಾರೆ. ಆ ರೀತಿಯ ಪ್ರಖ್ಯಾತಿಯನ್ನು ಪಡೆದಿದೆ. ಆ Medicinal Plants Sanctuary ಮಾಡುವುದಕ್ಕೆ ರಾಜ್ಯ ಸರ್ಕಾರ ತನ್ನೆಲ್ಲಾ ಹೆಜ್ಜೆಗಳನ್ನು ಇಡುತ್ತಿದೆ. ನಾನೂ Gold Exploration Pilot Project, Study Project ಎಂಬ ಒಂದು ಅನಿಸಿಕೆಯಲ್ಲಿ ಇದ್ದೆನು. ಮಾನ್ಯ ಎಸ್.ಆರ್. ಪಾಟೀಲರು ಹೇಳಿರುವ ಉತ್ತರದಲ್ಲಿ ಅದು ನಡೆದಂತೆ ಇಲ್ಲ. ಅದರ ಜೊತೆಗೆ ಗಣಿಗಾರಿಕೆ ಮತ್ತು ಅಕ್ರಮ ಗಣಿಗಾರಿಕೆಯನ್ನು ಕಪ್ಪತ್ತಗುಡ್ಡದಲ್ಲಿ ನಡೆಸುವುದಕ್ಕೆ ಈ ಸರ್ಕಾರ ಬಿಡುವುದೇ ಇಲ್ಲ. ಅಷ್ಟೇ ಅಲ್ಲದೇ ಆ ಭಾಗದ ಜನ ಸಹಿತ ಅಲ್ಲಿ ಅಕ್ರಮವಾಗಿ ಏನಾದರೂ ನಡೆದರೆ ತಕ್ಷಣವೇ ಆ ಟ್ರಕ್ ಅಥವಾ ಟ್ರ್ಯಾಕ್ಟರ್ ಏನೇ ಇದ್ದರೂ ನಿಲ್ಲಿಸುವುದನ್ನು ಗಮನಿಸಿದ್ದೇವೆ. ಅದಕ್ಕಾಗಿ ಅಲ್ಲಿನ ಜನರಿಗೆ ವಿಶೇಷ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಪ್ಪತ್ತಗುಡ್ಡದಲ್ಲಿ ಅಕ್ರಮ ಗಣಿಗಾರಿಕೆ ಆಗುವುದಕ್ಕೆ ಸರ್ಕಾರವು ಯಾವ ಸಂದರ್ಭದಲ್ಲಿಯೂ ಬಿಡುವುದಿಲ್ಲ ಎಂಬ ಭರವಸೆಯನ್ನು ಕೊಡುತ್ತೇನೆ.

01.	4399 ಗಮನ ಸೆಳೆಯುವ ಸೂಚನೆ ಶ್ರೀಮತಿ ತಾರಾ ಅನುರಾಧ ವಿಪನದಿ: 25.11.2013	ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ಅಕ್ರಮವಾಗಿ ಅರಣ್ಯ ಒತ್ತುವರಿ ಹಾಗೂ ಕಲ್ಲು ಗಣಿಗಾರಿಕೆಯಿಂದ ಪರಿಸರಕ್ಕೆ ಧಕ್ಕೆಯಾಗಿರುವುದಲ್ಲದೆ ವನ್ಯ ಜೀವಿಗಳ ವಿನಾಶದ ಬಗ್ಗೆ.	ಕಪ್ಪತ್ತಗುಡ್ಡದಲ್ಲಿ ಅಕ್ರಮ ಗಣಿಗಾರಿಕೆ ಆಗುವುದಕ್ಕೆ ಸರ್ಕಾರವು ಯಾವ ಸಂದರ್ಭದಲ್ಲಿಯೂ ಬಿಡುವುದಿಲ್ಲ ಎಂಬ ಭರವಸೆಯನ್ನು ಕೊಡುತ್ತೇನೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು.	ದಿನಾಂಕ: 13.01.2017ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ ಗದಗ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಕಪ್ಪತ್ತಗುಡ್ಡದಲ್ಲಿ ಕಳೆದ ಮೂರು ವರ್ಷಗಳಿಂದ ಯಾವುದೇ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದಿಲ್ಲ. ಈ ಬಗ್ಗೆ ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕಾಗಿ ಖನಿಜ ಲಭ್ಯವಿರುವ ಪ್ರದೇಶಗಳ ರಸ್ತೆಗಳನ್ನೆಲ್ಲಾ ಕಂದಕ ಅಗೆದು ಮಾರ್ಗದ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಗಣಿಗಾರಿಕೆ ಆಗದಂತೆ ತಡೆಗಟ್ಟಲು ಗದಗ ವಿಭಾಗದ ವ್ಯಾಪ್ತಿಯಲ್ಲಿ ಮೂರು ರಕ್ಷಣಾ ಶಿಬಿರಗಳನ್ನು 1) ಪಾಪನಾಸಿ 2) ಸಿಂಗಟರಾಯನ ಕೆರೆ 3) ಹಿರೇವಡ್ಡಟ್ಟಿಗಳಲ್ಲಿ ಸ್ಥಾಪಿಸಿ ಹಗಲು ರಾತ್ರಿ ಕಾಯಲು ವಾಚರ್‌ಗಳನ್ನು ನೇಮಿಸಲಾಗಿದೆ. ಅವರೊಂದಿಗೆ ಇಲಾಖಾ ಸಿಬ್ಬಂದಿಗಳು ಕಾರ್ಯ ಶಿಬಿರಗಳ ಮೇಲ್ವಿಚಾರಣೆ ಹಾಗೂ ರಾತ್ರಿ ಗಸ್ತು ಕಾರ್ಯ ಕೈಗೊಂಡು ಅಕ್ರಮ ಗಣಿಗಾರಿಕೆ ನಡೆಯದಂತೆ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.

ಅನುಬಂಧ - ಜಿ

ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 121
2) ಸದಸ್ಯರ ಹೆಸರು : ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)
3) ಉತ್ತರಿಸುವ ದಿನಾಂಕ : 23-11-2016
4) ಉತ್ತರಿಸುವವರು : ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಪ್ರಶ್ನೆ ಸಂ.	ಪ್ರಶ್ನೆ	ಉತ್ತರ
(ಅ)	ಗದಗ ಜಿಲ್ಲೆಯ ಪಶ್ಚಿಮಘಟ್ಟದ ಒಂದು ಭಾಗವಾದ ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮವನ್ನಾಗಿ ಮಾಡಲು ಸರ್ಕಾರ ತೀರ್ಮಾನಿಸಿದೆಯೇ? ತೀರ್ಮಾನಿಸಿದ್ದಲ್ಲಿ, ಅದು ಯಾವ ಹಂತದಲ್ಲಿದೆ?	ಹೌದು. ಆದರೆ ತದನಂತರ ಸರ್ಕಾರವು ಕಪ್ಪತ್ತಗುಡ್ಡ ಮೀಸಲು ಅರಣ್ಯ ಪ್ರದೇಶವನ್ನು ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶವನ್ನಾಗಿ ಅಧಿಸೂಚನೆ ಸಂಖ್ಯೆ. ಅಪಜೀ 291 ಎಫ್‌ಡಬ್ಲ್ಯೂಎಲ್ 2015 ದಿನಾಂಕ: 19-12-2015 ರಲ್ಲಿ ಘೋಷಿಸಿರುತ್ತದೆ. ಮುಂದುವರೆದು ಸರ್ಕಾರವು ಅಧಿಸೂಚನೆ ಸಂಖ್ಯೆ. ಅಪಜೀ 291 ಎಫ್‌ಡಬ್ಲ್ಯೂಎಲ್ 2015 ದಿನಾಂಕ: 04-11-2016 ರಲ್ಲಿ ಈ ಹಿಂದೆ ದಿನಾಂಕ: 19-12-2015 ರಂದು ಘೋಷಿಸಲಾಗಿದ್ದ ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ.
(ಆ)	2015 ರಲ್ಲಿ ಸರ್ಕಾರ ಕಪ್ಪತ್ತಗುಡ್ಡವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಿರುವದು ನಿಜವೇ? ನಿಜವಿದ್ದಲ್ಲಿ ಅಲ್ಲಿಂದ ಇಲ್ಲಿಯವರೆಗೆ ಆದಂತಹ ಪ್ರಗತಿಯೇನು?	
(ಇ)	ಸಧ್ಯದ ಪರಿಸ್ಥಿತಿಯಲ್ಲಿ ಸದರಿ ಅರಣ್ಯದಲ್ಲಿ ಹೊಸ ಹೊಸ ಅತಿಕ್ರಮಣಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು	ಅಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಸಂಖ್ಯೆ: ಅಪಜೀ 175 ಎಫ್‌ಡಬ್ಲ್ಯೂಎಲ್ 2016

(ಬಿ. ರಮಾನಾಥ ರೈ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಶೂನ್ಯವೇಳೆ ಪ್ರಸ್ತಾವ

(729) 29.11.2016 12.40 SPR(BS)RN

ವಿಷಯ:–ಸರ್ಕಾರವು ಕಪ್ಪತ್ತಗುಡ್ಡ ಮೀಸಲು ಅರಣ್ಯ ಪ್ರದೇಶದ ಕುರಿತು ದಿನಾಂಕ 04/11/2016 ರ ಸುತ್ತೋಲೆಯನ್ನು ಹಿಂದಕ್ಕೆ ಪಡೆಯುವ ಬಗ್ಗೆ

* * *

ಶ್ರೀ ಬಸವರಾಜ್ ಹೊರಟ್ಟಿ(ಶಿಕ್ಷಕರ ಕ್ಷೇತ್ರ):– ಮಾನ್ಯ ಸಭಾಪತಿಯವರೆ, ಸರ್ಕಾರವು ಕಪ್ಪತ್ತಗುಡ್ಡ ಮೀಸಲು ಅರಣ್ಯ ಪ್ರದೇಶವನ್ನು ಕಪ್ಪತ್ತಗುಡ್ಡ ಸಂರಕ್ಷಣಾ ಮೀಸಲು ಪ್ರದೇಶವನ್ನಾಗಿ ಅಧಿಸೂಚನೆ ಸಂಖ್ಯೆ: ಅಪಜೀ 291 ಎಫ್‌ಡಬ್ಲ್ಯೂಎಲ್/ಎಫ್‌ಡಬ್ಲ್ಯೂಎಲ್/2015, ದಿನಾಂಕ 19/12/2015 ರಲ್ಲಿ ಘೋಷಿಸಿದ್ದು, ನಂತರ ಅಧಿಸೂಚನೆ ಸಂಖ್ಯೆ:ಅಪಜೀ/291/ಎಫ್‌ಡಬ್ಲ್ಯೂಎಲ್/2015, ದಿನಾಂಕ 04/11/2016 ರನ್ವಯ ಹಿಂದಕ್ಕೆ ಪಡೆದಿದೆ. ಈ ಹಿಂಪಡಿಕೆಯ ಪ್ರಕ್ರಿಯೆಯಿಂದ ಅಂದರೆ, ಅಕ್ರಮ ಗಣಿಗಾರಿಕೆ ನಡೆದರೆ ಕಪ್ಪತ್ತಗುಡ್ಡದ ಮರಣ ಶಾಸನವನ್ನು ಸರ್ಕಾರವೇ ಬರೆದಂತಾಗುತ್ತದೆ ಎಂಬುದನ್ನು ಸರ್ಕಾರ ಗಮನಿಸಬೇಕು. 80 ಎಕರೆ ವಿಸ್ತೀರ್ಣದ 63 ಕಿಲೋಮೀಟರ್ ಉದ್ದದ ಉತ್ತರ ಕರ್ನಾಟಕದ ಹೃದಯ ಭಾಗವೆಂದು ಖ್ಯಾತಿ ಪಡೆದ ನಾಡಿನ ಹಿರಿಮೆ ಗರಿಮೆಯಾದ ಕಪ್ಪತ್ತಗುಡ್ಡದ ಸಿರಿ, ಕಪ್ಪತ್ತಗುಡ್ಡವು ಗದಗ ಜಿಲ್ಲೆಯ ಗದಗ, ಮುಂಡರಗಿ ಮತ್ತು ಶಿರಹಟ್ಟಿ ತಾಲ್ಲೂಕುಗಳನ್ನು ಒಳಗೊಂಡಂತೆ ಪಶ್ಚಿಮ ಘಟ್ಟದ ಸೆರಗನ್ನು ಹೊದ್ದಿರುತ್ತದೆ. ಗದಗ ತಾಲ್ಲೂಕಿನ ಬಿಂಕದಕಟ್ಟಿಯಿಂದ ಪ್ರಾರಂಭವಾಗುವ ಕಪ್ಪತ್ತಗುಡ್ಡದ ಗಿರಿಯು ಮೂರು ಪರ್ವತಗಳ ಸಂಗಮ ಸ್ಥಾನವಾಗಿವೆ. ಆದರೆ, ಈ ಪರಿಸ್ಥಿತಿಯಲ್ಲಿ ಸದರಿ ಅರಣ್ಯಕ್ಕೆ ಹೊಸ ಹೊಸ ಅತಿಕ್ರಮಣಗಳು ನಡೆಯುತ್ತಿರುವುದನ್ನು ತಡೆಯಲು ಸರ್ಕಾರವು ಯಾವ ಪ್ರಯತ್ನವನ್ನೂ ಮಾಡಿರುವುದಿಲ್ಲ. ಸರ್ಕಾರವು ಯಾರ ಒತ್ತಾಯಕ್ಕೂ ಮಣಿಯದೇ ತಕ್ಷಣವೇ ಇದನ್ನು ವನ್ಯಜೀವಿಧಾಮವನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಉತ್ತರ ಕರ್ನಾಟಕ ಭಾಗದ ಎಲ್ಲಾ ಸ್ವಾಮೀಜಿಗಳು ಇದರ ಬಗ್ಗೆ ಹೋರಾಟವನ್ನು ಪ್ರಾರಂಭ ಮಾಡಿದ್ದಾರೆ. ಈ ಅಧಿಸೂಚನೆಯ ಹಿಂಪಡೆಯುವಿಕೆಯ ಪ್ರಕ್ರಿಯೆಯ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳು, ಮಾಫಿಯಾದವರ ಕೈವಾಡವಿದೆ. ಹಲವಾರು ವೈದ್ಯಕೀಯ ಸಸ್ಯಗಳನ್ನು ಹಾಗೂ ಜೀವವೈವಿಧ್ಯಗಳನ್ನು ಹೊಂದಿದ ಕಪ್ಪತ್ತುಗುಡ್ಡ ಮೀಸಲು ಅರಣ್ಯ ಪ್ರದೇಶವನ್ನು ಸಂರಕ್ಷಣಾ ಮೀಸಲು ಪ್ರದೇಶವೆಂದು ಘೋಸಿಸಿದ್ದನ್ನು ಹಿಂಪಡೆದಿರುವುದು ಸಾರ್ವಜನಿಕ ವಲಯದಲ್ಲಿ ರೋಷವನ್ನುಂಟು ಮಾಡಿದೆ. ಸದರಿ ಹೋರಾಟಕ್ಕೆ ಸಾರ್ವಜನಿಕರನ್ನು ಪ್ರೇರೇಪಿಸುವ ಕೆಲಸವನ್ನು ಸರಕಾರವೇ ಮಾಡಿದಂತಾಗುತ್ತದೆ. ಆದ್ದರಿಂದ ಕೂಡಲೇ ಸರ್ಕಾರ ದಿನಾಂಕ 04/11/2016ರ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯಲು ಒತ್ತಾಯಿಸುತ್ತೇನೆ.

ಅನುಬಂಧ - 3

ಕರ್ನಾಟಕ ವಿಧಾನ ಪರಿಷತ್ತು		
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1022
ಸದಸ್ಯರ ಹೆಸರು	:	ಶ್ರೀ. ಎನ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ	:	17-12-2014
ಉತ್ತರಿಸುವವರು	:	ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ವನ್ಯಜೀವಿಧಾಮ ಸ್ಥಾಪಿಸುವ ಬಗ್ಗೆ ಸರ್ಕಾರ ನಿರ್ಧರಿಸಿದೆಯೇ;	ಕಪ್ಪತ್ತಗುಡ್ಡ ಅರಣ್ಯ ಪ್ರದೇಶಗಳನ್ನು ವನ್ಯಜೀವಿ (ಸಂರಕ್ಷಣಾ) ಕಾಯ್ದೆ-1972ರಡಿ ರಕ್ಷಿಸುವ ಮತ್ತು ಸಂರಕ್ಷಿಸುವ ಹಿತದೃಷ್ಟಿಯಿಂದ ಸದರಿ ಅರಣ್ಯ ಪ್ರದೇಶಗಳನ್ನು ಕಪ್ಪತ್ತಗುಡ್ಡ ವನ್ಯಧಾಮವೆಂದು ಘೋಷಣೆ ಮಾಡುವುದು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.
ಆ)	ಹಾಗಿದ್ದಲ್ಲಿ, ಈ ಕುರಿತು ಯಾವ ಕಾರ್ಯಗಳನ್ನು ಕೈಗೊಳ್ಳಲಾಗಿದೆ;	ಪ್ರಶ್ನೆ ಉದ್ಭವಿಸುವುದಿಲ್ಲ
ಇ)	ವನ್ಯಜೀವಿಧಾಮ ಸ್ಥಾಪಿಸುವ ಬಗ್ಗೆ ಹಿಂದಿನ ಸರ್ಕಾರ ಯಾವುದಾದರೂ ಯೋಜನೆಗಳನ್ನು ಹಾಕಿಕೊಂಡಿತ್ತೇ;	ಹೌದು. ಈ ನಿಟ್ಟಿನಲ್ಲಿ ಪ್ರಸ್ತಾಪಿತ ಕಪ್ಪತ್ತಗುಡ್ಡಅರಣ್ಯ ಪ್ರದೇಶಗಳನ್ನು ವನ್ಯಧಾಮವನ್ನಾಗಿ ಘೋಷಿಸುವ ಸಂಬಂಧ ರಾಜ್ಯ ವನ್ಯಜೀವಿ ಮಂಡಳಿಯ 3ನೇ, 4ನೇ ಮತ್ತು 5ನೇ ರಾಜ್ಯ ವನ್ಯಜೀವಿ ಮಂಡಳಿ ಸಭೆಗಳಲ್ಲಿ ಚರ್ಚಿಸಲಾಗಿರುತ್ತದೆ. ಇದರನ್ವಯ, ರಾಜ್ಯ ವನ್ಯಜೀವಿ ಮಂಡಳಿಯ ಉಪ-ಸಮಿತಿಯು ದಿ: 21-02-2013ರಂದು ಸ್ಥಳೀಯ ಗ್ರಾಮಗಳನ್ನೊಳಗೊಂಡ ಸಾರ್ವಜನಿಕ ಸಮಾಲೋಚನಾ ಸಭೆಯಲ್ಲಿ ಚರ್ಚಿಸಿರುವಂತೆ ವರದಿಯನ್ನು 6ನೇ ರಾಜ್ಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿತ್ತು. ತದನಂತರ ಪ್ರಸ್ತಾವನೆ ಕುರಿತು 7ನೇ ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ಚರ್ಚಿಸಿರುವಂತೆ, ಅಪರ ಮುಖ್ಯ ಕಾರ್ಯದರ್ಶಿ,ಅಪಜೀ ಇಲಾಖೆ ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅವರುಗಳು ಜಂಟಿಯಾಗಿ ಸ್ಥಳ ಪರಿಶೀಲನೆ ಮಾಡಿ, ವರದಿ ಸಲ್ಲಿಸಿದ ನಂತರ ಅಂತಿಮ ಕ್ರಮ ತೆಗೆದುಕೊಳ್ಳಲಾಗುವುದೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.
ಈ)	ಈ ಕುರಿತು ಬಜೆಟ್‌ನಲ್ಲಿ ಅನುದಾನ ಮೀಸಲಿರಿಸಲಾಗಿತ್ತೇ; ಮೀಸಲಿರಿಸಿದ್ದಲ್ಲಿ, ಎಷ್ಟು ಅನುದಾವನನ್ನು ಮೀಸಲಾಗಿಡಾಗಿತ್ತು?	ಕಪ್ಪತ್ತಗುಡ್ಡ ವನ್ಯಧಾಮವು ಈವರೆವಿಗೂ ಘೋಷಣೆಗೊಂಡಿರದ ಕಾರಣ, ಇದಕ್ಕಾಗಿ ಬಜೆಟ್‌ನಲ್ಲಿ ಪ್ರತ್ಯೇಕವಾದ ಅನುದಾನ ಮೀಸಲಿರಿಸಿರುವುದಿಲ್ಲ.

ಸಂಖ್ಯೆ: ಅಪಜೀ 07 ಚಿಎಲ್‌ಹಿಎಂ 2014

(ಜಿ ರಮಾನಾಥ ರೈ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅನುಬಂಧ - 4

ಕೃಣ ಸಂಸ್ಕಾರ ಸಹಬಾಳ್ವೆ ಹೋರಾಟ ಭಕ್ತಿ ತ್ಯಾಗ

ಹಾಲುಮತ ಮಹಾಸಭಾ (ರಿ.)

ಶ್ರೀಕ್ಷೇತ್ರ ಕಾಗಿನೆಲೆ ಕುರುಬ ಸಮುದಾಯದ ಸಮೃದ್ಧಿಗೊಂದು ಸಮೂಹ.....

ಗದಗ ಜಿಲ್ಲೆ ವಿದ್ಯಾನಿಧಿ ಪ್ರಕಾಶನ, ಜೆ.ಟಿ. ಮಠ ರಸ್ತೆ, ಗದಗ, 9900256602, 9448746400

ಗೌರವಾಧ್ಯಕ್ಷರು : ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು, ಶ್ರೀಕ್ಷೇತ್ರ ಕಾಗಿನೆಲೆ.

ದಿ. 24.03.2018

ಗೆ,

ಅಧ್ಯಕ್ಷರು,

ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ ಬೆಂಗಳೂರು

ವಿಷಯ : ಕಪ್ಪತಗುಡ್ಡದಲ್ಲಿ ವನ್ಯಜೀವಿ ಧಾಮ ಸ್ಥಾಪಿಸಲು ಆಗ್ರಹ

ಮಾನ್ಯರೆ,

ಉತ್ತರ ಕರ್ನಾಟಕದ ಸಹ್ಯಾದ್ರಿಯಂದೇ ಕರೆಯಲ್ಪಡುವ ಕಪ್ಪತಗುಡ್ಡವು ಸುಮಾರು 63 ಕಿಲೋ ಮೀಟರ್ ಉದ್ದಕ್ಕೆ ಹರಡಿಕೊಂಡಿದ್ದು 33 ಸಾವಿರ ಹೆಕ್ಟೇರ್ ಪ್ರದೇಶವನ್ನು ಹೊಂದಿದ್ದು ಗದಗ ಜಿಲ್ಲೆಗೆ ಕಳಸಪ್ರಾಯವಾಗಿದೆ. ಅಲ್ಲದೇ ಈ ಪ್ರದೇಶದಲ್ಲಿ ಅಪಾರ ಖನಿಜ ಸಂಪತ್ತು, ಸಸ್ಯ ಸಂಪತ್ತು ಹಾಗೂ ಜೀವ ಸಂಪತ್ತುವುಳ್ಳ ಕಪ್ಪತಗುಡ್ಡವನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸರ್ಕಾರ ಕೂಡಲೇ ಕಪ್ಪತಗುಡ್ಡದಲ್ಲಿ ವನ್ಯಜೀವಧಾಮವನ್ನು ಸ್ಥಾಪಿಸಬೇಕು. ಕಪ್ಪತಗುಡ್ಡವನ್ನು ಸಂರಕ್ಷಿಸಲು ಯಾವುದೇ ಕಾರಣ ಬೇಕಿಲ್ಲ, ನಾಡಿನಲ್ಲಿನಲ್ಲಿರುವ ಬೆಟ್ಟಗುಡ್ಡಗಳನ್ನು ನಾಶ ಮಾಡಿ ಮತ್ತೆ ಸೃಷ್ಟಿ ಮಾಡಲು ಸಾದ್ಯವಿಲ್ಲ ಅಂತಹ ತಂತ್ರಜ್ಞಾನ ಇವರೆಗೂ ಸಾದ್ಯವಾಗಿಲ್ಲ ಹಾಗೂ ಗಣಿಗಾರಿಕೆ ಪ್ರದೇಶದಲ್ಲಿ ನಡೆಯುತ್ತಿರುವ ಹಾನಿಯನ್ನು ಸರ್ಕಾರ ಇನ್ನೂ ತುಂಬಿಕೊಟ್ಟಿಲ್ಲ. ಗಣಿಧಣಿಗಳಿಂದ ರಾಜ್ಯಕ್ಕೆ, ರಾಷ್ಟ್ರಕ್ಕೆ ಏನೂ ಕೊಡುಗೆ ಇಲ್ಲ. ರಾಯಚೂರ ಜಿಲ್ಲೆಯಿಂದ ಚಿನ್ನವನ್ನು ಪಡೆದು ದೇಶ, ವಿದೇಶಕ್ಕೆ ನೀಡಿ ಹಣ ಗಳಿಸಿದ್ದಾರೆ ಆದರೆ, ಅದೇ ರಾಯಚೂರಿನಲ್ಲಿ ರಕ್ತಹೀನತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ರಾಜ್ಯದಲ್ಲಿಯೇ ಅಧಿಕವಾಗಿದೆ. ಇಶಾನ್ಯ ರಾಜ್ಯದಲ್ಲಿ ಅರಣ್ಯವಾಸಿಗಳಿಗೆ ಅನುಕೂಲ ಮಾಡಿಕೊಟ್ಟು ಅರಣ್ಯ ಸಂರಕ್ಷಿಸವಂತಹ ಕಾನೂನು ತಿದ್ದುಪಡೆ ತಂದಿದ್ದಾರೆ. ಮನುಷ್ಯನ ಪಾಪಕೃತ್ಯದಿಂದ ವಿನಾಶದ ಅಂಚಿನಲ್ಲಿರುವ ಪರಿಸರವನ್ನು ಉಳಿಸಿ ಬೆಳೆಸು ಎಲ್ಲರೂ ಮುಂದೆ ಬರಬೇಕಿದೆ ಈ ನಿಟ್ಟಿನಲ್ಲಿ ಕಪ್ಪತಗುಡ್ಡದಲ್ಲಿ ವನ್ಯಜೀವಿ ಧಾಮವನ್ನು ಸ್ಥಾಪಿಸಿ ಪ್ರಾಣಿ-ಪಕ್ಷಿಗಳು ಹಾಗೂ ಅಪರೂಪದ ಸಸ್ಯೆ ಸಂಪತ್ತನ್ನು ಉಳಿಸಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇವೆ.

ಸೋಮನಗೌಡ ಪಾಟೀಲ	ನಾಗರಾಜ ಮೆಣಸಗಿ	ರುದ್ರಣ್ಣ ಗುಳಗುಳಿ
ಪ್ರಧಾನ ಕಾರ್ಯದರ್ಶಿ, ಹಾಲುಮತ ಮಹಾಸಭಾ	ಜಿಲ್ಲಾಧ್ಯಕ್ಷರು, ಹಾಲುಮತ ಮಹಾಸಭಾ	ರಾಜ್ಯಾಧ್ಯಕ್ಷರು, ಹಾಲುಮತ ಮಹಾಸಭಾ
ಮೊ. : 9845636775	ಮೊ. : 9448746400	ಮೊ. : 9900256602

ಜಿಲ್ಲಾ ಸಂಚಾಲಕರು

M.I. Jadi

ಪ್ರಲ್ಲಾದ ಹೊಸಳ್ಳಿ, ಮೋಹನ ಇಮರಾಪೂರ, ರಮೇಶ ಹೊನ್ನಿನಾಯ್ಕರ, ಮುತ್ತು ಜಡಿ, ಮಲ್ಲೇಶಪ್ಪ ಕೊಣ್ಣೂರು

ಕಪ್ಪತ್ತಗುಡ್ಡದ ವಿಷಯದಲ್ಲಿ ಇಂತಹ ಪ್ರಮಾದ ಕರ್ನಾಟಕ ಸರಕಾರದಿಂದ ಆಗಬಾರದೆಂಬುದು ನಮ್ಮ ಕಳಕಳಿ. ಮೇಲಾಗಿ ಜಿಲ್ಲೆಯ ಪರಿಸರ ಸಮತೋಲನ ಉಳಿಯಬೇಕಾದರೆ ನಮಗೆ ಒಟ್ಟು ಜಿಲ್ಲೆಯ ಭೂಪ್ರದೇಶದ ಶೇ. 33 ರಷ್ಟು ಅರಣ್ಯ ಬೇಕು. ಆದರೆ ಈಗ ಉಳಿದಿರುವುದು ಕಪ್ಪತ್ತಗುಡ್ಡ ಪ್ರದೇಶ ಸೇರಿದಂತೆ ಶೇ. 7 ರಷ್ಟು ಮಾತ್ರ. ಇದನ್ನೇ ಉಳಿಸಿಕೊಳ್ಳುವ ಹೊಣೆಗಾರಿಕೆ ಸರಕಾರದ್ದಾಗಿದೆ. ಈ ಗಂಭೀರ ಸಮಸ್ಯೆಯನ್ನು ಸರಕಾರ ವಿಳಂಬ ಮಾಡದೇ ತಕ್ಷಣ ಪರಿಹರಿಸಬೇಕು. **ಸರಕಾರ ದಿನಾಂಕ 04-11-2016 ರಂದು ಹೊರಡಿಸಿದ ಆದೇಶವನ್ನು ಹಿಂದಕ್ಕೆ ಪಡೆದು 17872 ಹೆಕ್ಟೇರ್ (44143 ಎಕರೆ) ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಪುನಃ ಘೋಷಿಸಬೇಕು.**

ದಿನಾಂಕ : 02-12-2016 ರಂದು ಬೆಳಗಾವಿ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಮಠಾಧೀಶರಾದ ಡಂಬಳ-ಗದುಗಿನ ಮೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಗುರುಸಿದ್ಧ ರಾಜಯೋಗಿಂದ್ರ ಮಹಾಸ್ವಾಮಿಗಳು, ಶಿರಹಟ್ಟಿಯ ಶ್ರೀ ಫಕೀರಸಿದ್ಧರಾಮ ಮಹಾಸ್ವಾಮಿಗಳು, ಬೆಳಗಾವಿ ನಾಗನೂರುಮಠದ ಶ್ರೀ ಸಿದ್ಧರಾಮ ಮಹಾಸ್ವಾಮಿಗಳು, ಕೂಡಲಸಂಗಮದ ಶ್ರೀ ಜಯಮೃತ್ಯುಂಜಯ ಮಹಾಸ್ವಾಮಿಗಳು, ರಾಜೇನಹಳ್ಳಿ ವಾಲ್ಮೀಕಿ ಪೀಠದ ಶ್ರೀ ಮಹಾಸ್ವಾಮಿಗಳು, ನೀಡಸೋಸಿಯ ಶ್ರೀ ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಮುಂಡರಗಿಯ ಶ್ರೀ ನಿಜಗುಣಪ್ರಭು ಮಹಾಸ್ವಾಮಿಗಳು, ಶ್ರೀ ಅಭಿನವ ಅನ್ನದಾನ ಮಹಾಸ್ವಾಮಿಗಳು, ಮುಳಗುಂದ-ಧಾರವಾಡ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ನಂದಿವೇರಿಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಭೈರನಹಟ್ಟಿ ದೊರೇಸ್ವಾಮಿಮಠದ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು, . ಚಿಂಚಣಿ ಶ್ರೀ ಅಲ್ಲಮಪ್ರಭು ಮಹಾಸ್ವಾಮಿಗಳು, ಹಂದಿಗುಂದದ ಶ್ರೀ ಶಿವಾನಂದ ಮಹಾಸ್ವಾಮಿಗಳು, ಅಥಣಿ ಮೋಟಗಿಮಠದ ಶ್ರೀ ಪ್ರಭು ಚೆನ್ನಬಸವ ಮಹಾಸ್ವಾಮಿಗಳು, ಚಿಕ್ಕೋಡಿ ಶ್ರೀ ಸಂಪಾದನಾ ಶ್ರೀಗಳು, ಕಿತ್ತೂರು ಮಡಿವಾಳೇಶ್ವರ ವಿರಕ್ತಮಠದ ಶ್ರೀಗಳು, ಮುಂತಾದ ಪ್ರಮುಖ ಸ್ವಾಮಿಗಳು ಮತ್ತು ಅನೇಕ ಪರಿಸರವಾದಿಗಳು, ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಎಚ್.ಕೆ. ಪಾಟೀಲ ಅವರ ನೇತೃತ್ವದಲ್ಲಿ, ಸಚಿವರಾದ ಶ್ರೀ ವಿನಯ ಕುಲಕರ್ಣಿ, ಶ್ರೀ ಎಚ್. ಆಂಜನೇಯ, ಉಮಾಶ್ರೀ, ದಿ. ಮಹಾದೇವ ಪ್ರಸಾದ, ಸಂಸದ ಪ್ರಕಾಶ ಹುಕ್ಕೇರಿ ಇವರ ಸಮ್ಮುಖದಲ್ಲಿ ಶಾಸಕರಾದ ಶ್ರೀ ಜಿ.ಎಸ್. ಪಾಟೀಲ, ಶ್ರೀ ಬಿ.ಆರ್. ಯಾವಗಲ್, ಶ್ರೀ ರಾಮಕೃಷ್ಣ ದೊಡ್ಡಮನಿ, ಪ್ರೊ. ಎಸ್.ವ್ಹಿ. ಸಂಕನೂರು, ಶ್ರೀ ಮಹಾಂತೇಶ ಕವಟಗಿಮಠ, ಗದಗ ಜಿ.ಪಂ. ಅಧ್ಯಕ್ಷ ಶ್ರೀ ವಾಸಣ್ಣ ಕುರಡಗಿ, ಶ್ರೀ ಟಿ.ಈಶ್ವರ, ಮಾಜಿ ಸಂಸದ ಶ್ರೀ ಆಯ್.ಜಿ. ಸನದಿ, ಕೆ.ಎಂ.ಎಫ್. ಅಧ್ಯಕ್ಷ ನೀಲಕಂಠ ಅಸೂಟಿ ಮುಂತಾದವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರಿಗೆ ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶವೆಂದು ಮುಂದುವರೆಸಲು ಮನವರಿಕೆ ಮಾಡಿಕೊಟ್ಟಿದ್ದು ಅದೆ. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂಧಿಸಿದ್ದಾರೆ. ಇದೇ ಅದಿವೇಶನದಲ್ಲಿ ಶಾಸಕರಾದ ಶ್ರೀ ಬಸವರಾಜ ಹೊರಟ್ಟಿ, ಶ್ರೀ ಕೆ.ಎಸ್. ಈಶ್ವರಪ್ಪ, ಶ್ರೀ ಎಸ್. ವ್ಹಿ. ಸಂಕನೂರ, ಕ್ಯಾಪ್ಟನ್ ಗಣೇಶ ಕಾರ್ಣಿಕ ಮುಂತಾದವರು ಸರಕಾರದ ಗಮನ ಸೆಳೆದಿದ್ದಾರೆ. ಮಾಜಿ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ ಶೆಟ್ಟರವರು, ಶ್ರೀ ಬಿ.ಎಸ್. ಯಡಿಯೂರಪ್ಪನವರು, ಶ್ರೀ ಎಚ್.ಡಿ. ಕುಮಾರಸ್ವಾಮಿಯವರು, ಪತ್ರಿಕಾರಂಗದ ಬೀಷ್ಮ ಶ್ರೀ ಪಾಟೀಲ ಪುಟ್ಟಪ್ಪನವರು, ಪರಿಸರವಾದಿ ಶ್ರೀ ಎಸ್.ಆರ್. ಹಿರೇಮಠ, ಸಂಸದ ಶ್ರೀ ಪ್ರತಾಪ ಸಿಂಹ ಮುಂತಾದ ಗಣ್ಯರು ಹಾಗೂ ಬಳ್ಳಾರಿ ಜಿಲ್ಲಾ ಮಠಾಧೀಶರು ಸಹ ಪತ್ರಿಕಾಗೋಷ್ಠಿ ನಡೆಸಿ ಕಪ್ಪತ್ತಗುಡ್ಡ ರಕ್ಷಿಸಲು ಸರಕಾರದ ಮೇಲೆ ಒತ್ತಡ ಹಾಕಿದ್ದಾರೆ. ಮತ್ತು ಈ ಮೊದಲು ಮುಖ್ಯಮಂತ್ರಿಗಳು ಗದಗ ನಗರಕ್ಕೆ ಕಾರ್ಯಕ್ರಮಕ್ಕೆ ಬಂದಾಗ ಮೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಕಪ್ಪತ್ತಗುಡ್ಡದ ರಕ್ಷಣೆ ನಮ್ಮ ಜಿಲ್ಲೆಯ ಒಂದು ಅಂಶದ ಬೇಡಿಕೆ ಅಂತಾ ಪ್ರಕಟಿಸಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ, ಗದಗ ಜಿಲ್ಲೆಯ ಮತ್ತು ನಾಡಿನ ವಿವಿಧ ಪರಿಸರ ಪ್ರೇಮಿ ಸಂಘಟನೆಗಳು, ಶಾಲಾ-ಕಾಲೇಜ ವಿದ್ಯಾರ್ಥಿಗಳು ಕಪ್ಪತ್ತಗುಡ್ಡವನ್ನು ರಕ್ಷಿಸಲು ಸರಕಾರದ ಮೇಲೆ ಒತ್ತಡ ಹಾಕಿದ್ದಾರೆ.

ಈ ನಿಟ್ಟಿನಲ್ಲಿ ಕಪ್ಪತ್ತಗುಡ್ಡ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳು ಕಪ್ಪತ್ತಗುಡ್ಡ ಸಂರಕ್ಷಣೆಗಾಗಿ ಠರಾವು ಮಾಡುತ್ತಿರುವುದು ಸ್ವಾಗತಾರ್ಹ. ದಿನಾಂಕ : 16-01-2017 ರಂದು ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ತೋಂಟದಾರ್ಯ ಕಲಾಭವನದಲ್ಲಿ ಬೆಳಗ್ಗೆ 11-00 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಅರಣ್ಯಾಧಿಕಾರಿಗಳು ಮತ್ತು ಈ ಭಾಗದ ಶಾಸಕರ ಸಮ್ಮುಖದಲ್ಲಿ ಸಾರ್ವಜನಿಕ ಅಹವಾಲು ಸ್ವೀಕಾರ ಸಭೆ ನಡೆಯುವುದು. ಆದ್ದರಿಂದ ಮಠಾಧೀಶರು, ಜನಪ್ರತಿನಿಧಿಗಳು, ಪರಿಸರವಾದಿಗಳು, ಪತ್ರಿಕಾ & ಟಿ.ವಿ. ಮಾಧ್ಯಮದವರು, ಗ್ರಾಮಸ್ಥರು, ರೈತರು, ಕಾರ್ಮಿಕರು, ಸಾರ್ವಜನಿಕರು, ಸಂಘ-ಸಂಸ್ಥೆಗಳು, ತಾಂಡಾದ ಜನರು, ವಿದ್ಯಾರ್ಥಿಗಳು ಸಭೆಗೆ ಆಗಮಿಸಿ ಎಲ್ಲರೂ ಒಕ್ಕೂರಲಿನಿಂದ ಕಪ್ಪತ್ತಗುಡ್ಡ ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಲು ಹಕ್ಕೊತ್ತಾಯ ಮಾಡುವುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯ. "ಗಣಿಗಾರಿಕೆಯಿಂದ ಕಪ್ಪತ್ತಗುಡ್ಡ ರಕ್ಷಿಸಿ" "ನಮ್ಮ ನಾಡು ಉಳಿಸೋಣ-ಬನ್ನಿರಿ".

■■■

ಪ್ರಕಟಣೆ :

ಪರಿಸರವಾದಿಗಳು, ರೈತರು, ಗ್ರಾಮಸ್ಥರು, ತಾಂಡನಿವಾಸಿಗಳು ಮತ್ತು ಸಂಘ-ಸಂಸ್ಥೆಗಳು ಗದಗ ಜಿಲ್ಲೆ

80 ಸಾವಿರ ಎಕರೆ ವಿಸ್ತೀರ್ಣದ 63 ಕಿಲೋ ಮೀಟರ ಉದ್ದದ ಉತ್ತರ ಕರ್ನಾಟಕದ ಪಶ್ಚಿಮಘಟ್ಟ ಮತ್ತು ಮಧ್ಯ ಕರ್ನಾಟಕ ಹೃದಯ ಭಾಗ ಎಂದು ಖ್ಯಾತಿ ಪಡೆದ ಕಪ್ಪತ್ತಗುಡ್ಡ ರಕ್ಷಿಸೋಣ ಬನ್ನಿ

ಮನವಿ

ಹಿನ್ನಲೆ :

ಗದಗ ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ 63 ಕಿಲೋ ಮೀಟರ ಉದ್ದಕ್ಕೆ ಕವಲು ಕವಲಾಗಿ ಹರಡಿಕೊಂಡಿರುವ, ಚಿಕ್ಕ-ದೊಡ್ಡ ಗುಡ್ಡದ ಸಾಲುಗಳೇ ಕಪ್ಪತ್ತಗುಡ್ಡಗಳು. ಈ ಗುಡ್ಡದ ಸರಣಿ ಗದಗ ತಾಲೂಕ ಬಂಕದಕಟ್ಟಿ ಗ್ರಾಮದಿಂದ ಮುಂಡರಗಿ ತಾಲೂಕಿನ ಶಿಂಗಟಾಲೂರ ಕ್ಷೇತ್ರ - ಬಳ್ಳಾರಿ ಜಿಲ್ಲಾ ಹೂವಿನ ಹಡಗಲಿಯವರೆಗೆ ಹುಸಿರಿನಿಂದ ಬಾಚಿಕೊಂಡಿದೆ. ದೋಣಿ ಗ್ರಾಮದಿಂದ 4 ಕಿಲೋ ಮೀಟರಗಳನ್ನು ಅಂತರದಲ್ಲಿ ಬೃಹದಾಕಾರದ ಶಿಖರಗಳನ್ನೊಳಗೊಂಡು ಬೆಟ್ಟಗಳ ಸಮುಚ್ಚಯವೇ ಕಪ್ಪತ್ತಗುಡ್ಡ ಎಂಬುದು ವಾಡಿಕೆಯಲ್ಲಿದೆ. ಹಿಂದೆ ಈ ಪ್ರದೇಶದಲ್ಲಿ ಬಹು ಸಂಖ್ಯೆಯಲ್ಲಿ ಪಾರಿವಾಳಗಳು ನೆಲೆಸುತ್ತಿದ್ದರಿಂದ ಇದಕ್ಕೆ "ಕಪೋತಗಿರಿ" ಹೆಸರು ವಾಡಿಕೆಯಲ್ಲಿ ಬಂದಿರುತ್ತದೆ. ಕಪ್ಪತ್ತಮಲ್ಲಯ್ಯ, ಗಾಳಿಗುಂಡಿ ಬಸವಣ್ಣ, ನಂದಿವೇರಿಮಠ, ಶ್ರೀಶೈಲ ಮಲ್ಲಿಕಾರ್ಜುನಮಠ, ಗೋಲಗೇರಿಮಠ, ಮಹಾಲಿಂಗೇಶ್ವರಮಠ ಇಲ್ಲಿನ ಪುಣ್ಯಕ್ಷೇತ್ರಗಳಾಗಿರುತ್ತವೆ. ಅಲ್ಲದೇ ಇಲ್ಲಿ ಬಹಳ ಮಹತ್ವದ ಔಷಧೀಯ ವನಗಳಾದ ಸಂಜೀವಿನಿ ಕೊಳ್ಳ, ಅತ್ತಿಕಟ್ಟಿ, ಕಲ್ಪವೃಕ್ಷ ದನ ಮತ್ತು ಕಡಕೋಳ ಇರುತ್ತವೆ. ಈ ಅರಣ್ಯದ ಒಟ್ಟು ಕ್ಷೇತ್ರ 80,000 ಎಕರೆಗಿಂತ ಅಧಿಕವಿದೆ. ಈ ಗುಡ್ಡ ಜಿಲ್ಲೆಯ ಉತ್ತರದಿಂದ ದಕ್ಷಿಣದವರೆಗೆ 60 ರಿಂದ 65 ಕಿಲೋ ಮೀಟರ ಉದ್ದಕ್ಕೆ ಹರಡಿಕೊಂಡಿದೆ. ಈ ಗುಡ್ಡಗಳು ಸುಮಾರು 2 ಕಿಲೋ ಮೀಟರದಿಂದ 10 ಕಿಲೋ ಮೀಟರಗಳ ಅಗಲವಾಗಿವೆ. ಅತಿ ಎತ್ತರವಾದ ಈ ಗುಡ್ಡವು ಸಮುದ್ರಮಟ್ಟದಿಂದ ಸುಮಾರು 3200 ಅಡಿ ಎತ್ತರದಲ್ಲಿದೆ. ಇದು ಮಧ್ಯ ಕರ್ನಾಟಕದ ಬೀವನಾಡಿಯಾಗಿದೆ, ಕೆಂಪು ಮಿಶ್ರಿತ ಮಣ್ಣು ಮತ್ತು ವಿವಿಧ ನಮೂನೆಯ ಬೆಟ್ಟಗಳ ಸಂಗಮವಾಗಿರುವ ಇದು ಪುಣ್ಯಪುರುಷರ ತಪೋಭೂಮಿಯಾಗಿ ಸಹ ಹೆಸರು ಮಾಡಿದೆ.

"ಎಪ್ಪತ್ತು ಗಿರಿಗಿಂತ ಕಪ್ಪತ್ತಗಿರಿ ನೋಡು, ಕಣ್ಣಿದ್ದಾಗ ಕನಕಗಿರಿ ನೋಡಬೇಕು, ಕಾಲು ಇದ್ದಾಗ ಕಪ್ಪತ್ತಗಿರಿ ಹತ್ತಬೇಕು" ಎಂದು ಹೇಳುವ ಯುಕ್ತಿಗಳು ಈ ಕಪ್ಪತ್ತಗುಡ್ಡದ ಹಿರಿಮೆಯನ್ನು ಸಾರಿ ಹೇಳುತ್ತವೆ. "ರಾಮಾಯಣ ಕಾಲದಲ್ಲಿ ರಾಮ-ರಾವಣರ ನಡುವೆ ಯುದ್ಧ ನಡೆದಾಗ ಲಕ್ಷ್ಮಣ ಮೂರ್ಛೆ ಬಂದು ಬಿದ್ದಾಗ ಹನುಮಂತ ಕಪ್ಪತ್ತಗುಡ್ಡಕ್ಕೆ ಬಂದು ಸಂಜೀವಿನಿ ಔಷಧವನ್ನು ತೆಗೆದುಕೊಂಡು ಹೋದ" ಎಂಬ ದಂತ ಕಥೆಯೊಂದು ಪ್ರಚಲಿತದಲ್ಲಿದೆ.

ಕಪ್ಪತ್ತಗುಡ್ಡದಲ್ಲಿ ಏನಿದೇ? ಎಂದು ಪ್ರಶ್ನೆಮಾಡುವದಕ್ಕಿಂತ, ಕಪ್ಪತ್ತಗುಡ್ಡದಲ್ಲಿ ಏನಿಲ್ಲಾ? ಎಂದು ಕೇಳುವದು ಹೆಚ್ಚು ಸೂಕ್ತವಾಗುತ್ತದೆ. ಏಕೆಂದರೆ ಕಪ್ಪತ್ತಗುಡ್ಡ ಖನಿಜ ಸಂಪತ್ತಿನ ಆಗರ ಈ ಮಣ್ಣಿನಲ್ಲಿ ಚಿನ್ನವಿದೆ, ಮ್ಯಾಂಗನೀಜ್, ಕಬ್ಬಿಣದ ಅದಿರು, ತಾಮ್ರ, ಕ್ಯಾಲ್ಸಿಯಂ ಮುಂತಾದ 18 ಪ್ರಕಾರದ ಅಮೂಲ್ಯವಾದ ಖನಿಜ ಸಂಪತ್ತು ಇದೆ. ಇಂತಹ ಖನಿಜ ಭರಿತ ಭೂಮಿಯಲ್ಲಿ 300 ಕ್ಕೂ ಹೆಚ್ಚು ಜಾತಿಯ ಔಷಧಿ ಸಸ್ಯಗಳು ಇವೆ, ಎಂದು ರಾಷ್ಟ್ರೀಯ ಆಯುರ್ವೇದಿಕ ಸಂಶೋಧನಾ ಸಂಸ್ಥೆ, ಜಯನಗರ, ಬೆಂಗಳೂರು ಇದು ವರದಿ ಮಾಡಿದೆ. ಈ ಸಸ್ಯಗಳಲ್ಲಿ ಕರಿಲೆಕ್ಕಿ, ಅಶ್ವಗಂಧ, ಚದುರಂಗ, ಅಮೃತ ಬಳ್ಳಿ, ಮುಂತಾದವುಗಳನ್ನು ಹೆಸರಿಸಬಹುದು. ಇಲ್ಲಿಯ ಔಷಧೀಯ ಸಸ್ಯಗಳನ್ನು ಪುಣೆ, ಬೆಂಗಳೂರು, ಹೈದರಾಬಾದ ಮತ್ತು ಉತ್ತರ ಭಾರತದ ಆಯುರ್ವೇದ ತಜ್ಞರು ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಇಂದಿಗೂ ಔಷಧಿ ಸಸ್ಯಗಳ ಶಾಮಲೆಯಾಗಿದೆ. ಈ ಔಷಧೀಯ ಸಸ್ಯಗಳ ಸಂರಕ್ಷಣೆ ಮತ್ತು ಸಂಶೋಧನೆಯಾಗಬೇಕಾಗಿದೆ. ಕಪ್ಪತ್ತಗುಡ್ಡ ಬೇರಿನ ಸಂಪತ್ತಿನ ಆಗರವೇ ಆಗಿದೆ. ಒಂದು ಮಳೆ ಬಿದ್ದರೆ ಸಾಕು ಈ ಬೇರುಗಳು ಚಿಗುರೊಡೆದು ಹಸಿರಿನಿಂದ ನಳನಳಿಸುತ್ತವೆ. ಇವುಗಳಿಗೆ ಯಾವುದೇ ಆಪತ್ತುಗಳು ಬರದೇ ಸಂರಕ್ಷಣೆ ಮಾಡಿದರೆ ಅದೊಂದು ಕಾಯಿಲೆಗಳನ್ನು ಗುಣಪಡಿಸುವ ಸಂಜೀವಿನಿಯಾಗುತ್ತದೆ.

ಕಪ್ಪತ್ತಗುಡ್ಡದಲ್ಲಿ 30ಕ್ಕೂ ಹೆಚ್ಚು ಕೆರೆಗಳು, ಹಳ್ಳಗಳು, ಝರಿಗಳು, ಕೊಳ್ಳಗಳು ಜನ್ಮ ತಾಳಿದ್ದು, ಅವು ಅಂತ್ಯದಲ್ಲಿ ತುಂಗಭದ್ರಾ ನದಿ ಸೇರುತ್ತವೆ. ಹೀಗಾಗಿ ಈ ಕಪ್ಪತ್ತಗುಡ್ಡದ ಅರಣ್ಯ ಶ್ರೇಣಿ ಮುಂಡರಗಿ ಹಾಗೂ ಶಿರಹಟ್ಟಿ ತಾಲೂಕಿನ ಕೃಷಿಕರಿಗೆ ಮಹತ್ವದ ಜಲಾನಯನ ಪ್ರದೇಶವಾಗಿದೆ. ಇವುಗಳು ಕಪ್ಪತ್ತಗುಡ್ಡದಲ್ಲಿರುವ ಪ್ರಾಣಿ-ಪಕ್ಷಿಗಳಿಗೆ ನೀರಿನ ದಾಹವನ್ನು ಇಂಗಿಸುತ್ತಿದ್ದವು. ಅವು ಈಗ ಹೂಳು ತುಂಬಿ ಹೆಚ್ಚು ನೀರು ನಿಲ್ಲದಂತಾಗಿವೆ. ಇಂತಹ ಕೆರೆಗಳಲ್ಲಿ ಆಲದ ಕೆರೆ, ಬಂಗಾರಕೊಳ್ಳ, ಮಂಜಿನ ಡೋಣಿ, ಕಾರಿಸಿದ್ದಪ್ಪನ ಪಡಿ, ಬೇಡರ ಕಣ್ಣಪ್ಪನ ಪಡಿ, ಹಗಲಬತ್ತಿಯ ಕೆರೆ ಇನ್ನೂ ಮುಂತಾದ ಕೆರೆಗಳನ್ನು ಪುನಶ್ಚೇತನ ಮಾಡಬೇಕಿದೆ. ಅರಣ್ಯದಲ್ಲಿರುವ ಪ್ರಾಣಿಗಳಿಗೆ ಅಲ್ಲಿಯೇ ಕುಡಿಯಲು ನೀರು ದೊರೆತರೆ, ಅವುಗಳು ನಾಡಿಗೆ ಬರುವುದು ತಕ್ಕಮಟ್ಟಿಗೆ ಕಡಿಮೆಯಾಗುತ್ತದೆ. ಈ ಪ್ರದೇಶದಲ್ಲಿ 2006ರಲ್ಲಿ ಕರ್ನಾಟಕ ಸರಕಾರ ನಡೆಸಿದ ವನ್ಯ ಪ್ರಾಣಿಗಳ ಗಣತಿ ಪ್ರಕಾರ ಸಸ್ಯಹಾರಿ ಪ್ರಾಣಿಗಳ ಸಂಖ್ಯೆ : ಕೃಷ್ಣಮೃಗ-370, ಕಾಡು ಕುರಿ-66, ಚುಕ್ಕೆ ಜಿಂಕೆ-35, ಮುಳ್ಳ ಹಂದಿ-165, ಕಾಡು ಹಂದಿ-295 ಇರುತ್ತವೆ. ಇನ್ನೂ ಮಾಂಸಹಾರಿ ವನ್ಯ ಪ್ರಾಣಿಗಳ ಸಂಖ್ಯೆ : ಚಿರತೆ-4, ಕರಡಿ-4, ತೋಳ-40, ನರಿ-85, ಕತ್ತೆ ಕಿರುಬ-12, ಕಾಡ ಬೆಕ್ಕು-13 ಈ ರೀತಿ ಒಟ್ಟು 1089 ವನ್ಯ ಪ್ರಾಣಿಗಳಿದೆ. ಈ ಭಾಗದಲ್ಲಿ 700 ರಿಂದ 1000 ಕ್ಕೂ ಹೆಚ್ಚು ನವಿಲುಗಳು, ಹೈನಾ, ಸಾರಂಗ ಮತ್ತು ಅಸಂಖ್ಯಾತ ದನ ಕರುಗಳು, ಕುರಿಗಳು ಇರುತ್ತವೆ. ಈ ಎಲ್ಲ ಪ್ರಾಣಿಗಳಿಗೆ ಆಶ್ರಯತಾಣವಾಗಿರುವ ಈ ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶವಾಗಿ ಮುಂದುವರೆಯುವುದು ತುಂಬಾ ಅವಶ್ಯವಿದೆ.

ಸುಮಾರು 20 ವರ್ಷಗಳ ಹಿಂದ ಕಪ್ಪತ್ತಗುಡ್ಡದ ಮೇಲೆ ಮೋಡವಾದರೆ ಮಳೆ ಖಂಡಿತ ಎನ್ನಲಾಗುತ್ತಿತ್ತು. ಆಂದರೆ ಅಷ್ಟು ದಟ್ಟವಾದ ಅರಣ್ಯ ಇಲ್ಲಿತ್ತು. ಕಪ್ಪತ್ತಗುಡ್ಡದ ಮೇಲೆ ಮೋಡ ಬಂದರೆ ಸಾಕು ಇಲ್ಲಿಯ ರೈತರು ಹೊಲದಲ್ಲಿನ ಕೆಲಸವನ್ನು ಬಿಟ್ಟು ಮನೆಯನ್ನು ಸೇರಿಕೊಳ್ಳುತ್ತಿದ್ದರು. ಅಂದರೆ ಮಳೆ ಖಂಡಿತ ಅನ್ನುವಷ್ಟು ಪ್ರಮುಖವಾಗಿತ್ತು. "ಗುರಜ-ಗುರಜ ಎಲ್ಲಾಡಿ ಬಂದಿ, ಕಾರಮಳಿಯೇ ಕಪ್ಪತ್ತ ಮಳೆಯೇ, ಸುರಿ ಮಳೆಯೇ-ಸುರಿ ಮಳೆಯೇ" ಎಂದು ಹಾಡುವ ಹಾಡು ಇಲ್ಲಿ ಬೀಳುವ ಮಳೆಯ ಪ್ರಮಾಣಕ್ಕೆ ಸಾಕ್ಷಿಯಾಗಿದೆ. ಹೀಗೆ ಹತ್ತು ಹಲವು ವಿಶೇಷತೆಗಳನ್ನು ಹೊಂದಿದ ಕಪ್ಪತ್ತಗುಡ್ಡ ಖಂಡಿತ ಸಂರಕ್ಷಿತ ಪ್ರದೇಶವಾಗಿ ಉಳಿದರೆ ಮಧ್ಯಕರ್ನಾಟಕ ಸಮೃದ್ಧ ನಾಡು ಆಗುವುದರಲ್ಲಿ ಸಂಶಯವಿಲ್ಲ.

ಈ ಗುಡ್ಡ ಪಶು ಪಕ್ಷಿಗಳ ಸಂಕುಲವಾಗಿ ಕಲರವದ ಮಾರ್ಧನಿಯೊಂದಿಗೆ ಪ್ರಕೃತಿಯ ರಮ್ಯ ನಿಗೂಢತೆ, ಬೆಲುವು-ಸೌಂದರ್ಯ-ಭವ್ಯತೆಯಿಂದ ಮನಪುಳಕಿಸುವ ತಾಣವಾಗಿದೆ. ಈ ಗುಡ್ಡ ತನ್ನ ವಿಸ್ಮಯ ಲಾಲಿತ್ಯವನ್ನು ಬೀರುತ್ತಾ ಮಾನವ ಸಂವೇದನೆಗಳಿಗೆ ಮಾಧುರ್ಯದ ರಸಭಕ್ಷವನ್ನು ಉಣಿಸುತ್ತಿದೆ. ಈ ಬೆಟ್ಟ ಪ್ರದೇಶವು ದಶಕಗಳಿಂದ ಮಾನವರ ಆಕ್ರಮಣಕ್ಕೆ ಶೋಷಣೆಗೆ ಈಡಾಗಿ ಹಸಿರಿನಿಂದ ಬೆತ್ತಲೂ ಗುಡ್ಡವಾಗಿ ರಣರಣಿಸಿ ವಿಕೃತಿಯ ಪರಾಕಾಷ್ಠೆಯನ್ನು ತಲುಪಿ ನಗ್ನತೆಯ ಅಭಿಶಾಪದಿಂದ ಭರಡಾಗಿ ಹಸಿರಿನ ಉಸಿರಿನಿಂದ ವಂಚಿತವಾಗಿ ನೀರಿನ ಭರದಿಂದ ಪ್ರಾಣಿ ಪಕ್ಷಿಗಳು ಬೇಡವಾಗಿ ಮಾನವನ ರೌರ್ಜನ್ಯಕ್ಕೆ ಸೋತು ಸೊರಗಿವೆ. ಈ ಬೆಟ್ಟದ ಗಿರಿಗಳಲ್ಲಿ ಸುಂದರ, ಸಮೃದ್ಧ, ಸೊಗಡನ್ನು ಇಲ್ಲಿ ಕಾಣಬಹುದು. ಇದು ದಕ್ಷಿಣದ ಶೀಮ್ಲಾ ಪ್ರದೇಶಕ್ಕೆ ಸರಿಸಮಾನವಾದುದು. ಅದಕ್ಕಾಗಿ ಇದನ್ನು ಉತ್ತರ ಕರ್ನಾಟಕದ ಸನ್ಯಕಾಶಿಗಳ ಬೆಟ್ಟ ಎಂದು ಕರೆಯುತ್ತಾರೆ. ಓಝೋನ ಪದರಿನಲ್ಲಾಗಿರುವ ಏರುಪೇರನ್ನು ಸರಿದೋಗಿಸಬಲ್ಲ ಸಾಮರ್ಥ್ಯ ಈ ಬೆಟ್ಟದ ನೆಲದಲ್ಲಿದೆ. ಇದು ಭೂಕಂಪನವನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿದೆ.

ಕಪ್ಪತ್ತಗುಡ್ಡದ ಮೇಲೆ ವರ್ಷದುದ್ದಕ್ಕೂ ಅಧಿಕ ವೇಗದ ತೀವ್ರತರ ಗಾಳಿ ಬೀಸುತ್ತಿದೆ. ನಂದಿವೇರಿ ಬೆಟ್ಟದ ದಕ್ಷಿಣದ ಗಾಳಿಗುಂಡಿ ಬಸವಣ್ಣ ದೇವಾಲಯದ ಬಳಿ ಗಂಟೆಗೆ 90 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುತ್ತದೆ. ಈ ಕಾರಣಕ್ಕಾಗಿ ಇಲ್ಲಿ ಗಿಡ ಮರಗಳನ್ನು ಕಡೆದು ಕೆಲವೂ ಖಾಸಗಿ ಕಂಪನಿಗಳು ವಿಪರೀತ ಸಂಖ್ಯೆಯಲ್ಲಿ ವಿಂಡಮಿಲ್ ಹಾಕಿದ್ದಾರೆ.

ಕಪ್ಪತ್ತಗುಡ್ಡದ ಮಹತ್ವದ ಹಿನ್ನೆಲೆಯಲ್ಲಿ ಅಂದಿನ ಬ್ರಿಟಿಷ್ ಸರಕಾರ 1882 ರ ಬಾಂಬೆ ಗೆಜೆಟ್‌ದಲ್ಲಿ ಈ ಗುಡ್ಡವನ್ನು ರಕ್ಷಿತ ಅರಣ್ಯ ಪ್ರದೇಶ (Reserve Forest) ಅಂತಾ ಘೋಷಿಸಿ ರಕ್ಷಣೆ ಮಾಡಿದ್ದು ಅದೆ. ಸ್ವಾತಂತ್ರ್ಯದ ನಂತರ ಯಾವುದೇ ಸರಕಾರ ಪುನಃ ಈ ಗುಡ್ಡವನ್ನು ಸರಿಯಾಗಿ ರಕ್ಷಿಸಿ ಬೆಳೆಸುವ ಗೋಜಿಗೆ ಹೋಗಲಿಲ್ಲ.

ಈ ಕಪ್ಪತ್ತಗುಡ್ಡದ ರಕ್ಷಣೆಗಾಗಿ ಮತ್ತು ಇದನ್ನು ವನ್ಯಧಾಮ ಅಂತಾ ಘೋಷಿಸಲು ಶ್ರೀ ಅನೀಲ ಕುಂಬೈ ಅವರು ದಿನಾಂಕ : 21-02-2013 ರಂದು ಮುಂಡರಗಿ ತಾಲೂಕ ಡಂಬಳ ಗ್ರಾಮದ ಶ್ರೀ ಕೋಂಟದಾರ್ಯ ಕಲಾಭವನದಲ್ಲಿ ಸಾರ್ವಜನಿಕ ಅಹವಾಲು ಕೇಳಲು ಬಂದಿದ್ದರು. ಅವರ ವರದಿ ಆಧರಿಸಿ ಸರಕಾರ ಈ ಅರಣ್ಯ ಪ್ರದೇಶವನ್ನು ವನ್ಯಧಾಮದ ಬದಲು ಸಂರಕ್ಷಿತ ಅರಣ್ಯ ಪ್ರದೇಶವೆಂದು ದಿನಾಂಕ : **19-12-2015 ರಂದು ಘೋಷಿಸಿ ಆದೇಶ ಹೊರಡಿಸಿತು.**

ಈ ಗುಡ್ಡದ ಅದಿರಿನ ಮೇಲೆ ಕಣ್ಣಿಟ್ಟಿದ್ದ ಬಲ್ಯೋಟಾ ಕಂಪನಿಯು 2001 ರಲ್ಲಿ ಕೇಂದ್ರ ಸರಕಾರದ ಚಿನ್ನದ ನಿಕ್ಷೇಪಣ ಪರಿಶೀಲನ ಅನುಮತಿ ಪಡೆದು 2004 ರಲ್ಲಿ ಶಿರಹಟ್ಟಿ ತಾಲೂಕಿನ ಜೆಲ್ಲಿಗೇರಿ ಗ್ರಾಮದ 100 ಎಕರೆ ಜಮೀನಿನಲ್ಲಿ ಚಿನ್ನದ ಗಣಿ ಗುತ್ತಿಗೆಗಾಗಿ ಮೈನಿಂಗ್ ಲೈಸನ್ಸ್ ಪಡೆಯಲು ಅರ್ಜಿ ಸಲ್ಲಿಸಿತು. ಕೇಂದ್ರ ಸರಕಾರ ಗಣಿ ನಿಯಂತ್ರಣ ಇಲಾಖೆ (Indian Beauro of Mines) 2007 ರಲ್ಲಿ ಇವರ ಗಣಿಗಾರಿಕಾ ವಿಧಾನಕ್ಕೆ ಅನುಮತಿ ನೀಡಿತು. 2008 ರಲ್ಲಿ ಕೇಂದ್ರ ಸರಕಾರದ ಪರಿಸರ ಇಲಾಖೆ ಈ ಕಂಪನಿಗೆ ತನ್ನ ನಿಯಮಾವಳಿ (Terms of Reference) ಗಳನ್ನು ಬಿಡುಗಡೆ ಮಾಡಿತು. ಇದಾದ ನಂತರ 2008 ರಲ್ಲಿ ರಾಜ್ಯ ಸರಕಾರ 100 ಎಕರೆ ಭೂಮಿಯನ್ನು ಕಪ್ಪತ್ತಗುಡ್ಡದ ಪ್ರದೇಶದಲ್ಲಿ ಬಲ್ಯೋಟಾ ಕಂಪನಿಗೆ 30 ವರ್ಷ ಲೀಜ ನೀಡಿದೆ. ಈಗಾಗಲೇ ಈ ಹಿಂದೆ ದಿನಾಂಕ : 07-07-2009 ರಂದು ಅತ್ತಿಕಟ್ಟಿ ಗ್ರಾಮದಲ್ಲಿ ಮತ್ತು ದಿನಾಂಕ : 21-02-2013 ರಂದು ಡಂಬಳದಲ್ಲಿ ನಡೆದ ಸಾರ್ವಜನಿಕ ಅಭಿಪ್ರಾಯ ಸಂಗ್ರಹದ ಸಭೆಯಲ್ಲಿ ಈ ಗಣಿಗಾರಿಕೆ ವಿಂಡ ಮಿಲ್ ಕಂಪನಿಗಳ ಮನವಿಯನ್ನು ಸರಕಾರ ಮರಸ್ಕರಿಸಿರುವದಿಲ್ಲಾ.

ಈ ಗುಡ್ಡವನ್ನು ಸಂರಕ್ಷಿಸುವ ಸಲುವಾಗಿ ಸರಕಾರ 2 ಸಲ ಸಾರ್ವಜನಿಕರ ಅಹವಾಲು ಕೇಳಿದೆ. ಸರಕಾರ ತಾನೇ ರಚಿಸಿದ ಸಮಿತಿಯ ನಿರ್ಣಯಗಳಿಗೆ ಬದ್ಧರಾಗದೇ 80000 ಎಕರೆ ರಕ್ಷತಾ ಅರಣ್ಯ ಪ್ರದೇಶದಲ್ಲಿ 44000 ಎಕರೆ ಪ್ರದೇಶವನ್ನು ದಿನಾಂಕ : 19-12-2015 ರಂದು ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿ ಆದೇಶ ಹೊರಡಿಸಿತು. ಮುಂದೆ ಸರಕಾರ ತಾನು ಹೊರಡಿಸಿದ ಈ ಆದೇಶವನ್ನು ಉಳಿಸಿಕೊಳ್ಳದೇ ದಿನಾಂಕ : 04-11-2016 ರಂದು ಮತ್ತೊಂದು ಆದೇಶ ಹೊರಡಿಸಿ ಈ 44000 ಎಕರೆ ಅರಣ್ಯ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶದಿಂದ ಕೈಬಿಟ್ಟಿದೆ ಎಂದು ಆದೇಶ ಮಾಡಿದೆ. ಈ ಎಲ್ಲ ಬೆಳವಣಿಗೆ ಮೂಲ ಕಾರಣ ಗಣಿ ಮತ್ತು ವಿಂಡ ಮಿಲ್ ಕಂಪನಿಗಳ ಮಾಲೀಕರ ಒತ್ತಡ ಎನ್ನಬಹುದು. ಬ್ರಿಟೀಷರ ಕಾಲದಿಂದಲೂ ಈ ಗುಡ್ಡದ ಪ್ರದೇಶದಲ್ಲಿ ಬಾಗೇವಾಡಿ, ಬದರಳ್ಳಿ ಗುಡ್ಡದ ಬೂದಿಹಾಳ, ಜಾಲವಾಡಗಿ, ಕೆಲೂರ, ಮುಂಡವಾಡ, ಮುರಡಿ, ಜಾಗೀನಕೆರೆ, ಹಮ್ಮಿಗಿ, ಹಿರೇವಡ್ಡಟ್ಟಿ, ಚಿಕ್ಕವಡ್ಡಟ್ಟಿ, ಹಾರೂಗೇರಿ, ಬೀಡನಾಳ, ಕಲಕೇರಿ, ಮುಷ್ಟಿಕೊಪ್ಪ, ಶಿಂಗಟಾಲೂರು, ಅತ್ತಿಕಟ್ಟಿ, ಡಂಬಳ, ಡೋಣಿ, ದಿಂಡೂರು, ಶಿಂಗಟರಾಯನಕೇರಿ, ಕಡಕೋಳ, ಜೆಲ್ಲಿಗೇರಿ, ಮಜ್ಜೂರು, ಕುಶಲಾಪೂರ, ವರವಿ, ಬಾವನೂರು, ಸೊರಟೂರು, ಮಹಾಲಿಂಗಮರ, ಶಿರುಂಜ, ಬೆಳದಡಿ, ಪಾವನಾಶಿ ತಾಂಡೆ, ಕಬಲಾಯತಕಟ್ಟಿ, ನಭಾಪೂರ ಹೀಗೆ 33 ಹಳ್ಳಿಗಳಲ್ಲಿ ಈ ಗುಡ್ಡದ ಪ್ರದೇಶ ಹರಡಿಕೊಂಡಿದೆ. ಅತೀ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಗ್ರಾಮ ಡೋಣಿ. ಈ ಗ್ರಾಮ 10000 ಎಕರೆ ಕಪ್ಪತ್ತಗಿರಿಯ ಪ್ರದೇಶವನ್ನು ಹೊಂದಿದೆ. ಚಿಕ್ಕವಡ್ಡಟ್ಟಿ & ಹಿರೇವಡ್ಡಟ್ಟಿ ಗ್ರಾಮ 8000 ಎಕರೆ, ಡಂಬಳ ಗ್ರಾಮ 1500 ಎಕರೆ ಹೊಂದಿದೆ. ಹೀಗೆ ಉಲ್ಲೇಖಿಸಿದ ಈ ಗ್ರಾಮಗಳು ಕಪ್ಪತ್ತಗುಡ್ಡದ ಅರಣ್ಯ ಪ್ರದೇಶವನ್ನು ಹೊಂದಿವೆ.

ಸರಕಾರ ಈ ಅರಣ್ಯ ಪ್ರದೇಶದಲ್ಲಿ ವಾಸಿಸುವ ಮೂಲನಿವಾಸಿಗಳಿಗೆ ಹಕ್ಕು ಪತ್ರ ಕೊಡುವ ಕಾಯ್ದೆ ಜಾರಿಗೆ ತಂದಿದೆ. ಆ ಹಕ್ಕು ಪತ್ರವನ್ನು ಕಾನೂನು ಬದ್ಧವಾಗಿ ಕೊಡುತ್ತಾರೆ. ಮತ್ತು ಮುಂದಿನ ದಿನಗಳಲ್ಲಿ ಕೂಡಾ ಕಾಯ್ದೆಪ್ರಕಾರ ಹಕ್ಕು ಪತ್ರ ಕೊಡುತ್ತಾರೆ. ಆದ್ದರಿಂದ ಈ ಗುಡ್ಡ ಸಂರಕ್ಷಿತ ಪ್ರದೇಶವಾದರೆ ಈ ಪ್ರದೇಶದಲ್ಲಿ ವಾಸಿಸುವ ಯಾವುದೇ ಗ್ರಾಮಸ್ಥರನ್ನು ಅಥವಾ ಲಂಬಾಣಿ ತಾಂಡಾದ ಜನರನ್ನು ಅಥವಾ ರೈತರನ್ನು ಒಕ್ಕಲೆಬ್ಬಿಸುವ ಪ್ರಶ್ನೆ ಬರುವುದಿಲ್ಲಾ. ಗಣಿದಣಿಗಳು ತಮ್ಮ ಗಣಿಗಾರಿಕೆಗೆ ಈ ಜನರು ತೊಂದರೆ ಮಾಡಬಾರದೆಂಬ ಉದ್ದೇಶದಿಂದ ಮತ್ತು ಈ ಪ್ರದೇಶ ಸಂರಕ್ಷಿತ ಪ್ರದೇಶವಾಗಿ ಉಳಿದರೆ ಇಲ್ಲಿ ಗಣಿಗಾರಿಕೆ ಮಾಡಲು ಬರುವುದಿಲ್ಲಾ ಎಂಬ ಭಯದಿಂದ ಸ್ಥಳೀಯ ನಿವಾಸಿಗಳನ್ನು ವಿಶೇಷವಾಗಿ ಲಂಬಾಣಿ ತಾಂಡಾದ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಗಣಿಗಾರಿಕೆ ಪ್ರಾರಂಭವಾದರೆ ಈ ಪ್ರದೇಶದ ಜನರಿಗೆ ತೊಂದರೆಯಾಗುವುದು ಖಂಡಿತ. ಸಂರಕ್ಷಿತ ಅರಣ್ಯ ಪ್ರದೇಶವಾದರೆ ಯಾವುದೇ ತೊಂದರೆಯಾಗುವುದಿಲ್ಲ. ಆದ್ದರಿಂದ ಜನರು ಗಣಿ ಕಂಪನಿಗಳ ಮತ್ತು ವಿಂಡ ಮಿಲ್ ಕಂಪನಿಗಳ ಅವರ ಹಿಂಬಾಲಕರ ವದಂತಿಗಳಿಗೆ ಕಿವಿಗೊಡದೇ ಶತ-ಶತಮಾನಗಳ ಹಿಂದೆ ದೇವರು ನಿರ್ಮಿಸಿದ ಈ ನೈಸರ್ಗಿಕ ಪಾರಂಪರಿಕವಾದ ಈ ಕಪ್ಪತ್ತಗುಡ್ಡವನ್ನು ರಕ್ಷಿಸಿದರೆ ನಮ್ಮ ಮುಂದಿನ ಪೀಳಿಗೆಗೆ ರಕ್ಷಣೆ ಸಿಗುವುದು. ಶುದ್ಧ ಗಾಳಿ, ಶುದ್ಧ ನೀರು, ಶುದ್ಧ ಪರಿಸರ ನಮಗೆ ದೊರೆಯುವುದು.

ಕಪ್ಪತ್ತಗುಡ್ಡದಲ್ಲಿ ಗಣಿಗಾರಿಕೆ ನಡೆದರೆ ಮರಣ ಶಾಸನ ಬರೆದಂತೆ

ಕಪ್ಪತ್ತಗುಡ್ಡದಲ್ಲಿ ಕಬ್ಬಿಣದ ಅದಿರನ ಅಂಶವು ಶೇಕಡಾ 60 ರಿಂದ 63 ರಷ್ಟು ಇದೆ. ಅಲ್ಲದೆ ಇಲ್ಲಿ ಸಿಗುವ 1 ಟನ್ ಚಿನ್ನದ ಅದಿರಿಗೆ 4 ರಿಂದ 5 ಗ್ರಾಂ ಬಂಗಾರ ದೊರೆಯುವದು. ಇದೇ ಹಟ್ಟಿ ಚಿನ್ನದ ಗಣಿಯಲ್ಲಿ 1 ಟನ್ ಅದಿರಿಗೆ 2 ಗ್ರಾಂ ಬಂಗಾರ ಉತ್ಪಾದನೆಯಾಗುವದು, ಕೋಲಾರ ಖಾಲಿಯಾಗಿದೆ.

ಇಲ್ಲಿ ಸಿಗುವ ಸಮೃದ್ಧ ಖನಿಜ ಸಂಪತ್ತನ್ನು ಗುರಿಯಾಗಿರಿಸಿಕೊಂಡು ದಕ್ಷಿಣ ಕೋರಿಯಾದ ಬೃಹತ್ ಪೋಸ್ಕೋ ಕಂಪನಿ 65000 ಕೋಟಿ ರೂ ಬಂಡವಾಳ ಹಾಕಲು ಯೋಜನೆಯನ್ನು ರೂಪಿಸಿತ್ತು. ಆಗ ನಾಡಿನ ಮಠಾಧಿಪತಿಗಳು ವಿಶೇಷವಾಗಿ ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ನೇತೃತ್ವದ ಹೋರಾಟಗಾರರು ಸದರಿ ಕಂಪನಿಯವರಿಗೆ "ಕಪ್ಪತ್ತಗುಡ್ಡಕ್ಕೆ ಕೈ ಹಚ್ಚುವದಿಲ್ಲಾ ಮತ್ತು ತುಂಗಭದ್ರಾ ನದಿ ನೀರು ಬಳಸುವುದಿಲ್ಲಾ" ಎಂದು ಆ ಕಂಪನಿಗೆ ಒಪ್ಪಿಗೆ ಪತ್ರ ಕೇಳಿದಾಗ ಈ ಶರತ್ತನ್ನು ಒಪ್ಪದ ಆ ಪೋಸ್ಕೋ ಕಂಪನಿ ಮಠಾಧಿಪತಿಗಳು, ಪರಿಸರವಾದಿಗಳ, ರೈತರ, ಜನಪ್ರತಿನಿಧಿಗಳು, ಸಾರ್ವಜನಿಕರ, ಮಾಧ್ಯಮದವರ ಆಕ್ರೋಶಕ್ಕೆ ಗುರಿಯಾಗಿ ಇಲ್ಲಿಂದ ಪೋಸ್ಕೋ ಕಂಪನಿ ಸ್ಥಾಪಿಸುವ ಯೋಜನೆಯನ್ನು ಸರಕಾರ ಕೈಬಿಟ್ಟಿದ್ದು ಎಲ್ಲರಿಗೂ ತಿಳಿದಿರುವ ಸಂಗತಿ. ಇದು ಗೊತ್ತಿದ್ದರೂ ಬಲ್ಯೋಟಾ ಕಂಪನಿಯವರು ಕಪ್ಪತ್ತಗುಡ್ಡದ ಬಂಗಾರ ಉತ್ಪಾದನೆಗೆ ಇಲ್ಲಿಯ ಖನಿಜ ಸಂಪತ್ತಿನ ಮೇಲೆ ಕಣ್ಣಿಟ್ಟಿರುವುದು ವಿಷಾದದ ಸಂಗತಿ.

ಬಂಗಾರದ ಉತ್ಪಾದನೆಯಾಗಬೇಕಾದರೆ ಸೋಡಿಯಂ ಸೈನೈಡ್ (Deadly Poison) ಎಂಬ ದ್ರಾವಣ ಉಪಯೋಗಿಸುತ್ತಾರೆ. ಇದು ಮಾರಣಾಂತಿಕ ವಿಷಕಾರಿಯಾದ ದ್ರಾವಣ. ಇದರ ವಾಸನೆ ಪಡೆದರೆ ಮನುಷ್ಯನ ನರಗಳ ಹಾಗೂ ಮೆದುಳಿನ ಮೇಲೆ ದುಷ್ಪರಿಣಾಮ ಬೀರಿ ತಕ್ಷಣ ಮನುಷ್ಯ ಸಾಯುತ್ತಾನೆ. ಅದೂ ಅಲ್ಲದೆ ಬಂಗಾರವನ್ನು ಹೊರತೆಗೆದ ನಂತರ ಆದಿರಿನಿಂದ ಹೊರಬರುವ ಹಾರೂಬೂದಿಯ ಬೃಹತ್ ಪ್ರಮಾಣದ ಒಂದು ಗುಡ್ಡ ನಿರ್ಮಾಣವಾಗುವುದು. ಈ ಹಾರೂಬೂದಿ ಗಾಳಿಯಲ್ಲಿ ಹಾರಿಹೋಗಿ ಭೂಮಿಯ ಮೇಲೆ ಬಿದ್ದು, ಭೂಮಿಯನ್ನು ನಾಶಪಡಿಸುವುದು ಮತ್ತು ಈ ಗುಡ್ಡದ ಅಂತರಜಲಗಳು ತುಂಗಭದ್ರಾನದಿ ಸೇರುವುದರಿಂದ ಸೋಡಿಯಂ ಸೈನೆಡ್ ದ್ರಾವಣ ಅಂತರಜಲಕ್ಕೆ ಸೇರಿ ಜೀವ ಸಂಕುಲಕ್ಕೆ ಅನಾಹುತ ಉಂಟು ಮಾಡುವುದು. ಸೋಡಿಯಂ ಸೈನಡ ದ್ರಾವಣದಿಂದಾಗುವ ಹಾನಿ ಭೋಪಾಲ ದುರಂತವನ್ನು ನೆನಪಿಗೆ ತರುತ್ತದೆ. ಜನರ, ನದಿಯ ಜಲ-ಚರಗಳ, ಪ್ರಾಣಿ-ಪಕ್ಷಿಗಳ, ಮಾರಣಹೋಮ ನಡೆಯುವುದು. ಇದರ ದುಷ್ಪರಿಣಾಮ ಇಂದಿನ ಪೀಳಿಗೆಗಿಂತ ಮುಂದಿನ ಪೀಳಿಗೆಗೆ ಹಾನಿಯುಂಟು ಮಾಡುತ್ತದೆ. ಕಾರಣ ಸರಕಾರ ಗಣಿದಣಿಗಳ, ಬಂಡವಾಳ ಶಾಹಿಗಳ ಒತ್ತಡಕ್ಕೆ ಒಳಗಾದರೆ ಈ ಗುಡ್ಡದ ಮರಣ ಶಾಸನ ಬರೆದಂತಾಗುವುದು. ಮತ್ತು ಲಕ್ಷಾಂತರ ಜನರ ಅನ್ನ, ನೀರು, ಶುದ್ಧ ಗಾಳಿಯನ್ನು ಕಸಿದುಕೊಂಡಂತಾಗುವುದು.

ಈ ಗುಡ್ಡದಲ್ಲಿ ಗಣಿಗಾರಿಕೆ ಯಜ್ಞ ಪ್ರಾರಂಭವಾದರೆ ಈ ಪರಿಸರದಲ್ಲಿನ ಆದಿವಾಸಿಗಳು, ಲಂಬಾಣಿ ತಾಂಡಾಗಳು, ಗ್ರಾಮಗಳು ಹೇಳು ಹೇಸರಿಲ್ಲದಂತೆ ಕಾಲಘಟ್ಟದಲ್ಲಿ ಆಹುತಿಯಾಗುತ್ತವೆ. ಈ ದೇಶದ ಯಾವ ಭಾಗದಲ್ಲಿ ಗಣಿಗಾರಿಕೆ ನಡೆದಿದೆ ಮತ್ತು ನಡೆಯುತ್ತಿದೆ ಅಲ್ಲಿರುವ ಕೋಟಿ ಕೋಟಿ ಆದಿವಾಸಿಗಳು ಗಣಿಮಾಲೀಕರಿಂದ ಶೋಷಣೆಗೆ ಒಳಗಾಗಿದ್ದಾರೆ. ಅಲ್ಲಿ ಸರಕಾರ ಬಂಡವಾಳಶಾಹಿಗಳಿಗೆ ಗಣಿ-ದಣಿಗಳಿಗೆ ರತ್ನಗಂಬಳಿ ಹಾಸಿ ಆದಿವಾಸಿಗಳ ಬದುಕನ್ನು ಕಿತ್ತುಕೊಂಡಿದೆ. ಬಂಡವಾಳಶಾಹಿಗಳ ಜೊತೆಗೆ ಪ್ರಭುತ್ವ ಮತ್ತು ಅದರ ಬಲಿಷ್ಠ ಬಾಹುಗಳಾದ ಪೋಲೀಸರು ಅಲ್ಲಿಯ ನಿವಾಸಿಗಳ ಮೇಲೆ ಬೆನ್ನುಬೀಳುತ್ತಾರೆ. ಅವರನ್ನು ಅಡವಿಗಳಿಂದ ಒಕ್ಕಲೆಬ್ಬಿಸಿ ಅಲ್ಲಿನ ಭೂಗರ್ಭದಲ್ಲಿ ಅಡಗಿರುವ ಖನಿಜ ಸಂಪನ್ಮೂಲಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ಬಿಡಿಸಿಕೊಡುವುದು ಸರಕಾರದ ಗುಪ್ತಕಾರ್ಯಸೂಚಿ. ಅದು ಈಗ ಗೌಪ್ಯವಾಗಿ ಉಳಿದಿಲ್ಲ. ಗಣಿಗಾರಿಕೆ ಮತ್ತು ವಿಂಡಮಿಲ್ ಕಂಪನಿಗಳಿಂದ ಸಹ ಈ ಅರಣ್ಯ ಪ್ರದೇಶಕ್ಕೆ ಅಪಾಯ ಇದೆ. ಈ ಅರಣ್ಯ ಪ್ರದೇಶದಲ್ಲಿ 240 ವಿಂಡಮಿಲ್ ಹಾಕಲು ರಾಜ್ಯ ಸರಕಾರ 2004 ರಿಂದ 2008 ರವರೆಗೆ ಸುಜಲಾನ, ಎನರಕಾನ್ ಮುಂತಾದ ಖಾಸಗಿ ಕಂಪನಿಗಳಿಗೆ 820 ಎಕರೆ ಗುಡ್ಡವನ್ನು ಮತ್ತು ಕೆಪಿಸಿಎಲ್ ಕಂಪನಿಗೆ 20 ಯಂತ್ರ ಹಾಕಲು 42 ಎಕರೆ ಗುಡ್ಡವನ್ನು ಲೀಜ ನೀಡಿದೆ. ಈಗಾಗಲೇ ಬಲದೋಟಾ ಕಂಪನಿಯವರು ಈ ಪ್ರದೇಶದಲ್ಲಿ ಗಣಿಗಾರಿಕೆ ಪ್ರಾರಂಭಿಸಿದಾಗ ಇದನ್ನು ವಿರೋಧಿಸಿ ಅತ್ತಿಕಟ್ಟಿ ತಾಂಡಾ ಹಾಗೂ ಜಿಲ್ಲಾ ಬಂಜಾರ ಸಂಘದವರು ನಿರಂತರ ಹೋರಾಟ ಮಾಡಿದ್ದಾರೆ. ಈ ಹೋರಾಟಗಾರರ ಮೇಲೆ ಕಂಪನಿಯವರು ದಬ್ಬಾಳಿಕೆ ಮಾಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.

Ph : (O)(0836) 2444742 Email : deepu.cn@gmail.com

ಜನ ಸಂಗ್ರಾಮ ಪರಿಷತ

JANA SANGRAM PARISHAth (JSP)

Co-Ordinating Office:
Shri Raghvendra Kustagi, "Sudhama", Near, Dental College, Raichur.
Shri S. R. Hiremath, "Ashadeep", Jayanagar Cross, Saptapur, Dharwad- 580 001. Karnataka, India.

No 466/JSP/2017-18 ದಿ 24..03.2018

ಅಧ್ಯಕ್ಷರು
ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ
ಬೆಂಗಳೂರು ಅವರಿಗೆ

ವಿಷಯ: 80 ಸಾವಿರ ಎಕರೆ ವಿಸ್ತೀರ್ಣದ 63 ಕಿಲೋ ಮೀಟರ ಉದ್ದದ ಉತ್ತರ ಕರ್ನಾಟಕದ ಪಶ್ಚಿಮಘಟ್ಟ ಮತ್ತು ಮಧ್ಯ ಕರ್ನಾಟಕ ಹೃದಯ ಭಾಗ ಎಂದು ಖ್ಯಾತಿ ಪಡೆದ ಕಪ್ಪತ್ತಗುಡ್ಡವನ್ನು *"ಸಂರಕ್ಷಿತ ಅರಣ್ಯ ಪ್ರದೇಶ"*/ [illegible] ವೆಂದು ಘೋಷಣೆ ಮಾಡಲು ಆಗ್ರಹ.

ಮಾನ್ಯರೇ,

ಗದಗ ಜಿಲ್ಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ 63 ಕಿಲೋ ಮೀಟರ ಉದ್ದಕ್ಕೆ ಕವಲು ಕವಲಾಗಿ ಹರಡಿಕೊಂಡಿರುವ, ಚಿಕ್ಕ-ದೊಡ್ಡ ಗುಡ್ಡದ ಸಾಲುಗಳೇ ಕಪ್ಪತ್ತಗುಡ್ಡಗಳು. ಈ ಗುಡ್ಡದ ಸರಣಿ ಗದಗ ತಾಲೂಕ ಬಿಂಕದಕಟ್ಟಿ ಗ್ರಾಮದಿಂದ ಮುಂಡರಗಿ ತಾಲೂಕಿನ ಶಿಗಟಾಲೂರ ಕ್ಷೇತ್ರ – ಬಳ್ಳಾರಿ ಜಿಲ್ಲಾ ಹೂವಿನ ಹಡಗಲಿಯವರೆಗೆ ಹಸಿರಿನಿಂದ ಬಾಚಿಕೊಂಡಿದೆ. ಡೋಣಿ ಗ್ರಾಮದಿಂದ 4 ಕಿಲೋ ಮೀಟರಗಳಷ್ಟು ಅಂತರದಲ್ಲಿ ಬೃಹದಾಕಾರದ ಶಿಖರಗಳನ್ನೊಳಗೊಂಡು ಬೆಟ್ಟಗಳ ಸಮುಚ್ಚಯವೇ ಕಪ್ಪತ್ತಗುಡ್ಡ ಎಂಬುದು ವಾಡಿಕೆಯಲ್ಲಿದೆ. ಹಿಂದೆ ಈ ಪ್ರದೇಶದಲ್ಲಿ ಬಹು ಸಂಖ್ಯೆಯಲ್ಲಿ ವಾರಿವಾಳಗಳು ನೆಲೆಸುತ್ತಿದ್ದರಿಂದ ಇದಕ್ಕೆ "ಕಪೋತಗಿರಿ" ಹೆಸರು ವಾಡಿಕೆಯಲ್ಲಿ ಬಂದಿರುತ್ತದೆ. ಕಪ್ಪತ್ತಮಲ್ಲಯ್ಯ, ಗಾಳಿಗುಂಡಿ ಬಸವಣ್ಣ, ನಂದಿವೇರಿಮಠ, ಶ್ರೀಶೈಲ ಮಲ್ಲಿಕಾರ್ಜುನಮಠ, ಗೋಲಗೇರಿಮಠ, ಮಹಾಲಿಂಗೇಶ್ವರಮಠ ಇಲ್ಲಿನ ಪುಣ್ಯಕ್ಷೇತ್ರಗಳಾಗಿರುತ್ತವೆ. ಅಲ್ಲದೇ ಇಲ್ಲಿ ಬಹಳ ಮಹತ್ವದ ಔಷಧೀಯ ಮಹತ್ವಗಳಾದ ಸಂಜೀವಿನಿ ಕೊಳ್ಳ, ಅತ್ತಿಕಟ್ಟಿ, ಕಲ್ಪವೃಕ್ಷ ವನ ಮತ್ತು ಕಡಹೊಳ ಇರುತ್ತವೆ. ಈ ಅರಣ್ಯದ ಒಟ್ಟು ಕ್ಷೇತ್ರ 80,000 ಎಕರೆಗಿಂತ ಅಧಿಕವಿದೆ. ಈ ಗುಡ್ಡ ಜಿಲ್ಲೆಯ ಉತ್ತರದಿಂದ ದಕ್ಷಿಣದವರೆಗೆ 60 ರಿಂದ 65 ಕಿಲೋ ಮೀಟರ ಉದ್ದಕ್ಕೆ ಹರಡಿಕೊಂಡಿದೆ. ಈ ಗುಡ್ಡಗಳು ಸುಮಾರು 2 ಕಿಲೋ ಮೀಟರದಿಂದ 10 ಕಿಲೋ ಮೀಟರಗಳ ಅಗಲವಾಗಿವೆ. ಅತಿ ಎತ್ತರವಾದ ಈ ಗುಡ್ಡವು ಸಮುದ್ರಮಟ್ಟದಿಂದ ಸುಮಾರು 3200 ಅಡಿ ಎತ್ತರದಲ್ಲಿದೆ. ಇದು ಮಧ್ಯ ಕರ್ನಾಟಕದ ಜೀವನಾಡಿಯಾಗಿದೆ, ಕೆಂಪು ಮಿಶ್ರಿತ ಮಣ್ಣು ಮತ್ತು ವಿವಿಧ ಸಮೂಹೆಯ ಬೆಟ್ಟಗಳ ಸಂಗಮವಾಗಿರುವ ಇದು ಪುಣ್ಯಮರುಷರ ತಪೋಭೂಮಿಯಾಗಿ ಸಹ ಹೆಸರು ಮಾಡಿದೆ.

ಕಪ್ಪತ್ತಗುಡ್ಡ ಭೂಮಿಯಲ್ಲಿ 300 ಕ್ಕೂ ಹೆಚ್ಚು ಜಾತಿಯ ಔಷಧಿ ಸಸ್ಯಗಳು ಇವೆ,ಎಂದು ರಾಷ್ಟ್ರೀಯ ಆಯುರ್ವೇದಿಕ ಸಂಶೋಧನಾ ಸಂಸ್ಥೆ ಜಯನಗರ, ಬೆಂಗಳೂರು ಇದು ವರದಿ ಮಾಡಿದೆ. ಈ ಸಸ್ಯಗಳಲ್ಲಿ ಕರಿಲೆಕ್ಕಿ, ಅಶ್ವಗಂಧ, ಚದುರಂಗ, ಅಮೃತ ಬಳ್ಳಿ, ಮುಂತಾದವುಗಳನ್ನು ಪತ್ತೆಸರಿಸಬಹುದು. ಇಲ್ಲಿಯ ಔಷಧೀಯ ಸಸ್ಯಗಳನ್ನು ಮಣಿ, ಬೆಂಗಳೂರು,ಹೈದರಾಬಾದ ಮತ್ತು ಉತ್ತರ ಭಾರತದ ಆಯುರ್ವೇದ ತಜ್ಞರು ತೆಗೆದುಕೊಂಡು ಹೋಗುತ್ತಾರೆ. ಅದ್ದರಿಂದ ಇಂದಿಗೂ ಔಷದಿ ಸಸ್ಯಗಳ ಶಾಮಲೆಯಾಗಿದೆ. ಈ ಔಷಧೀಯ ಸಸ್ಯಗಳ ಸಂರಕ್ಷಣೆ ಮತ್ತು ಸಂಶೋಧನೆಯಾಗಬೇಕಾಗಿದೆ. ಕಪ್ಪತ್ತಗುಡ್ಡ ಬೇರಿನ ಸಂಪತ್ತಿನ ಆಗರವೇ ಆಗಿದೆ. ಈ ಗುಡ್ಡದಲ್ಲಿ ಗಣಿಗಾರಿಕೆ ಯಜ್ಞ ಪ್ರಾರಂಭವಾದರೆ ಈ ಪರಿಸರದಲ್ಲಿನ ಆದಿವಾಸಿಗಳು, ಲಂಬಾಣಿ ತಾಂಡಾಗಳು, ಗ್ರಾಮಗಳು ಹೇಳು ಹೆಸರಿಲ್ಲದಂತೆ ಕಾಲಘಟ್ಟದಲ್ಲಿ ಆಹುತಿಯಾಗುತ್ತವೆ. ಈ ದೇಶದ ಯಾವ ಭಾಗದಲ್ಲಿ ಗಣಿಗಾರಿಕೆ ನಡೆದಿದೆ ಮತ್ತು ನಡೆಯುತ್ತಿದೆ ಅಲ್ಲಿರುವ ಕೋಟಿ ಕೋಟಿ ಆದಿವಾಸಿಗಳು ಗಣಿಮಾಲೀಕರಿಂದ ಶೋಷಣೆಗೆ ಒಳಗಾಗಿದ್ದಾರೆ. ಅಲ್ಲಿ ಸರಕಾರ ಬಂಡವಾಳಶಾಹಿಗಳಿಗೆ ಗಣಿ-ದಣಿಗಳಿಗೆ ರತ್ನಗಂಬಳಿ ಹಾಸಿ ಆದಿವಾಸಿಗಳ ಬದುಕನ್ನು ಕಿತ್ತುಕೊಂಡಿದೆ. ಬಂಡವಾಳಶಾಹಿಗಳ ಜೊತೆಗೆ ಪ್ರಭುತ್ವ ಮತ್ತು ಅದರ ಬಲಿಷ್ಠ ಬಾಹುಗಳಾದ ಪೋಲೀಸರು ಅಲ್ಲಿಯ ನಿವಾಸಿಗಳ ಮೇಲೆ ಬೆನ್ನುಬೀಳುತ್ತಾರೆ. ಅವರನ್ನು ಅಡವಿಗಳಿಂದ ಒಕ್ಕಲೆಬ್ಬಿಸಿ ಅಲ್ಲಿನ ಭೂಗರ್ಭದಲ್ಲಿ ಅಡಗಿರುವ ಖನಿಜ ಸಂಪನ್ಮೂಲಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ಬಿಡಿಸಿಕೊಡುವುದು ಸರಕಾರದ ಗುಪ್ತಕಾರ್ಯಸೂಚಿ. ಅದು ಈಗ ಗೌಪ್ಯವಾಗಿ ಉಳಿದಿಲ್ಲ. ಗಣಿಗಾರಿಕೆ ಮತ್ತು ವಿಂಡಮಿಲ್ ಕಂಪನಿಗಳಿಂದ ಸಹ ಈ ಅರಣ್ಯ ಪ್ರದೇಶಕ್ಕೆ ಅಪಾಯ ಇದೆ. ಈ ಅರಣ್ಯ ಪ್ರದೇಶದಲ್ಲಿ 240 ವಿಂಡಮಿಲ್ ಹಾಕಲು ರಾಜ್ಯ ಸರಕಾರ 2004 ರಿಂದ 2008 ರವರೆಗೆ ಸುಜಲಾನ, ಎನರಕಾನ್ ಮುಂತಾದ ಖಾಸಗಿ ಕಂಪನಿಗಳಿಗೆ 820 ಎಕರೆ ಗುಡ್ಡವನ್ನು ಮತ್ತು

ಕೆಪಿಸಿಎಲ್ ಕಂಪನಿಗೆ 20 ಯಂತ್ರ ಹಾಕಲು 42 ಎಕರೆ ಗುಡ್ಡವನ್ನು ಲೀಜ ನೀಡಿದೆ. ಈ ನಿಟ್ಟಿನಲ್ಲಿ ಕಪ್ಪತ್ತಗುಡ್ಡ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳು ಕಪ್ಪತ್ತಗುಡ್ಡ ಸಂರಕ್ಷಣೆಗಾಗಿ ಠರಾವು ಮಾಡುತ್ತಿವೆ ಮತ್ತು ಈ ಭಾಗದ ಮಠಾಧೀಶರು, ಜನಪ್ರತಿನಿಧಿಗಳು, ಪರಿಸರವಾದಿಗಳು, ಗ್ರಾಮಸ್ಥರು, ರೈತರು, ಕಾರ್ಮಿಕರು, ಸಾರ್ವಜನಿಕರು, ಸಂಘ-ಸಂಸ್ಥೆಗಳು, ತಾಂಡಾದ ಜನರು, ವಿದ್ಯಾರ್ಥಿಗಳ ಎಲ್ಲರ ಒಕ್ಕೋರಲಿನ ಬೇಡಿಕೆ ಕಪ್ಪತ್ತಗುಡ್ಡ ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಬೇಕೆಂದು. 80000 ಎಕರೆ ರಕ್ಷಿತಾ ಅರಣ್ಯ ಪ್ರದೇಶದಲ್ಲಿ 44000 ಎಕರೆ ಪ್ರದೇಶವನ್ನು ದಿನಾಂಕ : 19-12-2015 ರಂದು ಸರಕಾರ ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿ ಆದೇಶ ಹೊರಡಿಸಿತ್ತು. ಮುಂದೆ ಸರಕಾರ ತಾನು ಹೊರಡಿಸಿದ ಈ ಆದೇಶವನ್ನು ಉಳಿಸಿಕೊಳ್ಳದೇ ದಿನಾಂಕ : 04-11-2016 ರಂದು ಮತ್ತೊಂದು ಆದೇಶ ಹೊರಡಿಸಿ ಈ 44000 ಎಕರೆ ಅರಣ್ಯ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶದಿಂದ ಕೈಬಿಟ್ಟಿದೆ ಎಂದು ಆದೇಶ ಮಾಡಿದೆ. ಈ ಎಲ್ಲ ಬೆಳವಣಿಗೆ ಮೂಲ ಕಾರಣ ಗಣಿ ಮತ್ತು ವಿಂಡ ಮಿಲ್ ಕಂಪನಿಗಳ ಮಾಲೀಕರ ಒತ್ತಡ ಎನ್ನಬಹುದು. ಕಾರಣ ಸರಕಾರ ವಿಳಂಬ ಧೋರಣೆ ತೋರದೆ ದಿನಾಂಕ 04-11-2016 ರಂದು ಹೊರಡಿಸಿದ ಆದೇಶವನ್ನು ಹಿಂದಕ್ಕೆ ಪಡೆದು 17872 ಹೆಕ್ಟೇರ್ (44143 ಎಕರೆ) ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶ/ [illegible] ಪುನಃ ಘೋಷಿಸಬೇಕೆಂದು ಬಳ್ಳಾರಿಯ ಅಕ್ರಮ ಗಣಿಗಾರಿಕೆ ವಿರುದ್ಧ ಸುಪ್ರೀಂ ಕೋರ್ಟನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೂಕದ್ದಮೆ ಹಾಕಿ ನಿಯಂತ್ರಿಸುವಲ್ಲಿ ಯಶಸ್ಸು ಸಾಧಿಸಿದ ಸಮಾಜ ಪರಿವರ್ತನ ಸಮುದಾಯ, ಜನ ಸಂಗ್ರಾಮ್ ಪರಿಷತ್(ಜೆ.ಎಸ್.ಪಿ) ಹಾಗೂ ಸಮಾನ ಮನಸ್ಕ ಸಂಸ್ಥೆಗಳಾದ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣಾ ಕ್ರಿಯಾ ಸಮಿತಿ (ಎ.ಸಿ.ಪಿ.ಎನ್.ಆರ್), ಗ್ರಾಮ ಗಣರಾಜ್ಯ ವೇದಿಕ (ಜಿ.ಜಿ.ವ್ಹಿ) ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಸಮಿತಿ (ಎನ್.ಸಿ.ಪಿ.ಎನ್.ಆರ್) ಇತ್ಯಾದಿಗಳ ಸಂಯುಕ್ತವಾಗಿ ಈ ಮೂಲಕ ಒತ್ತಾಯಿಸುತ್ತೇವೆ. "ಗಣಿಗಾರಿಕೆಯಿಂದ ಕಪ್ಪತ್ತಗುಡ್ಡ ರಕ್ಷಿಸಿ" ನಮ್ಮ ನಾಡು ಉಳಿಸಿ.

ಧನ್ಯವಾದಗಳೊಂದಿಗೆ,

ಬಸವಪ್ರಭು ಹೊಸಕೇರಿ	ಆರ್ ವಿ ನಾಗಮೂಳೆ	ಆಯ್ ಜಿ ಮಲ್ಲಿ	ಎಸ್ ಎ ಮಕ್ಕಾಬಿ
ಮಾಜಿ ಅಧ್ಯಕ್ಷರು ಸಪಸ	ಮಾಜಿ ಉಪಾಧ್ಯಕ್ಷರು, ಸಪಸ	ಸದಸ್ಯರು ಜ ಸಂ ಪ	ಜ ಸಂ ಪ

S.A. Makkabi

9449865021.

* ಅಡ್ಡಿಯಿಲ್ಲ ಜನಗಳಿಗೆ ಕೆಲಸ ಹಿಂದೆ ಪರಿಸರ ಉಳಿವಿಕೆಗಾಗಿ ಮಾಡಿದ ಚಳುವಳಿಗೆ ಬಲ್ಲೆನು ಜಿಲ್ಲೆಯಲ್ಲಿ ಅರಣ್ಯದಲ್ಲಿ ಅನಾಗರಿಕತೆಯಿಂದ ಕೆಲವು ಉಳ್ಳವರು ಬೆಳೆಸಿರುವುದನ್ನು ಕಂಡಿದ್ದೇನೆ.

ಕರ್ನಾಟಕ ಪ್ರದೇಶ ಲಂಬಾಣಿ ಬಂಜಾರ ಕಲ್ಯಾಣ ಸಂಘ (ರಿ)

ವಿಳಾಸ : ಸೇವಾಲಾಲ್ ನಗರ ಗದಗ

ದಿನಾಂಕ : 24-03-2018

ಗೆ,
ಅಧ್ಯಕ್ಷರು
ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ
ಬೆಂಗಳೂರ
ಮಾನ್ಯರೇ,

ವಿಷಯ : – ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮವನ್ನಾಗಿ ಮಾಡದೇ ಇರುವ ಕುರಿತು.

ಗದಗ ಜಿಲ್ಲೆಯ ಕಪ್ಪತ್ತಗುಡ್ಡದ ಸಾಲುಗಳನ್ನು ನೋಡುವದೇ ಕಣ್ಣಿಗೊಂದು ಹಬ್ಬ. ಕಪ್ಪತ್ತಗುಡ್ಡದ ಅರಣ್ಯ ಪರದೇಶವು ನೈಸರ್ಗಿಕವಾಗಿ ಬೆಳೆದು ಅತ್ಯಮುಲ್ಯವಾದ ಔಷಧಿಯ ಸಸ್ಯಗಳನ್ನೊಳಗೊಂಡಿರುತ್ತದೆ. ಬಹು ಅಪರೂಪದ ನೂರಾರು ಔಷಧಿಗಳ ಸಸ್ಯಗಳ ಬೀಡಾಗಿದೆ. ಇದು ಉತ್ತರ ಕರ್ನಾಟಕದಲ್ಲಿಯೇ ಅತೀ ಉದ್ದವಾದ ಪರ್ವತ ಶ್ರೇಣಿಗಳನ್ನೊಳಗೊಂಡಿರುತ್ತದೆ. ಈ ಗುಡ್ಡವು ಗದಗ, ಮುಂಡರಗಿ, ಮತ್ತು ಶಿರಹಟ್ಟಿ ತಾಲೂಕಿನಾದ್ಯಾಂತ ಹರಡಿದೆ. ಬಿಂಕದಕಟ್ಟಿಯಿಂದ ಪ್ರಾರಂಭವಾಗಿ ಶಿಂಗಟಾಲೂರ ವರೆಗೆ ಸುಮಾರು 64ಕಿ.ಮೀ ಉದ್ದ ಹಾಗೂ ಸುಮಾರು 2ಕಿ.ಮೀ ಯಿಂದ 10ಕಿ.ಮೀ ಗಳಷ್ಟು ಅಗಲವಾದ ಗುಡ್ಡಗಳ ಶ್ರೇಣಿಯನ್ನು ಒಳಗೊಂಡಿರುತ್ತದೆ. ಕಪ್ಪತ್ತಗುಡ್ಡ ಸುಮಾರು 32761.756 ಹೆ. ಅಂದರೆ ಸುಮಾರು 80,000 ಎಕರೆಗಿಂತಲೂ ಅಧಿಕವಿದೆ. ಇದನ್ನು ಉತ್ತರಕರ್ನಾಟಕದ ಸೈಹಾದ್ರಿ ಎಂತಲೂ ಕರೆಯುತ್ತಾರೆ. ಕಪ್ಪತ್ತಗುಡ್ಡದ ಮಹತ್ವದ ಹಿನ್ನಲೆಯಲ್ಲಿ ಅಂದಿನ ಬ್ರಿಟಿಷ್ ಸರ್ಕಾರ 1882 ಬಾಂಬೆ ಗೇಜೆಟ್‌ದಲ್ಲಿ ಈ ಗುಡ್ಡವನ್ನು ರಕ್ಷಿತ ಅರಣ್ಯ ಪ್ರದೇಶ ಅಂತಾ ಘೋಷಿಸಿ ರಕ್ಷಣೆ ಮಾಡಿತ್ತು.

ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮ ಅಂತ ಘೋಷಿಸಲು ಶ್ರೀ ಅನಿಲ ಕುಂಬ್ಳೆ ಅವರ ನೇತೃತ್ವದಲ್ಲಿ ದಿನಾಂಕ 21-02-2013 ಮುಂಡರಗಿ ತಾಲೂಕ ಡಂಬಳದಲ್ಲಿ ಸಾರ್ವಜನಿಕ ಸಭೆ ಏರ್ಪಟ್ಟಿತ್ತು ಆ ಸಭೆಯಲ್ಲಿ ಸ್ಥಳೀಯರು, ದಲಿತರು, ರೈತಾಪಿವರ್ಗದವರು ಮತ್ತು ಇತರರು ಸಾವಿರಾರು ವರ್ಷಗಳಿಂದ ಕಪ್ಪತ್ತಗುಡ್ಡದ ಅಡಿಯಲ್ಲಿ ಬದುಕುತ್ತಿದ್ದಾರೆ. ಆ ಭಾಗದಲ್ಲಿ ನೂರಾರು ಹಳ್ಳಿಗಳಿವೆ ಲಕ್ಷಾಂತರ ಜನರ ಜನಸಂಖ್ಯೆ ಇದೆ, ಸಾವಿರಾರು ಜಾನುವಾರುಗಳಿವೆ. ಬಗರ್ ಹುಕುಮ್ ಸಾಗುವಳಿದಾರರಿದ್ದಾರೆ. ಕಪ್ಪತ್ತಗುಡ್ಡ ಒಮ್ಮೆ ವನ್ಯಜೀವಿಧಾಮ ಎಂದು ಘೋಷಣೆ ಆದರೆ ಅಲ್ಲೆ ಬದುಕುತ್ತಿರುವ ಜನರ ಸ್ಥಿತಿ ದುಸ್ಥಿತಿ ಆಗುತ್ತದೆ. ಆ ಭಾಗದಲ್ಲಿ ಬೆಂಕಿಪಟ್ಟಣವನ್ನೂ ಕೂಡಾ ತೆಗೆದುಕೊಂಡು ಹೋಗುವ ಹಾಗಿಲ್ಲ ಮತ್ತು ಇಲ್ಲಿರುವ ತಾಂಡಾಗಳು, ಹಾಡಿ – ಹಟ್ಟಿಗಳು ಇನ್ನು ಕಂದಾಯ ಗ್ರಾಮವಾಗಿಲ್ಲ ಹಾಗಾಗಿ ಜನರನ್ನು ಒಕ್ಕಲೇಬ್ಬಿಸಿ ವನ್ಯಧ್ಯಾಮ ಮಾಡುವದಾದರೆ ಬೇಡಾ ಎಂದು ಇದನ್ನು ಮನಗಂಡು ಸರ್ಕಾರ ದಿನಾಂಕ 19-12-2015 ರಂದು ಸಂರಕ್ಷಿತ ಅರಣ್ಯ ಪ್ರದೇಶ ಎಂದು ಘೋಷಣೆ ಮಾಡಿತು ಇದಕ್ಕೆ ನಾವೆಲ್ಲರೂ ಸ್ವಾಗತಿಸಿದೆವು.

ಕಪ್ಪತ್ತಗುಡ್ಡವನ್ನು ರಕ್ಷಿತ ಅರಣ್ಯ ಪ್ರದೇಶದಿಂದ ಸಂರಕ್ಷಿತ ಮಾಡಬೇಕೆಂದು ಹಲವಾರು ಬಾರಿ ಹೋರಾಟ ಮಾಡಿದ ಮೇಲೆ ಸಂರಕ್ಷಿತವಾಗಿದೆ. ಆದರೆ ಸರ್ಕಾರ ಇತ್ತ ಗಮನ ಹರಿಸುತ್ತಿಲ್ಲ ಕಾವಲುಗಾರರನ್ನಾ ಹೆಚ್ಚಿಗೆ ಮಾಡಿ ಎಂದರೆ ಅದನ್ನು ಮಾಡುತ್ತಿಲ್ಲ, ಬೃಹತ್ ಮಟ್ಟದ ಗಾಳಿ ವಿದ್ಯುತ್ ಕಂಬಗಳಿಂದ ಘರ್ಷಣೆಯಾಗಿ ಹಲವಾರು ಬಾರಿ ಬೆಂಕಿ ಬಿದ್ದಿದೆ ಅವರುಗಳ ಮೇಲೆ ಕ್ರಮ ಕೈಗೊಂಡಿಲ್ಲ. ಅತ್ಯಮುಲ್ಯ ಔಷಧಿಯ ಸಸ್ಯಗಳಿದ್ದು ಅವುಗಳಿಗೂ ರಕ್ಷಣೆಮಾಡುತ್ತಿಲ್ಲ ಏನೂ ಕ್ಯಾರೆ ಎನ್ನದ ಸರ್ಕಾರ ಜನರನ್ನು ಒಕ್ಕಲೇಬ್ಬಿಪ ವನ್ಯಜೀವಿಧಾಮ ಮತ್ತೇ ಏಕೆ ಮಾಡುತ್ತಿದೆ. ಇದಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ. ಸರ್ಕಾರ ವನ್ಯಧಾನ ಮಾಡಲು ಮುಂದಾದರೆ ಜಿಲ್ಲಾದ್ಯಾಂತ, ರಾಜ್ಯಾದ್ಯಾಂತ ಬೃಹತ್ ಪ್ರತಿಭಟನೆ ಮಾಡಲಾಗುವದು ಇದಕ್ಕೆ ಸರ್ಕಾರವೇ ನೇರ ಹೋಣೆಯಾಗುತ್ತದೆ ಎಂದು ಪ್ರತಿಭಟನಾ ಪೂರ್ವಕವಾಗಿ ಸಲ್ಲಿಸುತ್ತಿರುವ ಮನವಿ.

ಶುಭಹಾರೈಕೆಯೊಂದಿಗೆ

ರವಿಕಾಂತ ಅಂಗಡಿ
ಅಧ್ಯಕ್ಷರು
ಕರ್ನಾಟಕ ಪ್ರದೇಶ ಲಂಬಾಣಿ ಬಂಜಾರ ಕಲ್ಯಾಣ ಸಂಘ (ರಿ)

9341065387

ನೇಚರ್ ರಿಸರ್ಚ್ ಸೆಂಟರ್®
NATURE RESEARCH CENTER
Recognized by Animal Welfare Board of India
RESEARCH | DEVELOPMENT | GUIDANCE | PUBLICATIONS

Ref. No.

Date: 24.03.18

ಗೆ,

ಅಧ್ಯಕ್ಷರು
ವಿಧಾನ ಪರಿಷತ್ತಿನ ಭರವಸೆ ಸಮಿತಿ
ಬೆಂಗಳೂರು

ವಿಷಯ: ಕಪ್ಪತಗುಡ್ಡವನ್ನು ವನ್ಯಧಾಮವೆಂದು ಘೋಷಿಸುವುದರ ಕುರಿತು

ಮಾನ್ಯರೆ,

ಧಾರವಾಡದ ನೇಚರ್ ರಿಸರ್ಚ ಸೆಂಟರ್, ಪರಿಸರದ ಮತ್ತು ನೈಸರ್ಗಿಕ ಸಂಪತ್ತುಗಳ ಸಂರಕ್ಷಣೆಗಾಗಿ ದುಡಿಯುತ್ತಿರುವ ಒಂದು ಸಂಸ್ಥೆಯಾಗಿದ್ದು, ಅಮೂಲ್ಯ ಸಸ್ಯಸಂಕುಲ ಹಾಗೂ ಜೀವಿಸಂಕುಲವಿರುವ ಕಪ್ಪತಗುಡ್ಡವನ್ನು ಸೆಕ್ಷನ್ 18ರ ಪ್ರಕಾರ ವನ್ಯಧಾಮ ಎಂದು ಘೋಷಿಸಬೇಕೆಂದು ತಮ್ಮಲ್ಲಿ ವಿನಂತಿಪೂರ್ವಕವಾಗಿ ಕೋರಿಕೊಳ್ಳುತ್ತದ್ದೇವೆ. ಮಾನ್ಯರಾದ ತಾವು ಕಪ್ಪತಗುಡ್ಡದ ಜೀವಿಸಂಕುಲದ ರಕ್ಷಣೆಗಾಗಿ ಅಗತ್ಯವಿರುವ ವನ್ಯಧಾಮ ಘೋಷಣೆಗೆ ಬೇಕಾದ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವಿರೆಂದು ಆಶಿಸುತ್ತೇವೆ. ಧನ್ಯವಾದಗಳೊಂದಿಗೆ

ಅಧ್ಯಕ್ಷರು

ನೇಚರ್ ರಿಸರ್ಚ ಸೆಂಟರ್
ಧಾರವಾಡ

ಪರಿಸರವಾದಿಗಳ ಒಕ್ಕೂಟ

ಗದಗ-582101

ದಿನಾಂಕ : 24-03-2018

ಗೌರವನೀಯ ಮಾನ್ಯ ಶ್ರೀ ಬಸವರಾಜ ಹೊರಟ್ಟಿಯವರು
ಅಧ್ಯಕ್ಷರು, ಸದನ ಸಮಿತಿ
ಕರ್ನಾಟಕ ಸರಕಾರ
ಬೆಂಗಳೂರು ಅವರಿಗೆ

ವಿಷಯ : ಕರ್ನಾಟಕ ಸರಕಾರ ಗದಗ ಜಿಲ್ಲೆಯ ಕಪ್ಪತ್ತಗುಡ್ಡದ 17,872.248 ಹೆಕ್ಟರ್ ಪ್ರದೇಶವನ್ನು ಸಂರಕ್ಷಿತ ಪ್ರದೇಶ ಎಂದು ಘೋಷಣೆಮಾಡಿದ್ದನ್ನು ಮುಂದುವರೆಸುವ ಬಗ್ಗೆ ಮತ್ತು ಅಲ್ಲಿ ಗಣಿಗಾರಿಕೆ ನಿಷೇಧಿಸುವ ಬಗ್ಗೆ.

ಮಾನ್ಯರೆ,

ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶವಾಗಿ ಉಳಿಯಬೇಕು. ಅಲ್ಲಿ ಗಣಿಗಾರಿಕೆ ನಡೆಯಬಾರದು ಮತ್ತು ಕಪ್ಪತ್ತಗುಡ್ಡವನ್ನು ಒತ್ತುವರಿ ಮಾಡಲು ಅವಕಾಶ ಮಾಡಿಕೊಡಬಾರದೆಂದು ಹಾಗೂ ಹೈಕೋರ್ಟಿನಲ್ಲಿ ಗಣಿಗಾರಿಕೆ ಮಾಡಲು ರಾಮಗಡ ಮಿನರಲ್ಸ್ / ಬಲ್ಡೋಟಾ ಕಂಪನಿ ಹಾಗೂ ಇತರೆ ಕಂಪನಿಗಳು ಗಣಿಗಾರಿಕೆ ಮಾಡಲು ಅವಕಾಶ ಕೋರಿ ರಿಟ್ ಪಿಟಿಷನ್ ನಂ. 25212/2017 ದಾಖಲಿಸಿದ್ದು, ಅಲ್ಲಿ ಸರಕಾರದ ವಕೀಲರು ಸರಿಯಾಗಿ ಹಾಜರಾಗಿ ಈ ಕೇಸನಲ್ಲಿ ಗಣಿ ಕಂಪನಿಗಳು ಯಶಸ್ವಿಯಾಗದಂತೆ ನೋಡಿಕೊಳ್ಳುವುದು ಅಗತ್ಯವಿದೆ.

ಕಾರಣ ಕಪತ್ತಗುಡ್ಡ ನಮ್ಮ ಈ ಭಾಗದ ಕಲ್ಪವೃಕ್ಷವಿದ್ದಂತೆ ಮತ್ತು ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಪ್ರಸಿದ್ಧಿಯನ್ನು ಪಡೆದಿದೆ. ಕಪ್ಪತ್ತಗುಡ್ಡ ಉತ್ತರ ಕರ್ನಾಟಕದ ಜೀವನಾಡಿಯಾಗುತ್ತದೆ. ಗದಗ ತಾಲೂಕಿನ ಜಂಕದಕಟ್ಟಿಯಿಂದ-ಮುಂಡರಗಿ ತಾಲೂಕಿನ ಶಿಂಗಟಾಲೂರ ಕ್ಷೇತ್ರದವರೆಗೆ ಹಬ್ಬಿದ ಈ ಕಪ್ಪತ್ತಗುಡ್ಡ ಒಟ್ಟು 63 ಕಿ.ಮೀ. ಉದ್ದವಿರುತ್ತದೆ. ಸಮುದ್ರದ ಮಟ್ಟದಿಂದ 2700 ಅಡಿ ಎತ್ತರದಲ್ಲಿದೆ. ಕೆಂಪು ಮಿಶ್ರಿತ ಮಣ್ಣು ಮತ್ತು ವಿವಿಧ ನಮೂನೆಯ ಬೆಟ್ಟಗಳ ಸಂಗಮವಾಗಿರುವ ಇದು ಪುಣ್ಯ ಪುರುಷರ ತಪೋಭೂಮಿಯಾಗಿ ಹೆಸರು ಮಾಡಿದೆ.

ಎಪ್ಪತ್ತು ಗಿರಿಗಿಂತ ಕಪ್ಪತ್ತಗಿರಿ ನೋಡು, ಕಣ್ಣಿದ್ದಾವ ಕನಕಗಿರಿ ನೋಡಬೇಕು – ಕಾಲಿ ಇದ್ದಾವ ಕಪ್ಪತ್ತಗಿರಿ ನೋಡಬೇಕು ಎಂದು ಹೇಳುವ ಯುಕ್ತಿಗಳು ಕಪ್ಪತ್ತಗುಡ್ಡದ ಹಿರಿಮೆಯನ್ನು ಸಾರಿ ಹೆಳುತ್ತವೆ. ಕಪ್ಪತ್ತಗುಡ್ಡದ ಮಣ್ಣಿನಲ್ಲಿ ಜಿನ್ನವಿದೆ, ಸಸ್ಯಗಳಲ್ಲಿ ಔಷಧೀಯ ಗುಣವಿದೆ, ಗಾಳಿಯಲ್ಲಿ ವಿದ್ಯುತ್ ಇದೆ. ಈ ಪರಿಸರದಲ್ಲಿ ಮಹಾ ತಪಸ್ವಿಗಳ ಶಕ್ತಿ ಇದೆ. ದಕ್ಷಿಣದ ಕಾಶಿ ಇದು ಔಷಧಿ ಸಸ್ಯಗಳ ರಾಶಿ ಎಂದು ಕರೆಯಿಸಿಕೊಳ್ಳುವ ಕಪ್ಪತ್ತಗುಡ್ಡ ಔಷಧಿ ಸಸ್ಯಗಳ ಖಜಾನೆಯಾಗಿದೆ.

ಕಪ್ಪತ್ತಗುಡ್ಡದಲ್ಲಿ 300 ಕ್ಕೂ ಹೆಚ್ಚು ಜಾತಿಯ ಔಷಧೀಯ ಸಸ್ಯಗಳನ್ನು ಗುರುತಿಸಲಾಗಿದೆ. ಇಲ್ಲಿಯ ಔಷಧೀಯ ಸಸ್ಯಗಳು ತುಂಬಾ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂದು ಅನೇಕ ಆಯುರ್ವೇದ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಇಂತಹ ಔಷಧಿ ಸಸ್ಯಗಳಲ್ಲಿ ಕರಿಲೆಕ್ಕಿ, ಅಶ್ವಗಂಧ, ಚದುರಂಗ, ಅಮೃತಬಳ್ಳಿ ಮುಂತಾದವುಗಳನ್ನು ಹೆಸರಿಸಬಹುದು. ಕಪ್ಪತ್ತಗುಡ್ಡದಲ್ಲಿ ಕಬ್ಬಿಣವು ಶೇ. 60 ರಿಂದ 63 ರಷ್ಟು ಅದರ ಅವಿರಾದ ಹೆಮಟೈಟ್, ಅಮೋನೈಟ್ ಮತ್ತು ಸಿಡೆರೈಟ್ ರೂಪದಲ್ಲಿದೆ.

ಇಲ್ಲಿ ಬಂಗಾರ, ಮ್ಯಾಂಗನೀಜ, ತಾಮ್ರ, ಕ್ಯಾಲ್ಸಿಯಂ ಮುಂತಾದ ಖನಿಜಗಳು ಹೇರಳವಾಗಿರುವುದರಿಂದ ಇಂತಹ ಖನಿಜ ಭರಿತ ಭೂಮಿಯಲ್ಲಿ ಬೆಳೆದ ಔಷಧೀಯ ಸಸ್ಯಗಳು

ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂದು ಅಭಿಪ್ರಾಯಪಡಲಾಗಿದೆ. ಇಲ್ಲಿಯ ಔಷಧೀಯ ಸಸ್ಯಗಳನ್ನು ಪುಣೆ, ಬೆಂಗಳೂರು, ಹೈದ್ರಾಬಾದ್ ಹೀಗೆ ಅನೇಕ ಕಡೆಗಳಿಂದ ಆಯುರ್ವೇದ ತಜ್ಞರು ಬಂದು ಸಸ್ಯಗಳನ್ನು ತೆಗೆದುಕೊಂಡು ಹೋಗುತ್ತಾರೆ. ಈ ಔಷಧೀಯ ಸಸ್ಯಗಳ ಸಂರಕ್ಷಣೆ ಮತ್ತು ಸಂಶೋಧನೆಯಾಗಿ ಜನರಿಗೆ ಉಪಯೋಗವಾಗಬೇಕಾದರೆ ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶ ಎಂದು ಘೋಷಣೆಯಾಗಲೆಬೇಕು. ಈ ಸಸ್ಯಗಳಿಂದ ಔಷಧೀಯನ್ನು ತಯಾರಿಸಿ ಜನರ ರೋಗಗಳನ್ನು ಗುಣಪಡಿಸುವ ನಿಣ್ಣನಲ್ಲಿ ಇವುಗಳು ಉಪಯೋಗವಾದರೆ ಅದಕ್ಕಿಂತ ಕೃತಜ್ಞತೆ ಮತ್ತೊಂದಿಲ್ಲ. ಆದ್ದರಿಂದ ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶವಾಗಲೇಬೇಕು.

ಕಪ್ಪತ್ತಗುಡ್ಡದಲ್ಲಿ ಏನಿದೆ? ಎಂದು ಪ್ರಶ್ನೆ ಮಾಡುವುದಕ್ಕಿಂತ ಕಪ್ಪತ್ತಗುಡ್ಡದಲ್ಲಿ ಏನಿಲ್ಲ! ಎಂದು ಕೇಳುವುದು ಸೂಕ್ತವಾಗುತ್ತದೆ. ಕಪ್ಪತ್ತಗುಡ್ಡ ಬೇರಿನ ಸಂಪತ್ತಿನ ಆಗರವೇ ಆಗಿದೆ. ಒಂದು ಮಳೆ ಬಿದ್ದರೆ ಸಾಕು ಈ ಬೇರುಗಳು ಚಿಗುರೊಡೆದು ನಳನಳಿಸುತ್ತವೆ. ಇವುಗಳಿಗೆ ಯಾವುದೇ ಆಪತ್ತುಗಳು ಬರದೇ ಸಂರಕ್ಷಣೆ ಮಾಡಿದರೆ ಅದೊಂದು ಕಾಯಿಲೆಗಳನ್ನು ಗುಣಪಡಿಸುವ ಸಂಜೀವಿನಿಯಾಗುತ್ತದೆ.

ಕಪ್ಪತ್ತಗುಡ್ಡದಲ್ಲಿ 30 ಕ್ಕೂ ಹೆಚ್ಚು ಕೆರೆಗಳು, ಹಳ್ಳಗಳು, ಝರಿಗಳು, ಕೊಳ್ಳಗಳು ಮತ್ತು ಪಡಿಗಳಿವೆ. ಇವುಗಳು ಕಪ್ಪತ್ತಗುಡ್ಡದಲ್ಲಿರುವ ಪ್ರಾಣಿ-ಪಕ್ಷಿಗಳಿಗೆ ನೀರಿನ ದಾಹವನ್ನು ಹಿಂಗಿಸುತ್ತಿದ್ದವು. ಅವು ಈಗ ಹೂಳು ತುಂಬಿ ಹೆಚ್ಚು ನೀರು ನಿಲ್ಲದಂತಾಗಿದೆ. ಇಂತಹ ಕೆರೆಗಳಲ್ಲಿ ಆಲದ ಕೆರೆ, ಬಂಗಾರಕೊಳ್ಳ, ಮಂಜಿನ ಡೋಣಿ, ಕಾರಿಸಿದ್ದಪ್ಪನ ಪಡಿ, ಹಗಲಬತ್ತಿಯ ಕೆರೆ ಇನ್ನೂ ಮುಂತಾದ ಕೆರೆಗಳನ್ನು ಪುನಶ್ಚೇತನ ಮಾಡಬೇಕಿದೆ. ಅರಣ್ಯದಲ್ಲಿರುವ ಪ್ರಾಣಿಗಳಿಗೆ ಅಲ್ಲಿಯೇ ಕುಡಿಯಲು ನೀರು ದೊರೆತರೆ, ಅವುಗಳು ನಾಡಿಗೆ ಬರುವುದು ತಕ್ಕಮಟ್ಟಿಗೆ ಕಡಿಮೆಯಾಗುತ್ತದೆ. ಈ ಭಾಗದಲ್ಲಿ 700 ರಿಂದ 1000 ಕ್ಕೂ ಹೆಚ್ಚು ನವಿಲುಗಳು, ಹೈನಾ, ಚಿರತೆ, ಸಾರಂಗ, ಜಿಂಕೆ, ಕಾಡುಹಂದಿ ಮುಂತಾದ ಪ್ರಾಣಿಗಳಿಗೆ ಆಶ್ರಯತಾಣವಾಗಿರುವ ಈ ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶ ಆಗುವುದು ಅವಶ್ಯವಾಗಿದೆ.

